ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಬ್ರಹ್ಮಾಂಡ ವಿವರಿಸಿದ ಪ್ರಗತಿಪರ ವಿಜ್ಞಾನಿ ಸ್ಟೀಫನ್ ಹಾಕಿಂಗ್

ಸಂಪುಟ 12 | ಸಂಚಿಕೆ 12 | ಮಾರ್ಚ್ 19–25, 2018 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com





ಕೇಸರಿ ಸರಕಾರವನ್ನು ಮಣಿಸಿದ ಕೆಂಬಾವುಟದ ರೈತರು



ಮೋದಿ ಮ್ಯಾಜಿಕಿನ ಕೊನೆ ?

ಮಂಗಳೂರು ಉತ್ತರ ಕ್ಷೇತ್ರ





ಪಬ್ ತೀರ್ಪು: ಮೆಲ್ಮನವಿ ಸಲ್ಲಿಸಿ

ಬಂಡವಾಳ ಹೂಡಿಕೆ ಸಮಾವೇಶಗಳು ಸಾಧಿಸಿದ್ದೇನು?



ಶ್ರೀನಿವಾಸಪುರ ಕ್ಷೇತ್ರ

ರೈತರಿಗೆ ನೀಡಿದ ಆಶ್ವಾಸನೆಗಳನ್ನು ಜಾರಿಗೊಳಿಸದಿದ್ದರೆ ಮುಂದಿನ ಹಂತದ ಹೋರಾಟ ರೈತರಿಗೇ ಸೀಮಿತವಾಗುಳಿಯುವುದಿಲ್ಲ

–ಯೆಚುರಿ ಎಚ್ಚರಿಕೆ

ಈ ಬಾರಿ ರೈತರ ಬೇಡಿಕೆಗಳ ಬಗ್ಗೆ ಲಿಖಿತ ಒಪ್ಪಂದವಾಗಿದೆ. ಸರಕಾರಕ್ಕೆ ಈಗ ಆರು ತಿಂಗಳ ಸಮಯವಿದೆ. ಅವರು ರೈತರ ಬೇಡಿಕೆಗಳನ್ನು ಈಡೇರಿಸದಿದ್ದರೆ ಪ್ರತಿಭಟನೆಯ ಮುಂದಿನ ಹಂತ ರೈತರಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ, ಅದು ಒಂದು ಸಾಮೂಹಿಕ ಆಂದೋಲನವಾಗುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಎಚ್ಚರಿಸಿದ್ದಾರೆ. ಅವರು ಮಾರ್ಚ್ 12ರಂದು ಮುಂಬೈಯಲ್ಲಿ ಯಶಸ್ವಿಯಾಗಿ ಮುಗಿದ ಮಹಾರಾಷ್ಟ್ರದ ರೈತರ ಲಾಂಗ್ ಮಾರ್ಚ್ ಬಗ್ಗೆ ಮಾತಾಡುತ್ತ ಹೀಗೆ ಹೇಳಿದ್ದಾರೆ.

ಮಹಾರಾಷ್ಟ್ರ ಸರಕಾರ ಈ ಮೊದಲು ಕೊಟ್ಟ ಆಶ್ವಾಸನೆಗಳನ್ನು ಈಡೇರಿಸದೇ ಇದ್ದುದರಿಂದ ಈ ಲಾಂಗ್ ಮಾರ್ಚ್ ಬೃಹತ್ ಹೋರಾಟ ನಡೆದಿದೆ ಎಂದ ಅವರು ಬಿಜೆಪಿ 'ಪ್ರತಿಪಕ್ಷ–ಮುಕ್ತ ಭಾರತ' ಬಯಸುತ್ತದೆ, ಆದರೆ ನಮ್ಮ ಮತ್ತು ರೈತರ ಬೇಡಿಕೆ "ಸಾಲಮುಕ್ತ ಭಾರತ". ನಾಶಿಕ್‌ನಲ್ಲಿ ಒಂದು ಲಕ್ಷ ರೈತರು ಪ್ರತಿಭಟನೆ ನಡೆಸಿದ್ದರು. ಆಗ ಸರಕಾರ ಅವರಿಗೆ ನೀಡಿದ ಭರವಸೆ ಈಡೇರಿಸಲು ಹಿಂದೇಟು ಹಾಕಿದ್ದರಿಂದ ಈ ಲಾಂಗ್ ಮಾರ್ಚ್ ನಡೆದಿದೆ ಎಂದು ಅವರ ಮತ್ತೊಮ್ಮೆ ನೆನಪಿಸಿದರು.

ಮಹಾರಾಷ್ಟ್ರದ ರೈತರ ಯಶಸ್ವಿ 'ಲಾಂಗ್ ಮಾರ್ಚ್' ಇಡೀ ದೇಶದ ದುಡಿಯುವ ಜನಗಳಿಗೆ ಸ್ಫೂರ್ತಿ ತುಂಬಿದೆ-ಸಿಐಟಿಯು ಅಭಿನಂದನೆ

ಮಹಾರಾಷ್ಟ್ರದ ರೈತರ ನಾಶಿಕ್‌ನಿಂದ ಮುಂಬೈ ವರೆಗಿನ ಸುಮಾರು 200 ಕಿ.ಮೀ.ದೂರದ ಐತಿಹಾಸಿಕ 'ಲಾಂಗ್ ಮಾರ್ಚ್'ನ ಯಶಸ್ಸಿಗೆ ಸಿಐಟಿಯು ಅವರನ್ನು ಅಭಿನಂದಿಸಿದೆ. ಸುಮಾರು 50,000 ರೈತರು ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾದ ನೇತೃತ್ವದಲ್ಲಿ ಸುಡುವ ಬಿಸಿಲನ್ನೂ ಲೆಕ್ಕಿಸದೆ ಕಾಲ್ನಡಿಗೆಯಲ್ಲೇ ಆರು ದಿನಗಳ ಕಾಲ ಸಾಗಿ ರಾಜ್ಯ ಸರಕಾರ ಅವರ ಬೇಡಿಕೆಗಳನ್ನು ಲಿಖಿತವಾಗಿ ಒಪ್ಪಿಕೊಳ್ಳುವಂತೆ ಮಾಡಿದ್ದಾರೆ. ರೈತರ ಸಾಲಮುಕ್ತಿ, ಬುಡಕಟ್ಟು ಜನಗಳಿಗೆ ಅರಣ್ಯ ಹಕ್ಕುಗಳು, ಸ್ವಾಮಿನಾಥನ್ ಆಯೋಗದ ಶಿಫಾರಸುಗಳಂತೆ ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ, ಬಡ ರೈತರು ಮತ್ತು ಕೂಲಿಕಾರರಿಗೆ ಪೆನ್ಶನ್‌ನಲ್ಲಿ ಹೆಚ್ಚಳ ಮುಂತಾದವು ಅವರ ಬೇಡಿಕೆಗಳು.

ಮಹಾರಾಷ್ಟ್ರ ರೈತರ ಯಶಸ್ವಿ ಹೋರಾಟ ಇಡೀ ದೇಶದಲ್ಲಿ, ವಿಶೇಷವಾಗಿ ದೇಶಾದ್ಯಂತ ಕಾರ್ಮಿಕರಿಗೆ ಸ್ಫೂರ್ತಿ ತುಂಬಿದೆ. ಕಾರ್ಮಿಕ ವರ್ಗ ರಾಜಸ್ತಾನದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಹೋರಾಟಕ್ಕಿಳಿದ ರೈತರ ಬೆಂಬಲಕ್ಕೆ ನಿಂತಿದೆ. ಕಾರ್ಮಿಕ ವರ್ಗ ಮುಂದೆಯೂ ದೇಶದಾದ್ಯಂತ ರೈತರ ನೈಜ ಬೇಡಿಕೆಗಳನ್ನು ದೃಢವಾಗಿ ಬೆಂಬಲಿಸುತ್ತದೆ, ತನ್ನ ಸೌಹಾರ್ದವನ್ನು ತೋರಿಸುತ್ತದೆ ಎಂದು ಸಿಐಟಿಯು ಆಶ್ವಾಸನೆ ನೀಡಿದೆ.

ಚರಿಲಂ ಕ್ಷೇತ್ರದ ಚುನಾವಣೆಯಲ್ಲಿ ಭಾಗವಹಿಸದಿರಲು ತ್ರಿಪುರಾ ಎಡರಂಗ ನಿರ್ಧಾರ

ತ್ರಿಪುರಾ ವಿಧಾನಸಭೆಗೆ ಫೆಬ್ರುವರಿ 18ರಂದು ನಡೆದ ಚುನಾವಣೆಗಳಲ್ಲಿ ಚರಿಲಂ ಮೀಸಲು ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯ ನಿಧನದಿಂದಾಗಿ ಮತದಾನವನ್ನು ಮುಂದೂಡಲಾಗಿತ್ತು. ಅದನ್ನು ಮಾರ್ಚ್ 12ರಂದು ನಡೆಸಲಾಗುವುದೆಂದು ಚುನಾವಣಾ ಆಯೋಗ ಪ್ರಕಟಿಸಿತು.

ಆದರೆ ಫಲಿತಾಂಶ ಬಂದಂದಿನಿಂದ ಈ ಕ್ಷೇತ್ರದಲ್ಲಿ ಬಿಜೆಪಿ–ಐಪಿಎಫ್‌ಟಿಯಿಂದ ಎಡಪಕ್ಷಗಳ ಕಚೇರಿಗಳು ಮತ್ತು ಕಾರ್ಯಕರ್ತರ ಮೇಲೆ ವಿಪರೀತ ಹಿಂಸಾಚಾರ ನಡೆಯುತ್ತಲೇ ಇರುವುದರಿಂದ ಮತದಾನವನ್ನು ಮುಂದೂಡಬೇಕು ಎಂದು ತ್ರಿಪುರಾ ಎಡರಂಗ ವಿನಂತಿಸಿಕೊಂಡಿತ್ತು.

ಮಾರ್ಚ್ 8ರಂದು ತ್ರಿಪುರಾದ ಮುಖ್ಯ ಚುನಾಣಾ ಅಧಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಈ ಕ್ಷೇತ್ರದಲ್ಲಿ ಬಿಜೆಪಿ–ಐಪಿಎಫ್‌ಟಿ ನಡೆಸುತ್ತಿರುವ ದಾಂಧಲೆಗಳ ವಿವರವಾದ ಪಟ್ಟಿಯನ್ನು ನೀಡಲಾಗಿತ್ತು. ಆ ವೇಳೆಗೆ ಸಿಪಿಐ(ಎಂ) ಮತ್ತು ಆರ್‌ಎಸ್‌ಪಿಯ 11 ಕಚೇರಿಗಳನ್ನು ಧ್ವಂಸ ಪಡಿಸಲಾಗಿತ್ತು. ಈ ಕ್ಷೇತ್ರದಲ್ಲಿರುವ ತ್ರಿಪುರಾ ಮೋಟಾರ್ ಶ್ರಮಿಕ್ ಯೂನಿಯನ್‌ನ ಎರಡು ಕಚೇರಿಗಳನ್ನು ಅವರು ಬಲವಂತದಿಂದ ಆಕ್ರಮಿಸಿಕೊಂಡಿದ್ದಾರೆ. 58 ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಮುಖಂಡರ ಬಿಜೆಪಿ–ಐಪಿಎಫ್‌ಟಿ ಗೂಂಡಾಗಳು ಲೂಟಿ ಮಾಡಿದ್ದರು. ಈ 58 ಮುಖಂಡರ ಹೆಸರುಗಳನ್ನು ಮತ್ತು ದೈಹಿಕವಾಗಿ ಆಕ್ರಮಣಕ್ಕೆ ಒಳಗಾಗಿ ಗಾಯಗೊಂಡಿರುವ 19 ಮಂದಿಯ ಹೆಸರುಗಳನ್ನೂ ಈ ಮನವಿ ಪತ್ರದಲ್ಲಿ ಪಟ್ಟಿ ಮಾಡಲಾಗಿತ್ತು.

ಮಾರ್ಚ್ 9ರಂದು ನವದೆಹಲಿಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಎಂ.ಎ.ಬೇಬಿ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಇಬ್ಬರು ಚುನಾವಣಾ ಆಯುಕ್ತರನ್ನು ಭೇಟಿಯಾಗಿ ತ್ರಿಪುರಾ ಎಡರಂಗದ ಮನವಿಯನ್ನು ಕೊಟ್ಟು ಅಲ್ಲಿ ಮತದಾನವನ್ನು ಅಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿ ನೆಲೆಸುವ ವರೆಗೆ ಮುಂದೂಡಬೇಕು ಎಂದು ಕೋರಿದರು. ಸಂಗತಿಗಳನ್ನು ತಿಳಿದುಕೊಂಡು ಈ ಬಗ್ಗೆ ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯ ಚುನಾವಣಾ ಆಯುಕ್ತರು ಆಶ್ವಾಸನೆ ನೀಡಿದರು.

ಆದರೆ ಮಾರ್ಚ್ 10ರ ಸಂಜೆ ಚುನಾವಣಾ ಪ್ರಚಾರದ ವೇಳೆ ಮುಗಿಯುತ್ತ ಬರುತ್ತಿದ್ದರೂ ಈ ಕುರಿತು ನಿರ್ಣಯ ಪ್ರಕಟವಾಗಲಿಲ್ಲ. ಬಿಜೆಪಿ–ಐಪಿಎಫ್‌ಟಿ ದಾಂಧಲೆಗಳು ಕಡಿಮೆಯಾಗುವ ಬದಲು ಇನ್ನಷ್ಟು ಹೆಚ್ಚಿವೆ. ಬಹಳಷ್ಟು ಎಡಪಕ್ಷಗಳ ಕಾರ್ಯಕರ್ತರು ತಮ್ಮ ಊರುಗಳಿಗೆ ಬರದಂತೆ ಮಾಡಲಾಗಿದೆ. ಸಿಪಿಐ(ಎಂ) ಅಭ್ಯರ್ಥಿ ಈ ಕ್ಷೇತ್ರದ ನಿವಾಸಿಯೇ ಅವರೂ ಚುನಾವಣಾ ಪ್ರಚಾರವನ್ನೇ ನಡೆಸದಂತಾಗಿದೆ. ಎಲ್ಲ ಸಿಪಿಐ(ಎಂ) ಬೂತ್ ಕಚೇರಿಗಳನ್ನು ನಾಶಪಡಿಸಲಾಗಿದೆ. ಇಂತಹ ಸನ್ನಿವೇಶದಲ್ಲಿ ಚುನಾವಣೆ ಎಂಬುದು ಕೇವಲ ಒಂದು ತಮಾಷೆಯಾಗುತ್ತಿದೆ. ಆದ್ದರಿಂದ ಎಡರಂಗ ಈ ಚುನಾವಣೆಯಿಂದ ತನ್ನ ಅಭ್ಯರ್ಥಿಯನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದೆ ಎಂದು ಮಾರ್ಚ್ 10ರಂದು ತ್ರಿಪುರಾದ ಮುಖ್ಯ ಚುನಾವಣಾ ಅಧಿಕಾರಿಗೆ ತಿಳಿಸುವ ಪತ್ರವನ್ನು ಸಲ್ಲಿಸಲಾಗಿದೆ. ಈ ಪತ್ರದಲ್ಲೂ ಮಾರ್ಚ್ 8ರ ನಂತರ ಹಿಂಸಾಚಾರಗಳ ಪಟ್ಟಿಯನ್ನು ಕೊಡಲಾಗಿದೆ.

ತ್ರಿಪುರಾದಲ್ಲಿ ಸಂವಿಧಾನವನ್ನು ಜಾರಿಗೆ ತರಲಿ–ಯೆಚುರಿ



ಒಂದು ಪ್ರಜಾಪ್ರಭುತ್ವದಲ್ಲಿ ಯಾವುದೇ ಪಕ್ಷ ಅಥವ ಮೈತ್ರಿಕೂಟ ಗೆಲ್ಲಬಹುದು ಅಥವ ಸೋಲಬಹುದು. ಆದರೆ ಚುನಾವಣಾ ಗೆಲುವನ್ನೇ ನೆಪವಾಗಿಟ್ಟುಕೊಂಡು ಪ್ರತಿಪಕ್ಷದ ಮೇಲೆ ಬರ್ಬರ ದಾಳಿಗಳನ್ನು ನಡೆಸಲು ಸಾಧ್ಯವಿಲ್ಲ. ತ್ರಿಪುರಾದಲ್ಲಿ ಬಿಜೆಪಿ ಇಂತಹ ಬರ್ಬರ ದಾಳಿಗಳನ್ನು ಜನಸಾಮಾನ್ಯರ ಮೇಲೆ ಹರಿಯ ಬಿಟ್ಟಿದೆ. ಇದು ಪೂರ್ವಯೋಜಿತ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಅವರು ಪಶ್ಚಿಮ ತ್ರಿಪುರ, ಸಿಪಾಹಿಜಾಲ, ಗೋಮತಿ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಬಿಜೆಪಿ–ಐಪಿಎಫ್‌ಟಿ ವಿಧಾನಸಭಾ ಚುನಾವಣೆಯ ಫಲಿತಾಂಶದ ನಂತರ ಹಿಂಸಾಚಾರ ನಡೆಸಿದ ಸ್ಥಳಗಳಿಗೆ ಭೇಟಿ ನಿಡಿ ಬಂದ ನಂತರ ಏರ್ಪಡಿಸಿದ್ದ ಪತ್ರಿಕಾ ಸಮ್ಮೇಳನದಲ್ಲಿ ಹೀಗಂದರು. ಇದು ಸಂವಿಧಾನದ ಸ್ಪಷ್ಟ ಉಲ್ಲಂಘನೆ ಎಂದು ಅವರು ನೆನಪಿಸಿದರು. ಹೊಸ ಸರಕಾರ ಸಂವಿಧಾನದ ಹೆಸರಿನಲ್ಲಿ ಪ್ರತಿಜ್ಞೆ ಕೈಗೊಂಡು ಅಧಿಕಾರ ವಹಿಸಿಕೊಂಡಿದೆ. ರಾಜ್ಯದ ನಾಗರಿಕರ ಜೀವ ಮತ್ತು ಆಸ್ತಿಗಳ ರಕ್ಷಣೆ ಅದರ ಕರ್ತವ್ಯ. ಈ ಬರ್ಬರತೆಯನ್ನು ತಡೆಯಲು ಸರಕಾರ ಏನೂ ಕ್ರಮ ಕೈಗೊಳ್ಳದಿದ್ದರೆ, ರಾಜ್ಯದಲ್ಲಿ ಸಂವಿಧಾನಕ್ಕೆ ಮಾಡಿದ ತಿರಸ್ಕಾರವಾಗುತ್ತದೆ ಎಂದು ರಾಜ್ಯದ ಬಿಜೆಪಿ–ಐಪಿಎಫ್‌ಟಿ ಸರಕಾರವನ್ನು ಯೆಚುರಿ ಎಚ್ಚರಿಸಿದ್ದಾರೆ.

ಹೊಸ ರಾಜ್ಯ ಸರಕಾರ ಈ ಲೂಟಿ–ಧ್ವಂಸಕೃತ್ಯಗಳಿಂದಾಗಿ ಮನೆಗಳು ಮತ್ತು ಇತರ ಆಸ್ತಿಗಳನ್ನು, ರಬ್ಬರ್ ತೋಟಗಳನ್ನು, ಅಂಗಡಿಗಳನ್ನು, ಮೀನುಸಾಕಣೆ ಕೆರೆಗಳನ್ನು ದನಕರುಗಳನ್ನು ಕಳಕೊಂಡಿರುವ ಅಮಾಯಕ ಕುಟುಂಬಗಳಿಗೆ ಪರಿಹಾರವನ್ನು ಕೊಡಬೇಕು ಎಂದು ಯೆಚುರಿ ಬಲವಾಗಿ ಆಗ್ರಹಿಸಿದರು. ಬಿಜೆಪಿ ಕಿಡಿಗೇಡಿಗಳು ಕಬ್ಜಾ ಮಾಡಿರುವ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಹಿಂದಿರುಗಿಸಬೇಕು ಎಂದೂ ಅವರು ಆಗ್ರಹಿಸಿದರು. ಇಂತಹ ಗೂಂಡಾಗಿರಿ ಮತ್ತು ಆಕ್ರಮಣಗಳಿಂದ ತ್ರಿಪುರಾದಲ್ಲಿ ಮತ್ತು ದೇಶದಲ್ಲಿ ಭಿನ್ನಮತದ ದನಿಗಳನ್ನು ಅಡಗಿಸಬಹುದು ಎಂದು ಬಿಜೆಪಿ ಭಾವಿಸಿದ್ದರೆ, ಅದು ಹುಚ್ಚರ ಸ್ವರ್ಗದಲ್ಲಿದೆಯಷ್ಟೇ, ರಾಕ್ಷಸೀ ಬಲದಿಂದ ಲೆನಿನ್ ಪ್ರತಿಮೆಯನ್ನು ಬುಲ್‌ಡೋಝರ್‌ನಿಂದ ಉರುಳಿಸಬಹುದು, ಆದರೆ ಅವರ ಅಮರ ತತ್ವಸಿದ್ಧಾಂತಗಳನ್ನಲ್ಲ ಎಂದು ಯೆಚುರಿ ಎಚ್ಚರಿಸಿದರು. ಕಮ್ಯುನಿಸ್ಟರು ಈ ಹಿಂದೆಯೂ ಹಲವು ವಿಷಮ ಪರಿಸ್ಥಿತಿಗಳನ್ನು ಎದುರಿಸಿದ್ದಾರೆ, ಆಗೆಲ್ಲ ಶ್ರಮಜೀವಿ ಜನಸಮೂಹಗಳು ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ನೆರವಿನಿಂದ ಎದುರಿಸಿ ಮುನ್ನಡೆದಿದ್ದಾರೆ ಎಂದು ಯೆಚುರಿ ಈ ಕರಾಳ ಶಕ್ತಿಗಳಿಗೆ ನೆನಪಿಸಿದರು.

ಈ ಪತ್ರಿಕಾಸಮ್ಮೇಳನದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಜನ್ ಧರ್, ಕೇಂದ್ರ ಸಮಿತಿ ಸದಸ್ಯರಾದ ಬಾದಲ್ ಚೌಧರಿ ಮತ್ತು ಗೌತಮ್ ದಾಸ್ ಹಾಗೂ ಸಂಸತ್ ಸದಸ್ಯರಾದ ಶಂಕರ್ ಪ್ರಸಾದ್ ದತ್ತ ಇದ್ದರು.

ಈ ಪತ್ರಿಕಾ ಸಮ್ಮೇಳನದ ಹಿಂದಿನ ಎರಡು ದಿನಗಳಲ್ಲಿ ಸೀತಾರಾಂ ಯೆಚುರಿ ತ್ರಿಪುರಾದ ಹಿಂದಿನ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಮಾಣಿಕ್ ಸರ್ಕಾರ್, ಕೇಂದ್ರ ಸಮಿತಿ ಸದಸ್ಯರಾದ ಬಾದಲ್ ಚೌಧರಿ ಮತ್ತು ಗೌತಮ್ ದಾಸ್, ಸಂಸತ್ ಸದಸ್ಯರಾದ ಶಂಕರ್ ಪ್ರಸಾದ್ ದತ್ತ ಹಾಗೂ ಝುರನಾ ದಾಸ್ ಬೈದ್ಯ ಮತ್ತಿತರ ರಾಜ್ಯ ಮುಂಖಡರೊಂದಿಗೆ ಬಿಜೆಪಿ–ಐಪಿಎಫ್‌ಟಿ ದಾಳಿಗೆ ಒಳಗಾದ ನೂರಾರು ಮನೆಗಳು, ಎಡಪಕ್ಷಗಳ–ಸಾಮೂಹಿಕ ಸಂಘಟನೆಗಳ ಕಚೇರಿಗಳು ಮತ್ತಿತರ ಸ್ಥಳಗಳಿಗೆ ಭೇಟಿ ನೀಡಿದ್ದರು.

ಈ ಎರಡು ದಿನಗಳಲ್ಲಿ ನೋಡಿದ್ದರ ಬಗ್ಗೆ ಹೇಳುತ್ತ ಇದೊಂದು ಸಿಪಿಐ(ಎಂ)ನ್ನು ಮುಗಿಸಿ ಬಿಡುವ ಪೂರ್ವ–ಯೋಜಿತ ಕೆಲಸ ಎಂದ ಯೆಚುರಿ ಸಿಪಿಐ(ಎಂ) ಮತ್ತು ಎಡಶಕ್ತಿಗಳನ್ನು ಬೆಂಬಲಿಸಿದ ಏಕೈಕ 'ತಪ್ಪಿಗಾಗಿ' ವಿನಾಶ ಗೊಂಡಿರುವ ಕುಟುಂಬಗಳನ್ನು ಸಂತೈಸಲು ನಮ್ಮ ಬಳಿ ಪದಗಳೇ ಇರಲಿಲ್ಲ ಎಂದರು.

ರಾಜ್ಯ ಡಿಜಿಪಿ ರಾಜ್ಯದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದೆ ಎಂದಿರುವ ಬಗ್ಗೆ ಪತ್ರಕರ್ತರೊಬ್ಬರು ಪ್ರಶ್ನಿಸಿದಾಗ ರಾಜ್ಯದ ಕಾನೂನು–ವ್ಯವಸ್ಥೆಯ ಮುಖ್ಯಸ್ಥರಿಗೇ ತನ್ನ ಹುದ್ದೆಯ ಬಗ್ಗೆ ಭಯ ಆವರಿಸಿಕೊಂಡಿದೆ ಎಂದು ಯೆಚುರಿ ಉತ್ತರಿಸಿದರು.

ಈಗ ಸಿಪಿಐ(ಎಂ)ನ ಮತ್ತು ಇತರ ಸಂಘಟನೆಗಳ ಹೆಸರುಗೆಡಿಸಲು ಈ ಸರಕಾರ ಹೊಸದೊಂದು ತಂತ್ರ ರೂಪಿಸಿದೆ. ಇವುಗಳ ಕಚೇರಿಗಳಲ್ಲಿ ಶಸ್ತ್ರಾಸ್ತ್ರ ಗಳನ್ನು ಸಂಗ್ರಹಿಸಿಡಲಾಗಿದೆ ಎಂದು ಅದರ ಶೋಧನೆಗೆ ಮ್ಯಾಜಿಸ್ಟ್ರೇಟ್ ಆದೇಶಗಳನ್ನು ಪಡೆಯುವುದು ಮತ್ತು ಪೋಲೀಸರೊಂದಿಗೆ ಬಿಜೆಪಿ ಮಂದೆಗಳು 'ಶೋಧನೆ'ಯ ಹೆಸರಲ್ಲಿ ದಾಂಧಲೆ ನಡೆಸುವುದು. ಸಿಪಿಐ(ಎಂ)ನ ಕಚೇರಿಗಳ ಇಂತಹ 'ರೇಡ್'ಗಳಲ್ಲಿ ಪೋಲೀಸರಿಗೆ ಯಾವ ಶಸ್ತ್ರಾಸ್ತ್ರವೂ ಸಿಕ್ಕಿಲ್ಲ. ಈ ಕುರಿತು ರಾಜ್ಯ ಡಿಜಿಪಿಗೆ ಪಕ್ಷದ ರಾಜ್ಯಸಮಿತಿ ಒಂದು ದೂರನ್ನು ದಾಖಲಿಸಿದೆ.





ಸಂಪಾದಕೀಯ

ಅಮ್ನೇಷಿಯಾ ಪಬ್ ದಾಳಿ ತೀರ್ಪು: ಮೇಲ್ಮನವಿ ಸಲ್ಲಿಸಿ, ಮರು ವಿಚಾರಣೆ ಮಾಡಿ

ಮಂಗಳೂರಿನ ಅಮ್ನೇಷಿಯಾ ಪಬ್ ನಲ್ಲಿ 2009 ರಲ್ಲಿ ಸ್ವಯಂಘೋಷಿತ ಸಂಸ್ಕೃತಿ ರಕ್ಷಕ ಶ್ರೀರಾಮ ಸೇನೆ ಯ ಸದಸ್ಯರು ಯುವತಿಯರನ್ನು ಅಟ್ಟಾಡಿಸಿಕೊಂಡು ಹೊಡೆದಿದ್ದು ರಾಜ್ಯದ ಎಲ್ಲ ಚಾನಲ್ ಗಳಲ್ಲಿ ಬಿತ್ತರವಾಗಿತ್ತು. ನಂತರ ಹಲವು ದಿನಗಳಕಾಲ ವ್ಯಾಪಕ ಚರ್ಚೆ ಪ್ರತಿಭಟನೆ ರಾಜ್ಯದಾದ್ಯಂತ ನಡೆದು ಪ್ರಕರಣ ದಾಖಲಾಗಿದ್ದು ಈಗ ಇತಿಹಾಸ. ಘಟನೆ ನಡೆದು 9 ವರ್ಷಗಳ ನಂತರ ವಿಚಾರಣೆ ನಡೆದು ತೀರ್ಪು ಬಂದಿದ್ದು ಸಾಕ್ಷಿಗಳ ಕೊರತೆಯಿಂದ ಆರೋಪಿಗಳ ವಿರುದ್ಧದ ಅಪರಾಧ ಸಾಬೀತಾಗದ ಕಾರಣ ಕೆಳ ನ್ಯಾಯಾಲಯ ಎಲ್ಲ ಆರೋಪಿಗಳನ್ನೂ ಬಿಡುಗಡೆ ಮಾಡಿದೆ.

ಈ ಘಟನೆಯ ಸಂದರ್ಭ ಮತ್ತು ನಂತರದ ದಿನಗಳಲ್ಲಿ ಕರಾವಳಿ ಪ್ರದೇಶ ಅದರಲ್ಲಿಯೂ ಮಂಗಳೂರಿನಲ್ಲಿ ನಿರಂತರವಾಗಿ ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಮಾರಲ್ ಪೋಲೀಸಿಂಗ್ ನಡೆಯುತ್ತಿದೆ. ಆಗಾಗ ಕೆಲವು ಪ್ರಕರಣಗಳಷ್ಟೇ ಮಾಧ್ಯಮಗಳಲ್ಲಿ ವರದಿಯಾಗುತ್ತದೆ. ಹಲವು ಪ್ರಕರಣಗಳಲ್ಲಿ ಪೋಲೀಸರೂ ಕೂಡ ಆಕ್ಷೇಪಾರ್ಹವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ವರದಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಇದು ಅತ್ಯಂತ ಅಪಾಯಕಾರಿ ಮತ್ತು ಗಂಭೀರ ಬೆಳವಣಿಗೆ.

ಸಾಕ್ಷಿಗಳ ಕೊರತೆಯಿದೆ ಎನ್ನುವುದು ಈ ಪ್ರಕರಣದ ತೀರ್ಪಿನ ಮುಖ್ಯ ನೆಲೆ. ಅಂದು ಥಳಿತಕ್ಕೆ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳೂ ಸಾಕ್ಷಿಯಾಗಲು ಮುಂದೆ ಬಂದಿಲ್ಲವೆಂದು ಹೇಳಲಾಗುತ್ತಿದೆ. ಅತ್ಯಂತ ಆಘಾತಕಾರಿ ರೀತಿಯಲ್ಲಿ ದಾಳಿಗೆ ಒಳಗಾದ ಯುವತಿಯರು ಸಾಕ್ಷಿಯಾಗಲು ಮುಂದೆ ಬಾರದಿರಲು ಸಮಾಜ ಇಂಥಹ ಘಟನೆಗಳ ಸಂದರ್ಭದಲ್ಲಿ ಯುವತಿಯರ ಚಾರಿತ್ರವಧೆ ಮಾಡುವುದೂ ಕೂಡ ಕಾರಣವಾಗುತ್ತದೆ. ಈ ದೇಶದಲ್ಲಿ ಸಾಕ್ಷಿ ರಕ್ಷಣಾ ಕಾನೂನು ಜಾರಿಯಲ್ಲಿಲ್ಲದ ಮತ್ತು ಕೃತ್ಯವನ್ನು ಎಸಗಿದ ಶ್ರೀರಾಮ ಸೇನೆಯಂಥಹ ಸಂಘಟನೆಗಳ ಕಾರ್ಯಕರ್ತರು ಕಾನೂನು, ನೀತಿ ನಿಯಮ, ಮನುಷ್ಯತ್ವ ಈ ಯಾವುದನ್ನೂ ಪರಿಗಣಿಸದ ಗೂಂಡಾಗಿರಿಯ ಪ್ರವೃತ್ತಿಯವರಾಗಿರುವುದು ತೊಂದರೆಗೊಳಗಾದವರನ್ನು ಭಯಭೀತಗೊಳಿಸಿರಬಹುದು.

ಜೊತೆಗೆ ಮಹಿಳೆಯರ ಮೇಲಿನ ದೌರ್ಜನ್ಯದಂಥಹ ಇಂಥಹ ಪ್ರಕರಣಗಳಲ್ಲಿಯಾದರೂ ಕಾಲಮಿತಿಯಲ್ಲಿ ವಿಚಾರಣೆ ನಡೆಸಿ ತೀರ್ಪು ನೀಡಬೇಕೆನ್ನುವ ಬೇಡಿಕೆಗೆ ವ್ಯತಿರಿಕ್ತವಾಗಿ ಬರೋಬ್ಬರಿ 9 ವರ್ಷಗಳ ನಂತರ ನಡೆದ ವಿಚಾರಣೆಗೆ ಸಾಕ್ಷಿಗಳು ಬರಬೇಕೆಂದು ನಿರೀಕ್ಷಿಸುವುದು ಸಾಧುವಲ್ಲ. ಸಾಮಾನ್ಯವಾಗಿ ಈ ತೆರನ ಮಾರಲ್ ಪೋಲೀಸಿಂಗ್ ಗೆ ಒಳಗಾಗುವವರು ಸಣ್ಣ ವಯಸ್ಸಿನ ಯುವತಿಯರು ಮತ್ತು ಅವರ ಜೊತೆಗಿರಬಹುದಾದ ಯುವಕರು ಆಗಿರುವುದರಿಂದ ತಮ್ಮ ವಿದ್ಯಾಭ್ಯಾಸ, ಉದ್ಯೋಗ, ವಿವಾಹ ಇತ್ಯಾದಿ ಕಾರಣಗಳಿಂದ ಸ್ಥಳೀಯವಾಗಿ ಲಭ್ಯವಿರದ ಪರಿಸ್ಥಿತಿಯೂ ಇರಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸಾಕ್ಷಿಗಳು ಬಂದಿಲ್ಲವೆಂಬ ಕಾರಣಕ್ಕಿಂತ ವಿಳಂಬವೇಕಾಯಿತು ಎನ್ನುವುದೇ ಪ್ರಮುಖವಾಗಬೇಕು.


ಎರಡನೆಯದಾಗಿ ಈ ಪ್ರಕರಣದಲ್ಲಿ ಆರೋಪಿಗಳೇ ಸ್ವತಃ ಘಟನೆಗೆ ಮುನ್ನ ಮಾಧ್ಯಮದವರನ್ನು ಸ್ಥಳಕ್ಕೆ ಆಹ್ವಾನಿಸಿದ್ದರೆಂದು ಆಗ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಸರಿ ಸುಮಾರು ಎಲ್ಲ ಮಾಧ್ಯಮಗಳಲ್ಲಿ ಅಲ್ಲಿ ನಡೆದ ಪ್ರತಿಯೊಂದೂ ದೃಶ್ಯಾವಳಿಗಳೂ ಪ್ರಸಾರವಾಗಿದ್ದವು. ಈ ನೆಲೆಯಲ್ಲಿ ಯೋಚಿಸಿದಾಗ ಪ್ರಕರಣದ ಸಾಕ್ಷಿಗಳಾಗಿ ಕೇವಲ ದೌರ್ಜನ್ಯಕ್ಕೆ ಒಳಗಾದವರನ್ನು ಮಾತ್ರವಲ್ಲದೆ ಮಾಧ್ಯಮಗಳಿಗೆ ನೋಟೀಸ್ ನೀಡಿ ಅವರಿಂದ ಸಚಿತ್ರ ದೃಶ್ಯಾವಳಿಗಳನ್ನು ಪಡೆದುಕೊಳ್ಳಬೇಕಿತ್ತು ಮತ್ತು ಚಿತ್ರಗಳನ್ನು ಸೆರೆ ಹಿಡಿದ ಮಾಧ್ಯಮ ಪ್ರತಿನಿಧಿಗಳನ್ನೂ ಸಾಕ್ಷಿಗಳಾಗಿ ಪರಿಗಣಿಸಬೇಕಾಗಿತ್ತು. ಹಾಗೆ ಮಾಡಿದಂತೆ ಕಾಣುತ್ತಿಲ್ಲ. ಇಲ್ಲಿ ಸ್ಥಳೀಯ ಪೋಲೀಸ್ ವ್ಯವಸ್ಥೆಯ ಲೋಪ ಕಣ್ಣಿಗೆ ಕಾಣುತ್ತಿದೆ ಮತ್ತು ಪ್ರಾಸಿಕ್ಯೂಷನ್ ಕೂಡ ಎಡವಿದಂತೆ ಕಾಣುತ್ತಿದೆ.

ಕೆಳನ್ಯಾಯಾಲಯದ ಈ ತೀರ್ಪು ಸ್ವಯಂಘೋಷಿತ ಸಂಸ್ಕೃತಿ ರಕ್ಷಕ–ಮಹಿಳಾ ಶೋಷಕರಿಗೆ ವರವಾಗಿ ಪರಿಗಣಿಸಲಿದೆ. ಈಗಾಗಲೆ ಯುವಜನರ ಆಯ್ಕೆ ಹಕ್ಕುಗಳ ಮೇಲೆ ನಿರಂತರ ದಾಳಿಯನ್ನು ಅವರು ನಡೆಸುತ್ತಿದ್ದು ಈ ತೀರ್ಪಿನಿಂದ ಇನ್ನಷ್ಟು ಉತ್ತೇಜಿತರಾಗುತ್ತಾರೆ. ಇದು ರಾಜ್ಯದ ಮಹಿಳೆಯರ ಮತ್ತು ಯುವಜನರ ಸಂವಿಧಾನದತ್ತ ಹಕ್ಕುಗಳ ಉಲ್ಲಂಘನೆಯಾಗುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಬೇಕು ಮತ್ತು ಮರುವಿಚಾರಣೆಗೆ ಆಜ್ಞೆ ಮಾಡಬೇಕು. ಅಂದು ದೌರ್ಜನ್ಯ ಕ್ಕೆ ಒಳಗಾದ ಯುವತಿಯರು ಮತ್ತು ಅವರ ಕುಟುಂಬದವರು ಕೆಳ ನ್ಯಾಯಾಲಯದಲ್ಲಿ ಹೇಳಿಕೆ ನೀಡಲು ಹಿಂಜರಿಯಲು ಈ ಮೇಲಿನ ಕಾರಣಗಳಿಗಾಗಿ ಎಂಬುದನ್ನು ಪರಿಗಣಿಸಿ ಉಚ್ಚನ್ಯಾಯಾಲಯದಲ್ಲಿ ನ್ಯಾಯಕ್ಕಾಗಿ ಮೇಲ್ಮನವಿ ಸಲ್ಲಿಸಿ, ಲಿಂಗ ಸಂವೇದನೆಯುಳ್ಳ ನ್ಯಾಯವಾದಿಗಳ ಮೂಲಕ ನ್ಯಾಯ ದೊರಕಿಸಿಕೊಡಲು ಮುಂದಾಗಬೇಕು. ಸ್ಥಳೀಯವಾಗಿ ಹಾಜರಿದ್ದ ಮಾಧ್ಯಮದ ಪ್ರತಿನಿಧಿಗಳನ್ನೂ ಪ್ರಮುಖ ಸಾಕ್ಷಿಗಳಾಗಿ ಪರಿಗಣಿಸಬೇಕು. ಅಮ್ನೇಷಿಯಾ ಪಬ್ ನ ಮಾಲೀಕರ ಪಾತ್ರವೇನೆಂದು ಬಹಿರಂಗ ಪಡಿಸಬೇಕು. ಕಾಲಮಿತಿಯೊಳಗೆ ಇಂಥಹ ಪ್ರಕರಣವನ್ನು ವಿಚಾರಣೆ ನಡೆಸಲು ಬದ್ಧರಾಗಬೇಕು. ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳ ತಡೆಗೆ ಕಾಯ್ದೆಗಳು, ಇಂತಹ ಪ್ರಕರಣಗಳ ಆರೋಪಿಗಳ ಅಪರಾಧ ಸಾಬೀತು ಮಾಡಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾರದಂತೆ ಕ್ರಮ ವಹಿಸದೆ ಅರ್ಥಹೀನವಾಗುತ್ತವೆ. ಸಾಮಾಜಿಕ ಪಿಡುಗಿನ ರೂಪ ಪಡೆದಿರುವ ಮಾರಲ್ ಪೋಲೀಸಿಂಗ್ ನ್ನು ತಡೆಗಟ್ಟಲು ಅಗತ್ಯ ಬಿದ್ದರೆ ಕಾನೂನೊಂದನ್ನು ರಚಿಸಲು ಸರಕಾರ ಮುಂದಾಗಬೇಕು.

ಮಾರಲ್ ಪೊಲಿಸಿಂಗ್ ಬರಿಯ ಅಪರಾಧವಲ್ಲ. ಯಾರೊಂದಿಗೆ ಸ್ನೇಹ ಮಾಡಬೇಕು, ಯಾರನ್ನು ಮದುವೆಯಾಗಬೇಕು, ಎಲ್ಲಿ ಓಡಾಡಬಹುದು ಎಂಬ ಪ್ರಾಥಮಿಕ ಸ್ವಾತಂತ್ರ್ಯದ ಹರಣ. ಅದರಲ್ಲೂ ಯುವಜನರ ಮಹಿಳೆಯರ ಪ್ರಾಥಮಿಕ ಸ್ವಾತಂತ್ರ್ಯದ ಮೇಲೆ ದಾಳಿ. ಹಲವು ಜನವಿಭಾಗಗಳಲ್ಲಿ ಇನ್ನೂ ಇರುವ ಜಾತಿ–ಧರ್ಮಗಳ ತಾರತಮ್ಯ ಮತ್ತು ಮಹಿಳೆಯರ ಸ್ವಾತಂತ್ರ್ಯ–ಸಮಾನತೆಗಳ ವಿರುದ್ಧ ಇರುವ ಪೂರ್ವಗ್ರಹ ಮುಂತಾದ ಪಾಳೆಯಗಾರಿ ಮೌಲ್ಯಗಳನ್ನು, ಮಾರಲ್ ಪೊಲಿಸಿಂಗ್ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾವನ್ನು ಜನತೆ ಮೇಲೆ ಹೊರಿಸಲು ಬಳಸಿಕೊಳ್ಳುತ್ತದೆ. ಆದ್ದರಿಂದ ಕಟುವಾದ ಆಡಳಿತಾತ್ಮಕ ಕ್ರಮಗಳು ಮತ್ತು ಕೋಮುವಾದದ ವಿರುದ್ಧ ದೃಢವಾದ ರಾಜಕೀಯ ಹೋರಾಟ, ಮಾರಲ್ ಪೊಲಿಸಿಂಗ್‌ನ್ನು ಬುಡಸಮೇತ ಕಿತ್ತು ಹಾಕಲು ಅಗತ್ಯ. ಇದು ಕೋಮುವಾದಿ ಫ್ಯಾಸಿಸಂ ವಿರುದ್ಧ ಹೋರಾಟದ ಅನಿವಾರ್ಯ ಅಂಗ. ಇವರೆಡನ್ನೂ ಕೋಮುವಾದಿಗಳ ವಿರುದ್ಧ ತಾನೇ ಪ್ರಬಲ ಸೆಕ್ಯುಲರ್ ಶಕ್ತಿ ಎಂದು ಕೊಚ್ಚಿಕೊಳ್ಳುವ ಕಾಂಗ್ರೆಸ್ ಸರಕಾರ ಅಥವಾ ಪಕ್ಷ ಎಂದೂ ತೋರಿಸಿಲ್ಲ. ಆದ್ದರಿಂದ ಮಾರಲ್ ಪೊಲಿಸಿಂಗ್ ಮಾತ್ರವಲ್ಲ, ಲವ್–ಜಿಹಾದ್, ಗೋಸಂರಕ್ಷಣೆ ಹೆಸರಲ್ಲಿ ದೌರ್ಜನ್ಯ–ಕೊಲೆಗಳು ಇತ್ಯಾದಿ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾದ ಭಾಗಗಳು, ದಿನನಿತ್ಯದ ಸಾಮಾನ್ಯ ಘಟನೆಗಳು ಎಂದು ಸಮಾಜ, ಸರಕಾರ ಒಪ್ಪಿಕೊಂಡಿರುವ ಗಂಭೀರ ಪರಿಸ್ಥಿತಿ ಉಂಟಾಗಿದೆ. ಇದನ್ನು ಹೋಗಲಾಡಿಸಬೇಕಾದರೆ ಅಮ್ನೇಷಿಯಾ ಪಬ್ ಪ್ರಕರಣದಲ್ಲಿ ಅಪರಾಧಗಳಿಗೆ ಶಿಕ್ಷೆಯಾಗಬೇಕು.

ಸ್ಟೀಫನ್ ಹಾಕಿಂಗ್: ಬ್ರಹ್ಮಾಂಡವನ್ನು ವಿವರಿಸಿದ ಪ್ರಗತಿಪರ ಖಭೌತ ವಿಜ್ಞಾನಿ



"ಮೆದುಳು ಒಂದು ಕಂಪ್ಯೂಟರ್. ಅದರ ಭಾಗಗಳು ಹಾಳಾದರೆ ಅದು ಕೆಲಸ ಮಾಡುವುದಿಲ್ಲ. ಹಾಳಾದ ಕಂಪ್ಯೂಟರುಗಳಿಗೆ ಸ್ವರ್ಗ ಅಥವಾ ಮರಣ–ನಂತರದ ಜೀವನ ಇಲ್ಲ. ಅದು ನಿಗೂಢತೆಗೆ ಹೆದರಿದವರ ಕಟ್ಟುಕತೆ." ಎಂದು 2011 ಸಂದರ್ಶನವೊಂದರಲ್ಲಿ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಹೇಳಿಕೆ ಅವರ ಧೋರಣೆ ಮತ್ತು ಹೇಳುವ ಹಾಸ್ಯಮಯ ಶೈಲಿ ಮೂಲಕ ಗಮನ ಸೆಳೆಯುತ್ತದೆ. ಮಾರ್ಚ್ 14, 2018ರಂದು ಈ ಕಂಪ್ಯೂಟರ್ ಕೆಲಸ ನಿಲ್ಲಿಸಿದೆ. ನಮ್ಮ ಕಾಲದ ದೈತ್ಯ ಪ್ರತಿಭೆಯಾಗಿದ್ದು ಬ್ರಹ್ಮಾಂಡವನ್ನು ಅನ್ವೇಷಿಸುತ್ತಾ ಅದನ್ನು ಜನತೆಗೆ ಸರಳ ಭಾಷೆಯಲ್ಲಿ ವಿವರಿಸಿದ ಖಭೌತ ವಿಜ್ಞಾನಿ ಹಾಕಿಂಗ್ ತಮ್ಮ 76ನೇ ವಯಸ್ಸಿನಲ್ಲಿ ತೀರಿಕೊಂಡರು. 21ನೇ ವಯಸ್ಸಿನಲ್ಲಿ ಎ.ಎಲ್.ಎಸ್. ಎಂಬ ನರರೋಗ ಅಂಗಾಂಗಳೆಲ್ಲ ನಿಶ್ಚಲವಾಗುತ್ತಾ ಅವರ ಜೀವ ಹಿಂಡಿ ಹಿಪ್ಪೆಯಾಗಿ ಮಾತು ನಿಂತು ಒಂದೆರಡು ವರ್ಷಕ್ಕಿಂತ ಹೆಚ್ಚು ಬದುಕಲಿಕ್ಕಿಲ್ಲ ಎಂಬ ವೈದ್ಯರು ಹೇಳಿದ್ದರು. ಅವರ ಅಭಿಪ್ರಾಯವನ್ನು ತಲೆಕೆಳಗು ಮಾಡಿ 55 ವರ್ಷ ಕಾಲ ಬ್ರಹ್ಮಾಂಡದ ಬಗ್ಗೆ ಮೂಲಭೂತ ಸೈದ್ಧಾಂತಿಕ ಅನ್ವೇಷಣೆಯ ಅವರ ಅದ್ಭುತ ಸಾರ್ಥಕ ಬದುಕು ಅದರಷ್ಟಕ್ಕೆ ಒಂದು ಕೌತುಕ. ಅವರ ಸಂಶೋಧನೆ ಬ್ರಹ್ಮಾಂಡದ ಆದಿ, ಕಪ್ಪು ರಂಧ್ರ ಎಂದು ಕರೆಯಲಾಗುವ ಆಕಾಶಕಾಯಗಳ ಊಹೆಗೆ ನಿಲುಕದ ಹುಟ್ಟು ಸಾವುಗಳು, ಹಿಗ್ಗುತ್ತಿರುವ ಬ್ರಹ್ಮಾಂಡ ಹಾಗೂ ಕಾಲ–ದೇಶಗಳ ಆದಿ ಮುಂತಾದವುಗಳ ಬಗ್ಗೆ ಇತ್ತು.

ಗಾಲಿ–ಕುರ್ಚಿಗೆ ಸೀಮಿತವಾದ, ಅಭಿವ್ಯಕ್ತಿಗೆ ಕಂಪ್ಯೂಟರ್ ಒಂದೇ ಸಾಧನವಾಗಿದ್ದ, ಹಿಂಡಿ ಹಿಪ್ಪೆಯಾದ ದೇಹದೊಳಗೆ ಅನಂತವಾದ ಬ್ರಹ್ಮಾಂಡದ ಬಗ್ಗೆ ಮೂಲಭೂತ ಸೈದ್ಧಾಂತಿಕ ಅನ್ವೇಷಣೆ ಸಾಧ್ಯ ಎಂಬ ಮಾನವ ಮೆದುಳಿನ ಅಪರಿಮಿತ ಅದಮ್ಯ ಸಾಮರ್ಥ್ಯದ ಪ್ರತೀಕವಾಗಿದ್ದರು ಹಾಕಿಂಗ್.

ಕಾಲ ದೇಶ ದಿಕ್ಕುಗಳೆಲ್ಲ ಶೂನ್ಯವಾಗಿರುವ ಕಪ್ಪುರಂಧ್ರದ ವಿದ್ಯಮಾನವನ್ನು ಸೈದ್ಧಾಂತಿಕವಾಗಿ ವಿವರಿಸುವ ಗಣಿತದ ಸೂತ್ರಗಳನ್ನು ಕಂಡು ಹಿಡಿಯುವ ಮೂಲಕ ಅವರು 1970ರಲ್ಲಿ ಪ್ರಸಿದ್ಧರಾದರು. ಇಂತಹ ಕಪ್ಪುರಂಧ್ರಗಳು ವಿಕಿರಣ ಹೊಮ್ಮಿಸಬೇಕು ಎಂಬುದು ಅವರ ವಾದವಾಗಿತ್ತು. ಹಾಗೆಯೇ ಕಪ್ಪುರಂಧ್ರದಲ್ಲಿ ಶೂನ್ಯವಾಗಿದ್ದ ಕಾಲವನ್ನು ಹಿಂದಕ್ಕೆ ತಿರುಗಿಸುತ್ತಾ ಬಂದರೆ ಅದು ಇಡೀ ಬ್ರಹ್ಮಾಂಡವನ್ನೇ ಬಿಂದುರೂಪಕ್ಕೆ ಅಂದರೆ ಮಹಾಸ್ಫೋಟದ ಮುಂಚಿನ ಶೂನ್ಯ ಸ್ಥಿತಿಗೆ ತರುತ್ತದೆ ಎಂದು ವಾದಿಸುವ ಮೂಲಕ ಕಪ್ಪುರಂಧ್ರದ ಗಣಿತದ ಸೂತ್ರಗಳನ್ನು ಇಡೀ ಬ್ರಹ್ಮಾಂಡವನ್ನು ವಿವರಿಸಲು ವಿಸ್ತರಿಸಿದರು. 1982ರಲ್ಲಿ ಸಣ್ಣ ಕ್ವಾಂಟಂ ತರಂಗಗಳ ಮೂಲಕ ಮಹಾಸ್ಫೋಟದ ನಂತರ ಬ್ರಹ್ಮಾಂಡ ಹಿಗ್ಗಲು ಆರಂಭಿಸಿತು ಎಂಬ ಸಿದ್ಧಾಂತ ಮಂಡಿಸಿದರು. ಅವರು ತಮ್ಮ ಅಂತ್ಯ ಕಾಲದ ವರೆಗೂ ಕ್ವಾಂಟಂ ಗ್ರಾವಿಟಿ ಕ್ಷೇತ್ರದಲ್ಲಿ ಅನ್ವೇಷಣೆ ಮುಂದುವರೆಸಿದರು.

ಹಾಕಿಂಗ್ ವಿಶ್ವವಿಖ್ಯಾತರಾಗಿದ್ದು ತಮ್ಮ ಸಂಶೋಧನೆಯ ಮತ್ತು ಒಟ್ಟಾರೆಯಾಗಿ ಅವರ ಬ್ರಹ್ಮಾಂಡವನ್ನು ವಿವರಿಸುವ ವಿಜ್ಞಾನದ ಸಿದ್ಧಾಂತಗಳನ್ನು ಜನಪ್ರಿಯ ಶೈಲಿಯಲ್ಲಿ ಬರೆಯುವ ಮೂಲಕ. 1988ರಲ್ಲಿ ಅವರು ಬರೆದ "ಎ ಬ್ರೀಫ್ ಹಿಸ್ಟರಿ ಆಫ್ ಟೈಂ" 40 ಭಾಷೆಗಳಲ್ಲಿ ಅನುವಾದವಾಗಿ 2.5 ಕೋಟಿ ಪ್ರತಿಗಳು ಮಾರಾಟವಾದವು. ಸಚಿತ್ರ "ಬ್ರೀಫ್ ಹಿಸ್ಟರಿ ಆಫ್ ಟೈಂ" (1996) ಮತ್ತು 2001ರಲ್ಲಿ "ದಿ ಯುನಿವರ್ಸ್ ಇನ್ ಎ ನಟ್‌ಶೆಲ್"(2001) ಗಳೂ ಜನಪ್ರಿಯವಾದವು. ಮಗಳು ಲೂಸಿ ಜತೆ ಜಂಟಿಯಾಗಿ ಬರೆದ ಮಕ್ಕಳ ವಿಜ್ಞಾನ ಪುಸ್ತಕ "ಜಾರ್ಜಸ್ ಸಿಕ್ರೆಟ್ ಕೀ ಟು ದಿ ಯುನಿವರ್ಸ್"(2007) ಮತ್ತು ಕೊನೆಯ ಪುಸ್ತಕ "ದಿ ಗ್ರಾಂಡ್ ಡಿಸೈನ್"(2010) ಬ್ರಹ್ಮಾಂಡವನ್ನು ಜನಸಾಮಾನ್ಯರಿಗೆ ವಿವರಿಸುವುದರಲ್ಲಿ ಅದ್ಭುತ ಪಾತ್ರ ವಹಿಸಿತು.

ಹಾಕಿಂಗ್ ಇತರ ಪ್ರಸಿದ್ಧ ವಿಜ್ಞಾನಿಗಳಂತೆ ದಂತಗೋಪುರಕ್ಕೆ ತಮ್ಮನ್ನು ಸೀಮಿತಗೊಳಿಸಲಿಲ್ಲ. ಸಾಮಾಜಿಕ–ರಾಜಕೀಯ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಮುಲಾಜಿಲ್ಲದೆ ಸಾರ್ವಜನಿಕಗೊಳಿಸಿದರು. 1968ರಲ್ಲಿ ವಿಯೆಟ್ನಾಂ ಯುದ್ಧದ ವಿರುದ್ಧ ವಿಶ್ವದಾದ್ಯಂತ ಪ್ರದರ್ಶನಗಳು ನಡೆದಾಗ ಅದರಲ್ಲಿ ಭಾಗವಹಿಸಿದರು. ಪ್ಯಾಲೆಸ್ಟೈನಿನ ಜನತೆಯ ತಾಯ್ನಾಡಿನ ಹಕ್ಕುಗಳನ್ನು ಯಾವಾಗಲೂ ಬೆಂಬಲಿಸಿದ ಹಾಕಿಂಗ್ ಇತ್ತೀಚೆಗೆ ಇಸ್ರೇಲಿನಲ್ಲಿ ನಡೆದ ವಿಜ್ಞಾನ ಸಮ್ಮೇಳನವೊಂದರಲ್ಲಿ ಭಾಗವಹಿಸಲು ನಿರಾಕರಿಸಿ ಇಸ್ರೇಲಿ ಝಿಯೋನಿಸಂ ವಿರುದ್ಧ ವಿಜ್ಞಾನದ ಕ್ಷೇತ್ರದಲ್ಲೂ ದಿಗ್ಬಂಧನ ಹೇರಬೇಕು ಎಂಬ ಧೋರಣೆಯನ್ನು ಬೆಂಬಲಿಸಿದರು. ಬ್ರಿಟಿಶ್ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆ (ಎನ್.ಎಚ್.ಎಸ್.)ಯಲ್ಲಿ ಕಡಿತವನ್ನು ವಿರೋಧಿಸುತ್ತಾ "ಈ ವ್ಯವಸ್ಥೆಯಿಂದ ಹೆಚ್ಚು ಲಾಭ ಗಳಿಸಿದಷ್ಟು, ಖಾಸಗಿ ಗುತ್ತೇದಾರಿ ಕಂಪನಿಗಳು ಬೆಳೆಯುತ್ತವೆ ಮತ್ತು ಆರೋಗ್ಯ ಸೇವೆ ಹೆಚ್ಚೆಚ್ಚು ದುಬಾರಿಯಾಗುತ್ತದೆ. ಎನ್.ಎಚ್.ಎಸ್.ನ್ನು ಕಮರ್ಶಿಯಲ್ ಹಿತಾಸಕ್ತಿಗಳಿಂದ ದೂರವಿಡಬೇಕು." ಎಂದರು. 2004ರಲ್ಲಿ ಅಮೆರಿಕ–ಬ್ರಿಟನ್ ಗಳ

ಪುಟ 4 ಕ್ಕೆ

ಸುರತ್ಕಲ್ ಮಾರುಕಟ್ಟೆ: ಯಶಸ್ವಿ ಧರಣಿ ಸತ್ಯಾಗ್ರಹ

ಮಂಗಳೂರು ಮಹಾನಗರ ವ್ಯಾಪ್ತಿಯ ಸುರತ್ಕಲ್‌ನ ಹಳೇಮಾರುಕಟ್ಟೆಯ ಸ್ಥಳದಲ್ಲಿ ಹೊಸ ಆಧುನಿಕ ಮಾರುಕಟ್ಟೆ ರಚಿಸುವ ಹಿನ್ನೆಲೆಯಲ್ಲಿ ತಾತ್ಕಾಲಿಕ ಮಾರುಕಟ್ಟೆಯನ್ನು ಮಂಗಳೂರು ನಗರಪಾಲಿಕೆ ನಿರ್ಮಿಸಿ ಕೊಟ್ಟಿತ್ತು. ಹರಾಜಿಗೆ ಅವಕಾಶ ನೀಡಿ ಆ ಮಾರುಕಟ್ಟೆಯ ಅಂಗಡಿಗಳ ವಿತರಣೆಯೂ ಆಗಿತ್ತು. ಆದರೆ ಸ್ಥಳೀಯ ಶಾಸಕ ಮೊಯ್ದಿನ್ ಬಾವಾ ಅವರ ಬೆಂಬಲಿಗರಾದ ಕೆಲವರು ತಮಗೆ ಹಂಚಿಕೆಯಾದ ಅಂಗಡಿ ಗೋಡೆಗಳನ್ನು ತಮಗೆ ಬೇಕಾದಂತೆ ವಿಸ್ತರಿಸಿಕೊಂಡಿದ್ದರು. ಇದಕ್ಕಾಗಿ ಪಾಲಿಕೆಯವರು ಕಟ್ಟಿಸಿದ ಕಟ್ಟಡದ ಗೋಡೆಗಳನ್ನು ಕೆಡವಿದ್ದರು ಕೂಡಾ. ಇದನ್ನು ವಿರೋಧಿಸಿ ಡಿವೈಎಫ್‌ಐ ಸುರತ್ಕಲ್ ಘಟಕದ ನೇತೃತ್ವದಲ್ಲಿ ಅನಿರ್ದಿಷ್ಟ ಹಗಲು ರಾತ್ರಿ ಧರಣಿ ಸತ್ಯಾಗ್ರಹ ನಡೆಯಿತು.

ತಾತ್ಕಾಲಿಕ ಕಟ್ಟಡದ ನಿರ್ಮಾಣ ವೆಚ್ಚದಲ್ಲಿ ನಡೆದ ಭ್ರಷ್ಟಾಚಾರದ ತನಿಖೆ ಆಗಬೇಕು, ಅಂಗಡಿ ವಿತರಣೆಯಲ್ಲಿ ಅಧಿಕಾರಿಗಳು ಗುತ್ತಿಗೆದಾರರು ಒಳಗೊಂಡಿದ್ದು, ಅವರ ಬಗ್ಗೆ ಕ್ರಮಕೈಗೊಳ್ಳಬೇಕು. ಅಕ್ರಮವಾಗಿ ಮಾಡಿದ ವಿಸ್ತರಣೆಯನ್ನು ಕೆಡವಿ ಸರಿಪಡಿಸಬೇಕು ಎಂಬುದು ಸತ್ಯಾಗ್ರಹಿಗಳ ಬೇಡಿಕೆಯಾಗಿತ್ತು. ಧರಣಿಯ ಎಂಟನೇ ದಿನ ಶಾಸಕ, ಮಂಗಳೂರು ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಭೇಟಿ ನೀಡಿ ಸತ್ಯಾಗ್ರಹಿಗಳೊಂದಿಗೆ ಮಾತುಕತೆ ನಡೆಸಿದ್ದರು. ಸಾರ್ವಜನಿಕ ಅಭಿಪ್ರಾಯಕ್ಕೆ ಮಣಿದ ಪಾಲಿಕೆ ಅಧಿಕಾರಿಗಳು ಒಡೆದ ಕಟ್ಟಡಗಳನ್ನು ಪುರ್ನನಿರ್ಮಾಣ ಕಾಮಗಾರಿ ಆರಂಭಿಸಿದ್ದಾರೆ. ಇದರಿಂದ ಆಹೋರಾತ್ರಿ ಧರಣಿಗೆ ಯಶಸ್ಸು ಲಭಿಸಿದೆ.

ಮಾರ್ಚ್ 12 ರಂದು ಧರಣಿ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿದಾಗ, ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ, ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಘಟಕದ ಶ್ರೀನಾಥ್ ಕಾಟಿಪಳ್ಳ, ಡಿವೈಎಫ್‌ಐ ಜಿಲ್ಲಾ ಮುಖಂಡರು ಧರಣಿ ನಿರತರನ್ನು ಪದೇ ಪದೇ ಭೇಟಿಯಾಗಿ ಧೈರ್ಯ ತುಂಬಿದರು.

ಕೃಷ್ಣಪ್ಪ ಕೊಂಚಾಡಿ ಅವರಿಗೆ ಡಾಕ್ಟರೇಟ್:

ಕರಾವಳಿ ಕರ್ನಾಟಕದಲ್ಲಿ ವಾಣಿಜ್ಯೋದ್ಯಮ ಮತ್ತು ಸಂಘರ್ಷ– ಯುರೋಪಿಯನ್ನರ ಆಗಮನದಿಂದ ವಸಾಹತುಶಾಹಿ ಕಾಲಘಟ್ಟದವರೆಗೆ ಎಂಬ ಮಹಾಪ್ರಬಂಧಕ್ಕೆ ಕೃಷ್ಣಪ್ಪ ಕೊಂಚಾಡಿ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾನಿಲಯವು ಇತಿಹಾಸ ಶಾಸ್ತ್ರ ವಿಭಾಗದಿಂದ ಪಿ.ಎಚ್‌ಡಿ ಪದವಿ ಪ್ರಧಾನ ಮಾಡಿದೆ.

ಕೃಷ್ಣಪ್ಪ ಕೊಂಚಾಡಿ ಅವರು ಬರೆದ ‘ತಾಷ್ಕೆಂಟ್‌ನಿಂದ ಕಾನ್ಪುರದ ವರೆಗೆ ಮತ್ತು ಅನುವಾದಿಸಿದ ‘ವಿವೇಕಾನಂದರ ಸಾಮಾಜಿಕ ರಾಜಕೀಯ ಚಿಂತನೆಗಳು’, ‘ಗೋದಾವರಿ ಪರುಳೇಕರ್ ಮತ್ತು ಭಗತ್‌ಸಿಂಗ್‌ರ’ ಪುಸ್ತಕಗಳು ‘ಜನಶಕ್ತಿ’ ಹಾಗೂ ‘ಕ್ರಿಯಾ ಪ್ರಕಾಶನ’ ಬಳಗದ ಸಂಗಾತಿಗಳಿಗೆ ಪರಿಚಿತ ಪುಸ್ತಕಗಳಾಗಿವೆ.

ಮಂಗಳೂರಿನಲ್ಲಿ ಜೀವವಿಮಾ ನಿಗಮದಲ್ಲಿ ನೌಕರರಾಗಿರುವ, 50 ವರ್ಷ ಪ್ರಾಯದ ಕೃಷ್ಣಪ್ಪ ಕೊಂಚಾಡಿ ಅವರು ನೌಕರಿಯಲ್ಲಿ ತೊಡಗಿರುವಾಗಲೇ ಎಂ.ಎ ಅರ್ಥಶಾಸ್ತ್ರ (ಕರ್ನಾಟಕ ಮುಕ್ತ ವಿ.ವಿ.) ಎಲ್‌ಎಲ್‌ಬಿ (ಮಂಗಳೂರು ವಿ.ವಿ.) ಎಂ.ಎ.ಇತಿಹಾಸ (ಇಗ್ನೊ, ನವದೆಹಲಿ), ಎಂ.ಬಿ.ಎ(ಅಣ್ಣಾಮಲೈ ವಿ.ವಿ), ಎಂ.ಎಸ್ಸಿ ಜಿಯೋಲಜಿ (ಮದ್ರಾಸು ವಿ.ವಿ) ಸ್ನಾತಕ್ಕೋತ್ತರ ಪದವಿಗಳನ್ನು ಪಡೆದಿರುತ್ತಾರೆ. ಇತಿಹಾಸ ಶಾಸ್ತ್ರದಲ್ಲಿ ಓಇಇಖ ಮತ್ತು ಖಏಇಖ ಪರೀಕ್ಷೆಗಳನ್ನು ತೇರ್ಗಡೆ ಹೊಂದಿದ್ದಾರೆ. ಇನ್ಶೂರೆನ್ಸ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾದ ಅಸೋಸಿಯೇಟ್ ಪದವಿಯನ್ನೂ ಪಡೆದಿರುತ್ತಾರೆ.

–ವಾಸುದೇವ ಉಚ್ಚಿಲ್

ಭವಿಷ್ಯನಿಧಿ ಕಚೇರಿ ಎದುರು ಮಂಗಳೂರಿನಲ್ಲಿ ಸಿಐಟಿಯು ಪ್ರತಿಭಟನೆ:

ಪ್ರೊವಿಡೆಂಟ್ ಫಂಡ್ ಸಂಸ್ಥೆಗೆ ಬೀಡಿ ಕಾರ್ಮಿಕರು ಸೇರಿ ಹಲವು ಬಗೆಯ ಕಾರ್ಮಿಕರು ಸದಸ್ಯರಾಗಿದ್ದು, ಇದೀಗ ಸವಲತ್ತುಗಳನ್ನು ಪಡೆದುಕೊಳ್ಳುವಲ್ಲಿ ಆಧಾರ್ ಕಾರ್ಡು ಕಡ್ಡಾಯವೆಂದು ಸಂಸ್ಥೆಯು ನಿರ್ದೇಶಿಸಿದೆ. ಆದರೆ ಹಲವು ವರ್ಷಗಳ ಹಿಂದೆ ಪಿ.ಎಫ್.ಸಂಸ್ಥೆಗೆ ನೀಡಲಾದ ಜನ್ಮದಿನದ ದಾಖಲಾತಿಗೂ ಇತ್ತೀಚೆಗೆ ಪಡಕೊಂಡ ಆಧಾರ್ ಕಾರ್ಡು ಜನ್ಮದಿನದ ದಾಖಲಾತಿಗೂ ವ್ಯತ್ಯಾಸ ಬಂದಿದೆ.

ಪಿಎಫ್ ಸಂಸ್ಥೆಯ ಸದಸ್ಯರಿಗೆ ಆಧಾರ್ ಕಾರ್ಡ್‌ನ್ನು ಯಾವುದೇ ಕಾರಣಕ್ಕೂ ಕಡ್ಡಾಯಗೊಳಿಸಕೂಡದು, ಈಗಾಗಲೇ ಪಿಎಫ್ ಕಚೇರಿಯಲ್ಲಿ ದಾಖಲಾಗಿರುವ ಜನ್ಮದಿನಾಂಕವನ್ನು ಅಧಿಕೃತಗೊಳಿಸಬೇಕು, ಪಿಂಚಣಿದಾರರಿಗೆ ಸೌಲಭ್ಯ ಪಡೆಯಲು ಇರುವ ನಿಯಮಗಳನ್ನು ಸರಳಗೊಳಿಸಬೇಕು, ಪಿಂಚಣಿದಾರರಿಗೆ ಜೀವಿತ ಪ್ರಮಾಣಪತ್ರಕ್ಕಾಗಿ ಅವರ ಬ್ಯಾಂಕಿನಲ್ಲಿಯೇ ಹೆಬ್ಬೆಟ್ಟು ಗುರುತು ಪಡೆಯುವ ವ್ಯವಸ್ಥೆ ಮಾಡಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಸಿಐಟಿಯು ಸಂಯೋಜಿತ ದ.ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಮಾರ್ಚ್ 13 ರಂದು ಮಂಗಳೂರಿನ ಪಿಎಫ್ ಕಚೇರಿ ಎದುರು ಪ್ರತಿಭಟನೆಯನ್ನು ನಡೆಸಲಾಯಿತು.

ಬೀಡಿ ಕಾರ್ಮಿಕರಿಗೆ ಭವಿಷ್ಯನಿಧಿ ಆಗಬೇಕೆಂದು ಅಂದು ಹೋರಾಟ ಮಾಡಿ ಯಶಸ್ವಿಯಾದ ಸಿಐಟಿಯು, ಇಂದು ಭವಿಷ್ಯನಿಧಿ ಸೌಲಭ್ಯದಿಂದ ವಂಚನೆಗೊಳಗಾಗುತ್ತಿರುವ ಕಾರ್ಮಿಕರ ಪರ ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬುದಾಗಿ ದ.ಕ.ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಹೇಳಿದರು.

ಪ್ರತಿಭಟನೆಯನ್ನುದ್ದೇಶಿಸಿ ಫೆಡರೇಶನ್ನಿನ ಜಿಲ್ಲಾಧ್ಯಕ್ಷ ವಸಂತ ಆಚಾರಿ, ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಕಾರ್ಮಿಕ ಮುಖಂಡರಾದ ಯು.ಬಿ.ಲೋಕಯ್ಯ, ಪದ್ಮಾವತಿ ಶೆಟ್ಟಿ, ಜಯಂತಿ ಬಿ.ಶೆಟ್ಟಿ, ಭಾರತಿ ಬೋಳಾರ್, ಸದಾಶಿವ ದಾಸ್, ಬಾಬು ದೇವಾಡಿಗ, ಜಯಂತ ನಾಯ್ಕ್, ಗಂಗಯ್ಯ ಅಮೀನ್, ರಾಮಣ್ಣ ವಿಟ್ಲ, ರಾಧಾ ಮೂಡಬಿದ್ರಿ, ಗಿರಿಜ ಮೂಡಬಿದ್ರಿ, ವಸಂತಿ ಕುಪ್ಪೆಪದವು, ನೋಣಯ್ಯ ಗೌಡ, ರೋಹಿಣಿ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳೊಂದಿಗೆ ಪಿಎಫ್ ಅಧಿಕಾರಿಗಳು ನಡೆಸಿದ ಚರ್ಚೆಯ ಆಧಾರದಲ್ಲಿ ಪರಿಹಾರ ಕಂಡುಕೊಳ್ಳುವ ಭರವಸೆಯ ಮೇರೆಗೆ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು.

ಗುತ್ತಿಗೆ ಮುನ್ಸಿಪಲ್ ಕಾರ್ಮಿಕರ ಖಾಯಮಾತಿಗೆ ವಿಧಾನಸೌಧ ಚಲೊ





ಎಲ್ಲಾ ಗುತ್ತಿಗೆ ಮುನ್ಸಿಪಲ್ ಕಾರ್ಮಿಕರ ಖಾಯಂಮಾತಿಗೆ ಒತ್ತಾಯಿಸಿ, ಗುತ್ತಿಗೆ ಪದ್ದತಿ ವಿರೋಧಿಸಿ ಮುನ್ಸಿಪಲ್ ಕಾರ್ಮಿಕರ ವಿಧಾನಸೌಧ ಚಲೋವನ್ನು ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ ಮಾರ್ಚ್ 15ರಂದು ಹಮ್ಮಿಕೊಂಡಿತ್ತು. ಕರ್ನಾಟಕ ರಾಜ್ಯದ ನಗರ ಸ್ಥಳಿಯ ಸಂಸ್ಥೆಗಳಾದ ಪಟ್ಟಣ ಪಂಚಾಯತ್, ಪುರ ಸಭೆ, ನಗರ ಸಭೆ, ನಗರ ಪಾಲಿಕೆ, ಮಹಾ ನಗರ–ಪಾಲಿಕೆಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಪೌರ ಕಾರ್ಮಿಕರು, ಲೋಡರ್‍ಗಳು, ವಾಟರ್ ಮ್ಯಾನ್‌ಗಳು, ಕಸ ಸಂಗ್ರಹದ ಅಟೋಚಾಲಕರು, ಸಹಾಯಕರು, ಕಂಪ್ಯೂಟರ್ ಅಪರೇಟರ್‍ಗಳು, ಹಾಗು ಕಛೇರಿ ಸಹಾಯಕರು, ಎಲೆಕ್ಟ್ರೀಷಿಯನ್ಸ್‌ಗಳು ದುಡಿಯುತ್ತ ಬಂದಿದ್ದಾರೆ. ಈ ಗುತ್ತಿಗೆ ಮುನಿಸಿಪಾಲ್ ಕಾರ್ಮಿಕರಿಗೆ ಮಧ್ಯವರ್ತಿಗಳ ಶೋಷಣೆಯಿಂದ ತಪ್ಪಿಸಿ ನೇರ ಮುನಿಸಿಪಾಲಿಟಿಗಳಿಂದಲೇ ಸಂಬಳವನ್ನು ಪೌರ ಕಾರ್ಮಿಕರಿಗೆ ನೀಡುವ ಕ್ರಮಕ್ಕೆ ಸರ್ಕಾರ ಮುಂದಾಗಿರುವುದನ್ನು ಸಂಘವು ಸ್ವಾಗತಿಸಿದೆ. ಸದರಿ ಸೌಲಭ್ಯಗಳನ್ನು ಇನ್ನುಳಿದ ಗುತ್ತಿಗೆ ಕಾರ್ಮಿಕರು ವಿಸ್ತರಿಸಲು ಮತ್ತು ಇತರ ಹಕ್ಕೊತ್ತಾಯಗಳಿಗೆ ಒತ್ತಾಯಿಸಿ ಸಂಘವು ಈ ಹೋರಾಟವನ್ನು ಹಮ್ಮಿಕೊಂಡಿತ್ತು.



ಸಿಜಿಎಂ ಕಚೇರಿ ಚಲೋ

BSNL ಗುತ್ತಿಗೆ ಕಾರ್ಮಿಕರ ಸಿಜಿಎಂ ಕಚೇರಿ ಚಲೋ ಹೋರಾಟವನ್ನು ಬೆಂಗಳೂರಿನಲ್ಲಿ ಮಾರ್ಚ್ 15ರಂದು ಹಮ್ಮಿಕೊಳ್ಳಲಾಗಿತ್ತು. ಹೋರಾಟವನ್ನು ವಿ.ಎ.ಎನ್ ನಂಬೂದ್ರಿಯವರು ಉದ್ಘಾಟಿಸಿದರು.



ಜೆಸಿಟಿಯು ಧರಣಿ ಸತ್ಯಾಗ್ರಹ

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ, ರೈತ ಮತ್ತು ಜನ ವಿರೋಧಿ ನೀತಿಗಳು ಹಾಗೂ ಕಾರ್ಪೋರೇಟ್ ಪರ ನೀತಿಗಳ ವಿರುದ್ಧ, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ಮಾರ್ಚ್ 15, 2018 ರಂದು ದೇಶವ್ಯಾಪಿ ಧರಣಿ ಸತ್ಯಾಗ್ರಹ ಪ್ರತಿಭಟನೆಗೆ ಕರೆ ನೀಡಿತ್ತು. ಇದರ ಅಂಗವಾಗಿ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಯಿತು.



ಸ್ಟೀಫನ್ ಹಾಕಿಂಗ್: ಬ್ರಹ್ಮಾಂಡವನ್ನು ವಿವರಿಸಿದ......


ಪುಟ 3 ರಿಂದ

ಇರಾಕ್ ಯುದ್ಧವನ್ನು ಖಂಡಿಸಿ ಅದನ್ನು ಸುಳ್ಳುಗಳ ಮೇಲೆ ಆಧಾರಿತ ಯುದ್ಧ–ಅಪರಾಧ ಎಂದು ಕರೆದರು. ಹವಾಮಾನ ಬದಲಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳದೆ ಇರುವುದರ ಬಗ್ಗೆ ಅವರು ಸದಾ ಎಚ್ಚರಿಕೆ ನೀಡುತ್ತಿದ್ದರು. ಸತತವಾಗಿ ಹೆಚ್ಚುವ ಅಸಮಾನತೆಯನ್ನು ಸೃಷ್ಟಿಸುವ ಬಂಡವಾಳಶಾಹಿ ಪದ್ಧತಿ ಬಗ್ಗೆ “ಐಶ್ವರ್ಯ ಮರುಹಂಚಿಕೆ ವಿರುದ್ಧ ಯಂತ್ರಗಳ ಮಾಲಕರು ಲಾಬಿ ಮಾಡುತ್ತಾ ಹೋದರೆ ಹೆಚ್ಚಿನ ಜನ ಕಡುಬಡವರಾಗುತ್ತಾ ಹೋಗುತ್ತಾರೆ” ಎಂದಿದ್ದರು.

ಹಾಕಿಂಗ್ ಅವರ ಜೀವನ ಮತ್ತು ಯೋಚನೆಗಳನ್ನು ಅವರ ಶಬ್ದಗಳಲ್ಲೇ ಹೀಗೆ ಹೇಳಬಹುದು “ಈ ವಿಶ್ವವನ್ನು ಯಾರೂ ಸೃಷ್ಟಿ ಮಾಡಲಿಲ್ಲ. ನಮ್ಮ ವಿಧಿಯನ್ನು ಯಾರೂ ನಿರ್ದೇಶಿಸುತ್ತಿಲ್ಲ. ಇದರಿಂದ ನನಗೊಂದು ಅಗಾಧ ಸಾಕ್ಷಾತ್ಕಾರವಾಗಿದೆ. ಬಹುಶಃ ಸ್ವರ್ಗ ಅಥವಾ ಸತ್ತನಂತರ ಜೀವನ ಎಂಬುದಿಲ್ಲ. ಈ ಬ್ರಹ್ಮಾಂಡದ ಅಗಾಧ ವಿನ್ಯಾಸವನ್ನು ಗ್ರಹಿಸಿ ಮೆಚ್ಚಲು ನಮಗೆ ಒಂದು ಜೀವನಾವಧಿ ಇದೆ. ಇದಕ್ಕಾಗಿ ನಾನು ಚಿರಋಣಿ.”

ಸಿಪಿಐ(ಎಂ) ರಾಜಕೀಯ ಸಮಾವೇಶಗಳು





ಬೈಂದೂರು

ಉಡುಪಿ ಜಿಲ್ಲೆಯ ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಸಿಪಿಐ(ಎಂ) ಪಕ್ಷದ ಕಾರ್ಯಕರ್ತ ಸಮಾವೇಶವು ಬೈಂದೂರು, ಹೆಮ್ಮಾಡಿ ಮತ್ತು ಸಿದ್ಧಾಪುರ ಪ್ರದೇಶಗಳಲ್ಲಿ ಮಾರ್ಚ್ 15ರಂದು ಯಶಸ್ವಿಯಾಗಿ ಜರುಗಿತು.

ಸಿಪಿಐ(ಎಂ) ಪಕ್ಷದ ರಾಜ್ಯ ಮುಖಂಡ ಕೆ.ಶಂಕರ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ ಆಳುವ ಕೇಂದ್ರ–ರಾಜ್ಯ ಸರಕಾರಗಳು ಅನುಸರಿಸಿಕೊಂಡು ಬಂದ ನವ ಉದಾರೀಕರಣ ನೀತಿಗಳಿಂದ ದುಡಿಯುವ ವರ್ಗ ಮತ್ತು ಶೋಷಿತ ಜನ ವಿಭಾಗಗಳ ಮೇಲೆ ಆಗಿರುವ ಹೊಡೆತ 2007–2008 ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರದ ದಾಳಿ ಇನ್ನು ಹೆಚ್ಚುತ್ತಿದೆ ಎಂದು ಹೇಳಿದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸಮಾವೇಶದಲ್ಲಿ ಅತಿಥಿ ಭಾಷಣ ಮಾಡಿದರು. ಶಿರೂರು ವಿದ್ಯಾರ್ಥಿನಿ ರತ್ನ ಕೊಠಾರಿ ನಿಗೂಡ ಸಾವಿನ ತನಿಖೆಗೆ ಒತ್ತಾಯ ಹಾಗೂ ಕುಟುಂಬಕ್ಕೆ ಪರಿಹಾರ ಹಣ ಕೊಡಿಸಲು ಹೋರಾಟ, ಕಾರವಾರ–ಬೆಂಗಳೂರು ರೈಲು ಪ್ರಯಾಣದ ಅವಧಿ ಕಡಿತ ಹಾಗೂ ಪ್ರತ್ಯೇಕ ರೈಲು ಬಿಡಲು ಹೋರಾಟ, ಮನೆ ನಿವೇಶನ ಹಕ್ಕಿಗಾಗಿ ಇತ್ಯಾದಿ ಸಮರಶೀಲ ಹೋರಾಟ ಮಾಡಿದ ಸಿಪಿಐ(ಎಂ) ಪರವಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಯುವ ಮುಂದಾಳು ಸುರೇಶ್ ಕಲ್ಲಾಗರವರನ್ನು ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ. ಜನಪರ ಹೋರಾಟಕ್ಕೆ ಶಕ್ತಿ ತುಂಬಲು ಸಿಪಿಐ(ಎಂ) ಅಭ್ಯರ್ಥಿ ಸುರೇಶ್ ಕಲ್ಲಾಗರ ಇವರಿಗೆ ಮತ ನೀಡಿ ಗೆಲುವು ಸಾಧಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದು ಅವರು ಹೇಳಿದರು.

ಸಿಪಿಐ(ಎಂ) ಜಿಲ್ಲಾ ಮುಖಂಡ ಮಹಾಬಲ ವಡೇರ ಹೋಬಳಿ, ರಾಜೀವ ಪಡುಕೋಣೆ, ಯು. ದಾಸಭಂಡಾರಿ, ಸುರೇಶ್ ಕಲ್ಲಾಗರ, ವೆಂಕಟೇಶ ಕೋಣಿ, ನಾಗರತ್ನ ನಾಡ. ಕಾರ್ಮಿಕ ಮುಖಂಡರಾದ ಗಣೇಶ ತೊಂಡೆಮಕ್ಕಿ, ರೊನಾಲ್ಡ್ ಕ್ವಾಡ್ರಸ್, ಅಲೆಕ್ಸಾಂಡರ್, ಗಿರಿಜ, ಜ್ಯೋತಿ, ಗಿರಿಜಮ್ಮ ಶೆಡ್ತಿ, ಸಾಕ, ದೇವಮ್ಮ, ಮಂಜುನಾಥ ಕೊಠಾರಿ, ರಾಘವೇಂದ್ರ, ವಸಂತ ಉಪಸ್ಥಿತರಿದ್ದರು.





ಗುಲ್ಬರ್ಗಾ ಗ್ರಾಮೀಣ ಕ್ಷೇತ್ರದಲ್ಲಿ ಪಾದಯಾತ್ರೆ

ಗುಲ್ಬರ್ಗಾ ಗ್ರಾಮೀಣ ಮತಕ್ಷೇತ್ರದ ಅಭಿವೃದ್ಧಿಗಾಗಿ ಸಿಪಿಐ(ಎಂ) ನೇತೃತ್ವದಲ್ಲಿ ಈ ವಾರ 5 ದಿನಗಳ ಪಾದಯಾತ್ರೆ ಹಮ್ಮಿಕೊಳ್ಳಾಗಿದೆ. ಪಾದಯಾತ್ರೆಯನ್ನು ಪಕ್ಷದ ಧ್ವಜ ಕೋಟ್ಟು ನರೋಣಾ ಮಠದ ಮಾಹಾಂತ ಸ್ವಾಮೀಜಿ ಚಾಲನೆ ಕೊಟ್ಟರು. ಪಾದಯಾತ್ರೆ ನಡೆದು ಸಾಗುತ್ತಿರುವ ಪ್ರತಿ ಹಳ್ಳಿಗಳಲ್ಲೂ ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ಪಾದಯಾತ್ರೆಯ ನೇತೃತ್ವವನ್ನು ಮಾರುತಿ ಮಾನ್ಪಡೆ, ಶರಣಬಸಪ್ಪ ಮಮಶೆಟ್ಟಿ ಮತ್ತು ಮೇಘರಾಜ್ ಕಟಾರೆ ವಹಿಸಿದ್ದಾರೆ.



ಕಂಪ್ಲಿ

ಬಳ್ಳಾರಿ ಜಿಲ್ಲೆಯ ಕಂಪ್ಲಿ ಕ್ಷೇತ್ರದ ಜನಪರ ಅಭಿವೃದ್ಧಿಗಾಗಿ ಕುರುಗೋಡಿನ ಸಮುದಾಯ ಭವನದಲ್ಲಿ ಸಿಪಿಐ(ಎಂ) ರಾಜಕೀಯ ಸಮಾವೇಶವನ್ನು ಹಮ್ಮಿಕೊಂಡಿತ್ತು. ಸಮಾವೇಶವನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಯು.ಬಸವರಾಜ್, ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಆರ್.ಎಸ್.ಬಸವರಾಜ್ ಮುಂತಾದವರು ಮಾತನಾಡಿದರು.





ಗಂಗಾವತಿ

ಭೂಮಿ, ನಿವೇಶನ, ಉತ್ತಮ ಶಿಕ್ಷಣ, ಉದ್ಯೋಗ, ಆರೋಗ್ಯ ಹಾಗೂ ಸೌಹಾರ್ದತೆಗಳಿಗಾಗಿ; ಸೌಹಾರ್ದತೆ, ಏಕತೆ ಮತ್ತು ಕ್ಷೇತ್ರದ ಅಭಿವೃದ್ಧಿಗಾಗಿ ಸಿಪಿಐ(ಎಂ) ರಾಜಕೀಯ ಸಮಾವೇಶವನ್ನು 13 ಮಾರ್ಚ್ 2018ರಂದು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಮಾವೇಶವನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಕೊಪ್ಪಳ ಜಿಲ್ಲಾ ಕಾರ್ಯದರ್ಶಿ ಪಿ. ನಾಗರಾಜ್ ಮುಂತಾದವರು ಮಾತನಾಡಿದರು.

ಹಗರಿಬೊಮ್ಮನಹಳ್ಳಿ

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಜನಪರ ಅಭಿವೃದ್ಧಿಗಾಗಿ ಸಿಪಿಐ(ಎಂ) ರಾಜಕೀಯ ಸಮಾವೇಶವನ್ನು ಮಾರ್ಚ್ 16ರಂದು ಹಮ್ಮಿಕೊಂಡಿತ್ತು. ಸಮಾವೇಶವನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕೇಂದ್ರದ ಯು.ಬಸವರಾಜ್, ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಆರ್. ಎಸ್.ಬಸವರಾಜ್, ಬಿ.ಮಾಳಮ್ಮ ಮುಂತಾದವರು ಮಾತನಾಡಿದರು.





ಕೆ.ಪ್ರಕಾಶ ಅವರಿಗೆ ಡಾಕ್ಟರೇಟ್

‘ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿ: ಉಗಮ ಮತ್ತು ಬೆಳವಣಿಗೆ’ ಎಂಬ ವಿಷಯದಲ್ಲಿ ಕೆ.ಪ್ರಕಾಶ್ ಮಂಡಿಸಿದ ಮಹಾ ಪ್ರಬಂದಕ್ಕೆ ಡಾಕ್ಟರೇಟ್ ಪದವಿಯನ್ನು ನೀಡಲು ಹಂಪಿ ಕನ್ನಡ ವಿಶ್ವವಿದ್ಯಾಲಯವು ನಿರ್ದರಿಸಿದೆ. 2012–13 ನೆಯ ಸಾಲಿನಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಇತಿಹಾಸ ವಿಭಾಗದಲ್ಲಿ ಕೈಗೊಂಡ ಸಂಶೋಧನೆ ಗೆ ಖ್ಯಾತ ವಿದ್ವಾಂಸ, ಕನ್ನಡ ವಿಶ್ವವಿದ್ಯಾಲಯ ದ ಹಿರಿಯ ಪ್ರಾಧ್ಯಾಪಕರಾದ ಡಾ. ತಂಬಂಡ ವಿಜಯ್ ಪೂಣಚ್ಚ ರವರು ಮಾರ್ಗದರ್ಶನ ಮಾಡಿದ್ದಾರೆ. ಪ್ರಕಾಶ್ ಅವಿಭಜಿತ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಭಾಗದಲ್ಲಿ ಪದವಿ ವ್ಯಾಸಂಗ ಮಾಡಿದ್ದಾರೆ.

ಈ ಡಾಕ್ಟರೇಟ್ ಪದವಿಯನ್ನು 2018 ಮಾರ್ಚ್ 10 ರಂದು ಹಂಪಿ ವಿ.ವಿ.ಯ 'ನುಡಿ ಹಬ್ಬ' ದಲ್ಲಿ ಪ್ರಧಾನ ಮಾಡಲಾಗಿದೆ. ಸ್ವಲ್ಪ ವಿಳಂಬವಾದರೂ ನಿತ್ಯದ ಚಳುವಳಿಯ ಕಾರ್ಯಗಳ ನಡುವೆಯೇ ಅಧ್ಯಯನ, ಕ್ಷೇತ್ರ ಕಾರ್ಯ, ಸಂದರ್ಶನಗಳ ಮೂಲಕ ಸಂಶೋದನೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಪ್ರಕಾಶ್ ರವರಿಗೆ ತುಂಬು ಹೃದಯದ ಅಭಿನಂದನೆಗಳು.

– ಎಸ್.ವೈ.ಗುರುಶಾಂತ್

‘ದಿ ನಥಿಂಗ್ ಫ್ಯಾಕ್ಟರಿ’



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಚಿತ್ರದ ಕಲಾಪ್ರಪಂಚದಲ್ಲಿರುವಂತೆ ವಾಸ್ತವದಲ್ಲಿ ಎಲ್ಲವೂ ಸುಸೂತ್ರವಾಗಿ, ಸುಖಮಯವಾಗಿ ನಡೆಯುವುದು, ಬದಲಾಗುವುದು ಸಾಧ್ಯವಿಲ್ಲ ಎಂಬ ಅರಿವಿನೊಂದಿಗೆ ಚಿತ್ರವು ಸೂಚಿಸುವ, ಕಾರ್ಮಿಕ ಕೇಂದ್ರಿತ, ಮಾಲೀಕ–ಕಾರ್ಮಿಕ ಎಂಬ ಶೋಷಣಾತ್ಮಕ ಸಂಬಂಧಗಳಿಂದ ಹೊರತಾದ ಸಮಾಜವಾದಿ ಸಮಾಜದ ಸಾಧ್ಯತೆಯನ್ನು ಮನಗಾಣಬೇಕಾಗುತ್ತದೆ. ಮನುಷ್ಯರ ಮೂಲಭೂತ ಕ್ರಿಯಾಶಕ್ತಿ ಮತ್ತು ಸೃಜನಾತ್ಮಕ ಶಕ್ತಿಯಾದ ಶ್ರಮಶಕ್ತಿಯನ್ನು ಮೂಲೆಗುಂಪಾಗಿಸಿ, ಹಣವೆಂಬ ಮಾಯಾವಿ ಸರಕಿನೊಂದಿಗೆ ಪ್ರತಿಯೊಂದು ವಸ್ತು–ಕ್ರಿಯೆ–ಸೇವೆ–ಭಾವನೆ–ಆಶಯಗಳನ್ನು ವಿನಿಮಯಮಾಡಿಕೊಳ್ಳಬಯಸುವ ಹಣಕಾಸು ಬಂಡವಾಳದ ಹಿಡಿತದಿಂದ ಬಿಡಿಸಿಕೊಳ್ಳಲು ಸಮುದಾಯ ಶ್ರಮಶಕ್ತಿ ಕೇಂದ್ರಿತ ಸಹಕಾರ ಮತ್ತು ಸಾಮೂಹಿಕತೆಗಳು ಕೇವಲ ಫ್ಯಾಕ್ಟರಿಯನ್ನು ಮಾತ್ರವಲ್ಲ ಇಡೀ ಸಮಾಜವನ್ನೇ ಮುನ್ನೆಡೆಸಬಲ್ಲವು ಎಂಬುದು ಈ ಚಿತ್ರದ ಪ್ರಬಂಧ ಧ್ವನಿಯಾಗಿದೆ. ಇದರಿಂದಾಗಿ ಚಿತ್ರಕ್ಕೆ ಫ್ಯಾಕ್ಟರಿಯಿಂದ ಸಮಾಜಕ್ಕೆ–ದೇಶಗಳಿಗೆ ವಿಸ್ತರಿಸಬಲ್ಲ ರಾಜಕೀಯ ಸಾಂಕೇತಿಕತೆ ಪ್ರಾಪ್ತವಾಗುತ್ತದೆ.

ವಸಾಹತುಶಾಹಿ ಪೋರ್ಚುಗಲ್‌ಅನ್ನು 50 ವರ್ಷಗಳ ಕಾಲ ಆಳಿದ ಫ್ಯಾಸಿಸ್ಟ್ ಸರ್ಕಾರವನ್ನು ಸೇನೆಯ ಯುವ ಆಫೀಸರ್‌ಗಳ ಮುಂದಾಳತ್ವದ ಸೈನ್ಯಕ್ರಾಂತಿಯು ಕಿತ್ತೊಗೆದು ಈಗ್ಗೆ ನಾಲ್ಕು ದಶಕಗಳೇ ಕಳೆದಿವೆ. ವಿಶ್ವದ ಕಾರ್ಮಿಕವರ್ಗಕ್ಕೆ ಮತ್ತು ಜನಸಮುದಾಯಕ್ಕೆ ಕಳೆದ ಮೂರು ದಶಕಗಳ ನವಉದಾರವಾದವು ವಿಶ್ವದಾದ್ಯಂತ ಮಾಡಿರುವ ಅನಾಹುತಗಳು ಭಾರತವನ್ನು ತಟ್ಟಿದಂತೆ ಪೋರ್ಚುಗಲ್‌ನ ಶ್ರಮಿಕವರ್ಗವನ್ನೂ ತೀವ್ರವಾಗಿ ತಟ್ಟಿವೆ. ಸಾಮ್ರಾಜ್ಯಶಾಹಿಯು ನಿರಂತರವಾಗಿ ಜಾಗತಿಕವಾಗಿ ಎದುರಿಸುತ್ತಿರುವ ತೀವ್ರ ಬಿಕ್ಕಟ್ಟುಗಳಿಂದ ಪಾರಾಗಬೇಕೆಂಬ ತನ್ನ ಹತಾಶ ಯತ್ನದಲ್ಲಿ ಶ್ರಮಿಕವರ್ಗವನ್ನು ಗುರಿಯಾಗಿರಿಸಿ ನಾನಾ ಬಗೆಯ ರಾಜಕೀಯ ಕಸರತ್ತುಗಳನ್ನು ಮಾಡುತ್ತಿದೆ. ಇದು ಒಂದು ಕಡೆ ಶ್ರೀಮಂತರ ಆಳ್ವಿಕೆಗೆ, ನವಫ್ಯಾಸೀವಾದಕ್ಕೆ ಕಾರಣವಾಗುತ್ತಾ ಮತ್ತೊಂದುಕಡೆ ಜಾಗತಿಕವಾಗಿ ಶ್ರಮಿಕವರ್ಗದ ಐಕ್ಯತೆಗೂ ದಾರಿಮಾಡಿಕೊಡುತ್ತಿದೆ. ಕಳೆದ ಮತ್ತು ಈ ತಲೆಮಾರಿನ ಪ್ರಗತಿಪರ ಬುದ್ಧಿಜೀವಿಗಳು, ರಾಜಕೀಯ ಚಿಂತಕರು, ಮತ್ತು ಎಡಪಂಥೀಯರಲ್ಲದವರೂ ಸಹ ‘ಕ್ಯಾಪಿಟಲ್’ನ ಅಧ್ಯಯನದತ್ತ ಮತ್ತೆ ಮುಖಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪೋರ್ಚುಗಲ್‌ನ ಯುವ ಚಿತ್ರನಿರ್ದೇಶಕ ಪೇದ್ರೊ ಪಿನಹೋ ‘ದಿ ನಥಿಂಗ್ ಫ್ಯಾಕ್ಟರಿ’ ಎಂಬ ಅಪೂರ್ವವಾದ ಕಥಾಚಿತ್ರವನ್ನು ನಿರ್ಮಿಸಿದ್ದಾನೆ.

ಶ್ರಮಿಕವರ್ಗವನ್ನು ಕೇಂದ್ರಸ್ಥಾನದಲ್ಲಿಟ್ಟು, ಸಮಾಜವಾದೀ ಸಹಕಾರ ತತ್ವ ಆಧಾರಿತ ಉದ್ಯಮ ಮತ್ತು ಉತ್ಪಾದನಾ ಸಂಬಂಧಗಳನ್ನು ಈ ಚಿತ್ರವು ನೋಡುಗರ ಪರಿಶೀಲನೆಗೆ ಒಪ್ಪಿಸುತ್ತದೆ. 3 ಗಂಟೆಗಳ ಅವಧಿಯಲ್ಲಿ, ಸಂಗೀತಮಯವಾದ ಮತ್ತು ಮಾರ್ಕ್ಸ್‌ವಾದೀ ತಾತ್ವಿಕ ಚರ್ಚೆ ಮತ್ತು ಸಾಮ್ರಾಜ್ಯವಾದದ ಪರ್ಯಾಯ ವ್ಯವಸ್ಥೆಗಳ ಚಿತ್ರಣ ಇಲ್ಲಿದೆ. ಜಗತ್ತಿನ ಪ್ರತಿಷ್ಠಿತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು 15 ನಾಮನಿರ್ದೇಶನ ಗೌರವ ಮತ್ತು 13 ಉನ್ನತ ಪ್ರಶಸ್ತಿಗಳನ್ನು ಪಡೆದಿರುವ ಈ ಚಿತ್ರವು ಕಳೆದ ತಿಂಗಳು ನಡೆದ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲೂ ಪ್ರದರ್ಶಿತವಾಗಿತ್ತು. ಇದಕ್ಕೆ ಪೂರಕವಾಗಿ ಜರ್ಮನಿಯ ‘ಯಂಗ್ ಕಾರ್ಲ್ ಮಾರ್ಕ್ಸ್’ ಎಂಬ ಜೀವನಕಥಾಚಿತ್ರವೂ ಇದೇ ಚಿತ್ರೋತ್ಸವದಲ್ಲಿ ಪ್ರದರ್ಶಿತವಾದದ್ದು ಗಮನಾರ್ಹ.

ಫ್ರಾನ್ಸಿನ ಲೂಮಿಯೇ ಸಹೋದರು ನಿರ್ಮಿಸಿದ ವಿಶ್ವದ ಮೊತ್ತಮೊದಲ ಚಲನಚಿತ್ರದ ವಸ್ತು, ಫ್ಯಾಕ್ಟರಿಯಿಂದ ಹೊರಬರುತ್ತಿರುವ ಕಾರ್ಮಿಕರು ಎನ್ನುವುದು ಮತ್ತು ಪೇದ್ರೋ ತರಬೇತಿ ಪಡೆದದ್ದು ಪ್ಯಾರಿಸ್‌ನ ಲೂಯಿ ಲೂಮಿಯೇ ಚಲನಚಿತ್ರ ತರಬೇತಿ ಸಂಸ್ಥೆಯಲ್ಲಿ ಎನ್ನುವ ಸಂಗತಿಗಳು ಆಕಸ್ಮಿಕ, ಅನುದ್ದೇಶಿತ ಆದರೆ ಕುತೂಹಲಕರ. ಪೇದ್ರೋ ಪಿನ್‌ಹೋ ಸಿನಿಮಟೋಗ್ರಫಿ ಮತ್ತು ಚಲನಚಿತ್ರ ನಿರ್ದೇಶನ ಎರಡರಲ್ಲೂ ಪರಿಣತ. ಸಾಕ್ಷ್ಯಚಿತ್ರ ಮತ್ತು ಮಧ್ಯಾವಧಿಯ ಕಥಾಚಿತ್ರ ನಿರ್ಮಾಣದಲ್ಲಿ ಪಳಗಿ ಈಗ ನಿರ್ಮಿಸಿರುವ ‘ದಿ ನಥಿಂಗ್ ಫ್ಯಾಕ್ಟರಿ’ ಪೇದ್ರೋ ನ ಪೂರ್ಣಾವಧಿಯ ಚೊಚ್ಚಲ ಚಿತ್ರ.

ಪೋರ್ಚುಗಲ್ ನ ಫಾತಾಲಿವಾ ಎಂಬ ಲಿಫ್ಟ್ ಫ್ಯಾಕ್ಟರಿಯನ್ನು ಅದರ ಆಡಳಿತ ಮಂಡಳಿ ಮುಚ್ಚಲು ಯತ್ನಿಸಿದಾಗ ಅಲ್ಲಿನ ಕಾರ್ಮಿಕರೇ ಅದನ್ನು ವಹಿಸಿಕೊಂಡು 1975 ರಿಂದ 2016ರ ವರೆಗೆ ಸಾಮೂಹಿಕ ಸಹಕಾರತತ್ವದ ಆಧಾರದಮೇಲೆ ನಡೆಸಿದರು. ಈ ಸತ್ಯಕತೆಯನ್ನೇ ಆಧರಿಸಿ ಪೇದ್ರೋ ‘ದಿ ನಥಿಂಗ್ ಫ್ಯಾಕ್ಟರಿ’ ಯನ್ನು ನಿರ್ಮಿಸಿದ್ದಾರೆ. ಅಲ್ಲದೆ ಶ್ರಮಿಕರಿಗೆ ಸಂಬಂಧಿಸಿದ ವಸ್ತುವನ್ನಿಟ್ಟುಕೊಂಡು, ಫ್ಯಾಸಿನ್ಯಾತ್ (ಫ್ಯಾಕ್ಟರಿ ವಿದೌಟ್ ಎ ಪ್ಯಾಟರ್ನ್) ಎಂಬ ಚಿತ್ರವೂ ಸೇರಿದಂತೆ ಅನೇಕ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿರುವ ಇಟಲಿಯ ಪ್ರಖ್ಯಾತ ಚಿತ್ರನಿರ್ದೇಶಕ ಡೇನಿಯಲ್ ಇನಕಾಲ್ಕತೆರ್ರಾ ಅವರನ್ನು, ಕಾರ್ಲ್ ಮಾರ್ಕ್ಸ್‌ನನ್ನು ಹೋಲುವ ಮೇಕಪ್ಪಿನೊಂದಿಗೆ, ಪ್ರಸ್ತುತ ಚಿತ್ರದಲ್ಲಿ ಸಾಕ್ಷ್ಯಚಿತ್ರ ನಿರ್ಮಾಪಕನ ಪಾತ್ರವನ್ನಾಗಿ ಸೇರಿಸಲಾಗಿದೆ. ‘ನಥಿಂಗ್ ಫ್ಯಾಕ್ಟರಿ’ಯ ಕಾರ್ಮಿಕರ ಚರ್ಚೆಯಲ್ಲಿ ಈತ ಪಾಲುದಾರನಾಗಿಯೂ, ಸಾಕ್ಷಿಯಂತೆಯೂ, ಸ್ಫೂರ್ತಿದಾಯಕ ಸಲಹೆಗಾರನಂತೆಯೂ ವರ್ತಿಸುತ್ತಾನೆ.

ಮಧ್ಯರಾತ್ರಿಯ ನಿರ್ಜನತೆಯಲ್ಲಿ ಫ್ಯಾಕ್ಟರಿಯ ಮಾಲೀಕರು ಯಂತ್ರಗಳನ್ನು ಕದ್ದುಸಾಗಿಸುತ್ತಿದ್ದಾರೆಂಬ ಸುದ್ದಿ ಕಾರ್ಮಿಕರಿಗೆ ತಲುಪುತ್ತದೆ. ಅವರ ಊಹೆ ನಿಜವಾಗುವಂತೆ ಫ್ಯಾಕ್ಟರಿಯ ಮಾಲೀಕರು ಫ್ಯಾಕ್ಟರಿಯನ್ನು ಮುಚ್ಚಲು ಹುನ್ನಾರ ನಡೆಸಿರುತ್ತಾರೆ. ಅದನ್ನು ನಿಷ್ಫಲಗೊಳಿಸಲು ಅವರೆಲ್ಲರೂ ಇಡೀರಾತ್ರಿ ಎಚ್ಚರವಿದ್ದು, ಹಗಲು ಕೆಲಸವಿಲ್ಲದಿದ್ದರೂ ಫ್ಯಾಕ್ಟರಿಯಲ್ಲೇ ತಳವೂರುತ್ತಾರೆ. ಸಾಮಾನ್ಯವಾಗಿ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಕಡೆಯ ಅಸ್ತ್ರವಾಗಿ ಕೆಲಸ ನಿಲ್ಲಿಸಿ ಮುಷ್ಕರ ಹೂಡುತ್ತಾರೆ. ಇಲ್ಲಿ ಪರಿಸ್ಥಿತಿ ತಿರುವು ಮುರುವಾಗಿದೆ. ಮಾಲೀಕರು ಫ್ಯಾಕ್ಟರಿ ಮುಚ್ಚಲು ಹವಣಿಸಿ ಕೆಲಸ ಮಾಡಿಸಲು ನಿರಾಕರಿಸುತ್ತಿದ್ದಾರೆ. ಆದರೆ ಕಾರ್ಮಿಕರು ಫ್ಯಾಕ್ಟರಿಯನ್ನು ಮುಚ್ಚಗೊಡದೆ ಕೆಲಸಕ್ಕಾಗಿ ಮುಷ್ಕರ ಹೂಡಿದ್ದಾರೆ.

ಮಾಮೂಲಿನಂತೆ ಮಾಲೀಕರ ಪರವಾಗಿ ಮಾನವಸಂಪನ್ಮೂಲ ಅಧಿಕಾರಿಯು ಕಾರ್ಮಿಕರಲ್ಲಿ ಒಬ್ಬೊಬ್ಬರನ್ನೇ ಕರೆದು ಆಮಿಷ, ಬೆದರಿಕೆಗಳನ್ನೊಡ್ಡಿ ಅವರವರಲ್ಲೇ ಒಡಕನ್ನುಂಟುಮಾಡಲು ಯತ್ನಿಸುತ್ತಾರೆ. ಸಾಲದ್ದಕ್ಕೆ ಅವರ ಕುಟುಂಬದವರನ್ನು ಖಾಸಗಿಯಾಗಿ ಕಂಡು ಆಮಿಷ–ಅಸ್ಥಿರತೆಯ ಹೆದರಿಕೆ ಮೂಡಿಸಿ ಕಾರ್ಮಿಕರ ಒಗ್ಗಟ್ಟನ್ನು ಮುರಿಯಲು ಯತ್ನಿಸುತ್ತಾರೆ. ಕಾರ್ಮಿಕರಲ್ಲೂ ಅನೇಕ ಬಗೆಯ ಮನಸ್ಥಿತಿ–ಧೋರಣೆಯವರಿದ್ದಾರೆ. ಕೆಲವರು ಆದದ್ದಾಯಿತು ಏನು ಮಾಡಲು ಸಾಧ್ಯ ಎನ್ನುವವರು. ಮತ್ತೆ ಕೆಲವರು ನಿರುದ್ಯೋಗ ಅನೇಕ ಅವಕಾಶಗಳಿಗೆ ಬಾಗಿಲು ತೆರೆಯುತ್ತದೆ ಎಂದು ನಂಬುವವರು. ಇನ್ನೂ ಕೆಲವರು ಕೊಟ್ಟಷ್ಟು ಪರಿಹಾರವನ್ನು ಪಡೆದು ಹೊರ ಹೋಗುವುದೇ ಒಳ್ಳೆಯದು, ಇಲ್ಲದಿದ್ದರೆ ಅದೂ ಸಿಗದೇ ಹೋಗಬಹುದು ಎಂಬ ‘ಜಾಣ್ಮೆ’ಯುಳ್ಳವರು. ಆದರೆ ಎಲ್ಲರೂ ಎಲ್ಲರಿಗೂ ತಮ್ಮ ಮನಸ್ಥಿತಿಯನ್ನು ಹೇಳಿಕೊಳ್ಳುತ್ತಾರೆಯೇ ಹೊರತು ಯಾರೂ ಹೊರಹೋಗುವುದಿಲ್ಲ. ಕಡೆಯ ಅಸ್ತ್ರವಾಗಿ ಮಾಲೀಕರು ಪೋಲೀಸರನ್ನು ಕಳಿಸುತ್ತಾರೆ. ಕಾರ್ಮಿಕರು ಯಾವ ವಿಧ್ವಂಸಕ ಕೆಲಸವನ್ನೂ ಮಾಡಿಲ್ಲವಾದ್ದರಿಂದ ಮತ್ತು ತಾಂತ್ರಿಕವಾಗಿ ಅವರು ಫ್ಯಾಕ್ಟರಿಯ ಒಳಗೇ ಇದ್ದುಕೊಂಡು ಕೆಲಸಕ್ಕಾಗಿ ಕಾಯುತ್ತಿದ್ದಾರಾದ್ದರಿಂದ ಅಲ್ಲಿ ಕಾನೂನಿನ ತೊಡಕು ಏಳುವುದಿಲ್ಲ. ಹೀಗಾಗಿ ಕಾರ್ಮಿಕರ ಉಪಸ್ಥಿತಿಯು ಅವರು ‘ಫ್ಯಾಕ್ಟರಿಯನ್ನು ವಶಪಡಿಸಿಕೊಂಡ ಕೃತ್ಯ’ವೆಂದೂ ಹೇಳುವಂತಿಲ್ಲವಾದ್ದರಿಂದ ಪೋಲೀಸರೂ ಏನೂ ಮಾಡುವ ಹಾಗಿಲ್ಲ.



ಹಗಲು ರಾತ್ರಿ ಫ್ಯಾಕ್ಟರಿಯಲ್ಲಿ ಕೆಲಸವಿಲ್ಲದೆ ಉಳಿಯುವ ಕಾರ್ಮಿಕರು ಮಾರ್ಕ್ಸ್‌ವಾದದಲ್ಲಿನ ಪ್ರಧಾನ ಅಂಶಗಳಾದ ‘ಸರಕು ಮಾಂತ್ರಿಕತೆ’ (ಕಮಾಡಿಟಿ ಫೆಟಿಷಿಸಂ), ಹುಟ್ಟುವಾಗಲೇ ಸಮಾಜದ ಆಳುವವರ್ಗದ ತಾತ್ವಿಕತೆಯನ್ನು ಹೊತ್ತು ‘ಪ್ರಜೆ’ಯಾಗಿ ಹುಟ್ಟಿ ವ್ಯಕ್ತಿತ್ವವನ್ನು ಕಳೆದುಕೊಂಡು ಪರಕೀಯತೆಯನ್ನು ಅನುಭವಿಸಬೇಕಾಗುವ ಮನುಷ್ಯರ ಅನಿವಾರ್ಯತೆಯನ್ನು, ಅವರ ನಡುವಿನ ಉತ್ಪಾದನಾ ಸಂಬಂಧಗಳನ್ನು ಕುರಿತು ಚರ್ಚಿಸಿ ಸ್ಪಷ್ಟತೆ ಗಳಿಸಿಕೊಳ್ಳುತ್ತಾರೆ. ಇನ್ನೊಂದು ಕಡೆ, ಫ್ಯಾಕ್ಟರಿಯ ಹೊರಗಿನ ಸುಂದರ ಹಸಿರು ಬಯಲಿನಲ್ಲಿ ಯುವ ಕಾರ್ಮಿಕ ಮತ್ತು ಅವನ ತಂದೆ, ಪೋರ್ಚುಗಲ್‌ನ 1974 ರ ಕ್ರಾಂತಿಯ ಸಮಯದಲ್ಲಿ ನೆಲದಲ್ಲಿ ‘ಹಿರಿಯರು’ ಹೂತಿಟ್ಟ ಬಂದೂಕುಗಳನ್ನು ಹೊರತೆಗೆಯಲು ಯತ್ನಿಸುತ್ತಾರೆ. ಆದರೆ ನಾಲ್ಕು ದಶಕಗಳ ಹಿಂದೆ ಹೂತಿಟ್ಟ ಆಯುಧಗಳನ್ನು ಈಗ ಬಳಸುವುದು ಹೇಗೆ? ಎಂಬ ಯುವಕನ ಅನುಮಾನದಿಂದಾಗಿ ಆಯುಧದ ಬಳಕೆಯ ಯೋಚನೆ ತಿರಸ್ಕೃತವಾಗುತ್ತದೆ. ಆ ಸ್ಥಳದಲ್ಲಿ ಕಣ್ಣಿಗೆ ಬೀಳುವ ಉಷ್ಟ್ರಪಕ್ಷಿಗಳು ಸಮುದಾಯದಿಂದ ದೂರವಾದ ಸಶಸ್ತ್ರ ಹೋರಾಟ ಸೂಕ್ತವಾದದ್ದಲ್ಲ ಎಂಬ ಧ್ವನಿಯನ್ನು ಹೊರಡಿಸುವಂತೆ ತೋರುತ್ತದೆ. ಈ ಮಧ್ಯೆ ಆಗೀಗ ಕಾರ್ಮಿಕರ ಪೈಕಿಯೇ ಒಬ್ಬನಾದ ಹಾಡುಗಾರನ ತಾಳಕ್ಕೆ ಎಲ್ಲರೂ ಹಾಡಿ, ನರ್ತಿಸುತ್ತಾರೆ.

ಇವೆಲ್ಲವುಗಳ ಫಲಶೃತಿಯಾಗಿ ಫ್ಯಾಕ್ಟರಿಯನ್ನು ತಾವೇ ವಹಿಸಿಕೊಂಡು ಸಾಮೂಹಿಕ ಜವಾಬ್ದಾರಿ, ಪಾಲುದಾರಿಕೆ ಮತ್ತು ಸಹಕಾರ ತತ್ವಗಳಿಗನುಸಾರವಾಗಿ ನಡೆಸಬಾರದೇಕೆ ಎಂಬ ಯೋಚನೆ ‘ಕೆಲಸಕ್ಕಾಗಿ ಮುಷ್ಕರಮಾಡುವ’ ಕಾರ್ಮಿಕರಿಗೆ ಹೊಳೆಯುತ್ತದೆ. ಹಾಗೆ ಹೊಳೆದದ್ದೇ ತಡ ಎಲ್ಲವೂ ನಿರಾಳವಾಗುತ್ತದೆ. ಯಾರ್‍ಯಾರಿಗೆ ಯಾವುದ್ಯಾವುದರಲ್ಲಿ ಪರಿಣತಿ ಇದೆಯೋ ಅವರು ಆ ಕೆಲಸದ ಜವಾಬ್ದಾರಿ ವಹಿಸುತ್ತಾರೆ. ಅವರ ಪ್ರಯತ್ನದಲ್ಲಿ ಅರ್ಜೆಂಟೀನಾದಿಂದ ಲಿಫ್ಟ್‌ಗಳಿಗಾಗಿ ಬೇಡಿಕೆ ಬರುತ್ತದೆ. ಚಿತ್ರದ ಕೊನೆಯ ದೃಶ್ಯದಲ್ಲಿ, ದೂರಚಿತ್ರದ ಚೌಕಟ್ಟಿನಲ್ಲಿ, ಫ್ಯಾಕ್ಟರಿಯ ಚಿಮಣಿಯಿಂದ ಹೊಗೆ ಹೊರಬರುವುದರೊಂದಿಗೆ ಚಿತ್ರ ಮುಗಿಯುತ್ತದೆ.

ಚಿತ್ರದ ಪಾತ್ರಗಳಲ್ಲಿ ನಟಿಸಿರುವ ವ್ಯಕ್ತಿಗಳ್ಯಾರೂ ತರಬೇತಿ ಪಡೆದ ನಟರಲ್ಲ, ಬಹುಮಟ್ಟಿಗೆ ಕಾರ್ಮಿಕರೇ ಎಂಬುದು ‘ದಿ ನಥಿಂಗ್ ಫ್ಯಾಕ್ಟರಿಯ’ ವಿಶೇಷ. ಝೆ ಎನ್ನುವ ಯುವ ಕಾರ್ಮಿಕ ನಗ್ನತೆಯ ಹಂಗಿಲ್ಲದೆ ತನ್ನ ಹೆಂಡತಿಯೊಂದಿಗೆ ಕೂಡುವ ದೃಶ್ಯದ ಸ್ವೋಪಜ್ಞತೆ ಚಿತ್ರದ ಮತ್ತೊಂದು ವಿಶೇಷ.

ಚಿತ್ರದ ಕಲಾಪ್ರಪಂಚದಲ್ಲಿರುವಂತೆ ವಾಸ್ತವದಲ್ಲಿ ಎಲ್ಲವೂ ಸುಸೂತ್ರವಾಗಿ, ಸುಖಮಯವಾಗಿ ನಡೆಯುವುದು, ಬದಲಾಗುವುದು ಸಾಧ್ಯವಿಲ್ಲ ಎಂಬ ಅರಿವಿನೊಂದಿಗೆ ಚಿತ್ರವು ಸೂಚಿಸುವ, ಕಾರ್ಮಿಕ ಕೇಂದ್ರಿತ, ಮಾಲೀಕ–ಕಾರ್ಮಿಕ ಎಂಬ ಶೋಷಣಾತ್ಮಕ ಸಂಬಂಧಗಳಿಂದ ಹೊರತಾದ ಸಮಾಜವಾದಿ ಸಮಾಜದ ಸಾಧ್ಯತೆಯನ್ನು ಮನಗಾಣಬೇಕಾಗುತ್ತದೆ. ಮನುಷ್ಯರ ಮೂಲಭೂತ ಕ್ರಿಯಾಶಕ್ತಿ ಮತ್ತು ಸೃಜನಾತ್ಮಕ ಶಕ್ತಿಯಾದ ಶ್ರಮಶಕ್ತಿಯನ್ನು ಮೂಲೆಗುಂಪಾಗಿಸಿ, ಹಣವೆಂಬ ಮಾಯಾವಿ ಸರಕಿನೊಂದಿಗೆ ಪ್ರತಿಯೊಂದು ವಸ್ತು–ಕ್ರಿಯೆ–ಸೇವೆ–ಭಾವನೆ–ಆಶಯಗಳನ್ನು ವಿನಿಮಯಮಾಡಿಕೊಳ್ಳಬಯಸುವ ಹಣಕಾಸು ಬಂಡವಾಳದ ಹಿಡಿತದಿಂದ ಬಿಡಿಸಿಕೊಳ್ಳಲು ಸಮುದಾಯ ಶ್ರಮಶಕ್ತಿ ಕೇಂದ್ರಿತ ಸಹಕಾರ ಮತ್ತು ಸಾಮೂಹಿಕತೆಗಳು ಕೇವಲ ಫ್ಯಾಕ್ಟರಿಯನ್ನು ಮಾತ್ರವಲ್ಲ ಇಡೀ ಸಮಾಜವನ್ನೇ ಮುನ್ನೆಡೆಸಬಲ್ಲವು ಎಂಬುದು ಈ ಚಿತ್ರದ ಪ್ರಬಂಧ ಧ್ವನಿಯಾಗಿದೆ. ಇದರಿಂದಾಗಿ ಚಿತ್ರಕ್ಕೆ ಫ್ಯಾಕ್ಟರಿಯಿಂದ ಸಮಾಜಕ್ಕೆ–ದೇಶಗಳಿಗೆ ವಿಸ್ತರಿಸಬಲ್ಲ ರಾಜಕೀಯ ಸಾಂಕೇತಿಕತೆ ಪ್ರಾಪ್ತವಾಗುತ್ತದೆ.

ಪ್ರಾರಂಭದಲ್ಲಿ ಉದ್ದೇಶಿತ ಚಿತ್ರದ ನಿರ್ಮಾಪಕನಾಗಿದ್ದ ಪೇದ್ರೊನ ಸ್ನೇಹಿತನಿಗೆ ಸಂಗೀತಮಯ ಚಿತ್ರವೊಂದನ್ನು ನಿರ್ಮಿಸುವ ಇರಾದೆಯಿತ್ತು. ಯಾಕೋ ಏನೋ ಅವನು ಚಿತ್ರನಿರ್ಮಾಣದಿಂದ ಹಿಂದೆ ಸರಿದಮೇಲೆ ಪೇದ್ರೋ ಒಬ್ಬನೇ ಚಿತ್ರನಿರ್ಮಾಣದಲ್ಲಿ ಮುಂದುವರೆದ. ಆಗಿದ್ದ ಸಂಗೀತವನ್ನು ಉಳಿಸಿಕೊಂಡು ತನ್ನ ಕಲ್ಪನೆಯ ‘ದಿ ನಥಿಂಗ್ ಫ್ಯಾಕ್ಟರಿ’ ಮಾಡಿದ. ಚಿತ್ರದ ಸ್ವರೂಪ ಬದಲಾದರೂ ಸಂಗೀತ–ನೃತ್ಯದ ಭಾಗ ಚಿತ್ರಕ್ಕೆ ಸೇರ್ಪಡೆಯಾಯಿತು. 3 ಗಂಟೆಗಳ ಸುದೀರ್ಘ ಚಿತ್ರದಲ್ಲಿ ಸುಮಾರು 45 ನಿಮಿಷಗಳಷ್ಟು ತಾತ್ವಿಕ ಚರ್ಚೆಯೇ ಇದೆ. ಸಾಂದರ್ಭಿಕವಾಗಿ ಬರುವ ಸಂಗೀತ–ನೃತ್ಯದಿಂದಾಗಿ ಚಿತ್ರಕ್ಕೆ ಏಕತಾನತೆ ತಪ್ಪಿದೆ. ಯಾಂತ್ರಿಕವಾಗಿ ಚಿತ್ರದ ವರ್ಗೀಕರಣಮಾಡುವವರು ಇದನ್ನು ಸಂಗೀತಮಯ ಚಿತ್ರ ಎಂದು ಕರೆದಿದ್ದಾರೆ. ಚಲನಚಿತ್ರ ಎಂಬುದು ಕಲಾಭಿವ್ಯಕ್ತಿಯಾಗಿ ಮಾಡಿದ ಗಂಭೀರ ಚಿಂತನಾಕ್ರಮವೂ ಹೌದು ಎಂಬುದನ್ನು ಅರಿಯದ ಪ್ರೇಕ್ಷಕರು ಚಿತ್ರದ ವೈಚಾರಿಕತೆಯನ್ನು ತಟ್ಟಿಕೊಳ್ಳಲಾಗದೆ ಪ್ರದರ್ಶನದ ಅರ್ಧಕ್ಕೇ ಹೊರನಡೆದಿದ್ದಾರೆ. ವ್ಯವಸ್ಥೆಯ ಗಂಟುಗಳನ್ನು ಬಿಡಿಸಿಕೊಳ್ಳಬಲ್ಲ ಮಾನವೀಯ ಸಂಬಂಧಗಳ ಹುಡುಕಾಟದಲ್ಲಿ ತೊಡಗಿದ ಚಿತ್ರಸಹೃದಯರು ಈ ಚಿತ್ರವನ್ನು ಓದಿ–ನೋಡಿ–ಚಿಂತಿಸಿ–ಅನುಭವಿಸಿ ಸಂತೋಷಪಟ್ಟಿದ್ದಾರೆ.

ಸಾಮಾನ್ಯ ಮನುಷ್ಯರು ಮುಖ–ಮನಸ್ಸುಗಳಿಲ್ಲದ ಬಂಡವಾಳವಾದಿ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗಿ ನರಳುವುದನ್ನು ಇಂಗ್ಲೆಂಡಿನ ಹೆಸರಾಂತ ಚಿತ್ರನಿರ್ದೇಶಕ ಕೆನ್ ಲೋಚ್ ಸಮರ್ಥವಾಗಿ ಚಿತ್ರಿಸುತ್ತಾನೆ. ಪೋರ್ಚುಗಲ್‌ನ ಮತ್ತೊಬ್ಬ ಪ್ರತಿಭಾವಂತ ನಿರ್ದೇಶಕ ಮೈಗ್ಯುಯೆಲ್ ಗೋಮ್ಸ್ ಜನಸಾಮಾನ್ಯರು ಹೊಟ್ಟೆ–ಬಟ್ಟೆ ಕಟ್ಟಿ ಬಲವಂತವಾಗಿ ‘ಸರಳ’ ಜೀವನ ಮಾಡಬೇಕಾದ ನರಳಿಕೆಗಳನ್ನು ವ್ಯಂಗ್ಯವಾಗಿ ಅರೇಬಿಯನ್ ನೈಟ್ಸ್–ಒಂದು ಟ್ರಿಲಜಿ ಎಂಬ 6 ಗಂಟೆಗಳ ಚಿತ್ರಸರಣಿಯಲ್ಲಿ ಬಿಂಬಿಸಿದ್ದಾನೆ. ಜಾಗತಿಕವಾಗಿ ಜನಸಾಮಾನ್ಯರ ಕಷ್ಟಗಳು ಹೆಚ್ಚಿದಂತೆ, ಇಂಥ ನಿರ್ದೇಶಕರ ಸಂಖ್ಯೆಯೂ ವರ್ಷವರ್ಷವೂ ಹೆಚ್ಚುತ್ತಿದೆ. ಆದರೆ ಕನ್ನಡದ ಪ್ರತಿಭಾವಂತ ಚಿತ್ರ ನಿದೇಶಕರು, ಸಂವೇದನಾಶೀಲ ಚಿತ್ರಸಹೃದಯರು ಶ್ರಮದ ಯಾಂತ್ರೀಕರಣ, ಶ್ರಮಿಕರ ತೀವ್ರ ನಿರುದ್ಯೋಗ, ಶ್ರೀಮಂತರ ಆರ್ಥಿಕ ಅಪರಾಧಗಳು, ಬ್ಯಾಂಕುಗಳ ದಿವಾಳಿತನ, ಮಧ್ಯಮ ಹಾಗೂ ಸಣ್ಣ ಉದ್ಯಮಗಳು ದಿನನಿತ್ಯ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟುಗಳ– ಈ ದಿನಗಳಲ್ಲಿ ತಮ್ಮನ್ನು ಎಲ್ಲಿ, ಹೇಗೆ ಗುರ್ತಿಸಿಕೊಳ್ಳುತ್ತಾರೆ ಎಂಬ ಪ್ರಶ್ನೆ ಏಳುತ್ತದೆ. ●

ಕುರುಡು ಮಾಧ್ಯಮಗಳೂ ನೋಡುವಂತೆ ಮಾಡಿದ ಮಹಾರಾಷ್ಟ್ರ ರೈತರು



"ಮಹಾರಾಷ್ಟ್ರದ ರೈತರು ಕಿವುಡರು ಕೇಳುವಂತೆ ಕುರುಡರು ನೋಡುವಂತೆ ಮಾಡಿದ್ದಾರೆ."– ಪಿ ಸಾಯಿನಾಥ್

ಮುಖ್ಯವಾಹಿನಿ ಮಾಧ್ಯಮಗಳ ಮುಜುಗರ ಅರ್ಥವಾಗುವಂತಹದ್ದು. ಕೆಲವೇ ದಿನಗಳ ಹಿಂದೆ ತ್ರಿಪುರಾದ ಚುನಾವಣಾ ಫಲಿತಾಂಶದ ನಂತರ ಸಿಪಿಐ(ಎಂ) ಮತ್ತು ಇಡೀ ಎಡ ಚಳುವಳಿಯನ್ನು (ಕೇರಳ ಬಿಟ್ಟರೆ) ಭಾರತದ ರಾಜಕಾರಣದಿಂದ 'ರೈಟ್–ಆಫ್' ಮಾಡಿದ್ದ ಮಾಧ್ಯಮಗಳಿಗೆ, ಕೇಸರಿ ಸರಕಾರವನ್ನು ಕೆಂಪು ಚಳುವಳಿ ಬೀದಿ ಹೋರಾಟದಲ್ಲಿ ಮಣಿಸಬಲ್ಲುದು ಎಂಬುದನ್ನು ಅರಗಿಸಿಕೊಳ್ಳುವುದು ಅದನ್ನು ಒಪ್ಪಿಕೊಳ್ಳುವುದು ಕಷ್ಟವಾಗುವಂತಹುದೇ. ಮಾಧ್ಯಮ ಮಾಲಕರಿಗೆ, ಸಂಪಾದಕರಿಗೆ, ವರದಿಗಾರರಿಗೆ ಮಾತ್ರವಲ್ಲ ಅಂಕಣಕಾರರು ವಿಶ್ಲೇಷಕರ 'ವಿಶ್ಲೇಷಣೆ'ಗೂ ಇದು ದಕ್ಕಲಿಲ್ಲ.–ವಸಂತರಾಜ ಎನ್.ಕೆ.

ಮಹಾರಾಷ್ಟ್ರದ ಕಿಸಾನ್ ಲಾಂಗ್ ಮಾರ್ಚ್ ಫಡಣವೀಸ್ ಬಿಜೆಪಿ ಸರಕಾರವನ್ನು ಮಣಿಸಿದ್ದು ಮಾತ್ರವಲ್ಲ, ನಮ್ಮ ಕುರುಡ–ಕಿವುಡ "ಮುಖ್ಯವಾಹಿನಿ ಮಾಧ್ಯಮ"ಗಳನ್ನು ನೋಡುವಂತೆ ಕೇಳುವಂತೆ ಮಾಡಿದೆ. ಅವರ ಕೆಚ್ಚು ದೃಢತೆ ಜನರನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಮೊದಲ ದಿನದಿಂದಲೂ ಸೆಳೆದಿತ್ತು. ಆದರೆ ಮುಖ್ಯವಾಹಿನಿ ಮಾಧ್ಯಮಗಳು ಮೊದಲ ಕೆಲವು ದಿನಗಳಲ್ಲಿ "ಕಿಸಾನ್ ಲಾಂಗ್ ಮಾರ್ಚ್"ನ್ನು ಪೂರ್ಣವಾಗಿ ನಿರ್ಲಕ್ಷಿಸಿ ಎಂದಿನಂತೆ 'ಬ್ಲಾಕೌಟ್' ಮಾಡಿದ್ದವು, ಅವುಗಳ 'ರಾಜಕೀಯ ಬಾಸ್'ಗಳಾದ ಕೇಸರಿ ಸರಕಾರದಂತೆ. ಆದರೆ ಫೇಸ್ ಬುಕ್ ಟ್ವಿಟರುಗಳಲ್ಲಿ ರೈತರ ಈ ಚಾರಿತ್ರಿಕ ಜಾಥಾದ ವಿವರಗಳು, ಅವರ ಬವಣೆಗಳೂ, ಹಕ್ಕೊತ್ತಾಯಗಳೂ ಬರುತ್ತಿದ್ದಂತೆ, ಅದರಲ್ಲೂ ಮುಂಬಯಿಯ ಗಡಿಗೆ ರೈತರ ಜಾಥಾ ಹತ್ತಿರ ಬಂದಂತೆ ಚಿತ್ರಣ ಬದಲಾಯಿತು. ಅಲ್ಲೊಂದು ಇಲ್ಲೊಂದು "ಮುಖ್ಯವಾಹಿನಿ ಮಾಧ್ಯಮ"ಗಳ ವರದಿಗಾರರನ್ನೂ ಅದು ತಟ್ಟಿತು. ಸುಡು ಬಿಸಿಲಿನಲ್ಲಿ 30 ಸಾವಿರ ರೈತರು 180 ಕಿ.ಮಿ. ನಡೆದು ಬರುವುದು ಅದರಷ್ಟಕ್ಕೆ ದೊಡ್ಡ ಸುದ್ದಿಯಾಗಬೇಕಿತ್ತು. ಈ ಮಹಾ ನಡಿಗೆಯಲ್ಲಿ ಕಾಲು ಸುಟ್ಟುಕೊಂಡು, ಚಪ್ಪಲಿ ಮುರಿದುಕೊಂಡ ಕಾಲಿನಲ್ಲಿ ರಕ್ತ ಸುರಿಯುತ್ತಿದ್ದರೂ ದಿನಕ್ಕೆ 30 ಕಿ,ಮಿ. ಶಿಸ್ತಿನಿಂದ ನಡೆಯುತ್ತಿದ್ದ ಚಳುವಳಿಗಾರರು ಜನಮನ ಗೆದ್ದಿದ್ದರು. ಇತ್ತೀಚೆಗೆ ಸಾಮಾನ್ಯವಾಗಿ ಸಾಮಾಜಿಕ ಪ್ರಜ್ಞೆ ತೋರ್ಪಡಿಸದ ಮುಂಬಯಿಯ ಮಧ್ಯಮ ವರ್ಗದ ಜನರೂ ಸೇರಿದಂತೆ ಎಲ್ಲಾ ವರ್ಗಗಳ ಜನರೂ ದಾರಿಯುದ್ದಕ್ಕೂ ರೈತರಿಗೆ ನೀರು, ಆಹಾರ ಕೊಡಲು ಗಂಟೆಗಟ್ಟಲೆ ಕಾಯುತ್ತಿದ್ದರು.

ಜಾಥಾ ಮುಂಬಯಿಗೆ ತಲುಪುವ ಹಿಂದಿನ ದಿನವೇ ಇಡೀ ದಿನ ಫೇಸ್ ಬುಕ್ ಟ್ವಿಟರುಗಳಲ್ಲಿ "#KisanLongMarch" ಹ್ಯಾಶ್ ಟ್ಯಾಗ್ 'ಟ್ರೆಂಡ್' (ಗಂಟೆಗೆ 1–2 ಸಾವಿರ ಪೋಸ್ಟ್/ಟ್ವೀಟ್ ಗಳ ಸತತ ಪ್ರವಾಹ) ಆಗುತ್ತಿದ್ದಂತೆ ಚಿತ್ರಣ ಪೂರ್ತಿ ಬದಲಾಯಿತು. "ಮುಖ್ಯವಾಹಿನಿ ಮಾಧ್ಯಮ"ಗಳು ಅದರಲ್ಲೂ ಟಿವಿ ವಾಹಿನಿಗಳು ಲೈವ್ ಕವರೇಜ್ ಚರ್ಚೆ ಇತ್ಯಾದಿ ಆರಂಭಿಸಿದವು. ಅದಕ್ಕೆ ಟಿ.ಆರ್.ಪಿ. ಅವಕಾಶ ಕಳೆದುಕೊಳ್ಳದಿರುವುದು ಮಾತ್ರ ಕಾರಣವಾಗಿರಲಿಲ್ಲ. ಕಿಸಾನ್ ಜಾಥಾ ಮುಂಬಯಿಗೆ ಹತ್ತಿರವಾಗುತ್ತಿದ್ದಂತೆ, ಕಿಸಾನ್ ನಾಯಕರ ಜತೆ ಯಾವುದೇ ಮಾತುಕತೆ ನಡೆಸದೆ, ರಾಜಸ್ತಾನದಲ್ಲಿ ಇತ್ತೀಚೆಗೆ ಮಾಡಿದಂತೆ ಬಲಪ್ರಯೋಗ ಮಾಡಿ ಮುಂಬಯಿ ಪ್ರವೇಶಿಸದಂತೆ ತಡೆಯಲು ಸಿದ್ಧವಾಗುತ್ತಿದ್ದ ಮಹಾರಾಷ್ಟ್ರ ಸರಕಾರ ಗಾಬರಿಯಾಗಿ ಮತುಕತೆಗೆ ತಯಾರಾಗಿದ್ದೂ ಕಾರಣವಾಯಿತು. ಧಣಿಗಳು ಗಾಬರಿಯಾದಾಗ ವಂದಿ ಮಾಗಧರ ರಾಗ ಬದಲಾಗಲೇ ಬೇಕಲ್ಲ!

ಆದರೂ ಕೊನೆಯ ದಿನವಾದರೂ ಪ್ರತಿಕ್ರಿಯಿಸಿದ ಟಿವಿ ವಾಹಿನಿಗಳಷ್ಟು ಪತ್ರಿಕೆಗಳು ಪ್ರತಿಕ್ರಿಯಿಸಲಿಲ್ಲ. ದೇಶದಾದ್ಯಂತ ಸಾಮಾಜಿಕ ಮಾಧ್ಯಮಗಳ ಮೂಲಕವೇ ಸುದ್ದಿಯಾದ ಮೇಲೂ, ಕೊನೆಯ ಎರಡು ದಿನಗಳಲ್ಲಿ ಸಹ ಮುಖಪುಟ ಸುದ್ದಿ ಮಾಡಿದ, ವರದಿಗಾರರನ್ನು ಕಳಿಸಿ ವಿವರವಾದ ವರದಿ ಮಾಡಿದ ಪತ್ರಿಕೆಗಳು ಬೆರಳೆಣಿಕೆಯವಾಗಿದ್ದವು. ಹಲವು ಮರಾಠಿ ಪತ್ರಿಕೆಗಳಲ್ಲಿ ಮಾತ್ರ ಮುಖಪಟ ಸುದ್ದಿಯಾಯಿತು. "ರಾಷ್ಟ್ರೀಯ" ಇಂಗ್ಲಿಷ್ ಪತ್ರಿಕೆಗಳ ಮುಂಬಯಿ ಆವೃತ್ತಿಗಳಲ್ಲಿ ಸಹ ಇಂಡಿಯನ್ ಎಕ್ಸ್‌ಪ್ರೆಸ್ ಮಾತ್ರ ಈ ಚಾರಿತ್ರಿಕ ಕ್ಷಣಕ್ಕೆ ತಕ್ಕುದಾದ ಕವರೇಜ್ ಮಾಡಿತು. ಕನ್ನಡ ಪತ್ರಿಕೆಗಳಲ್ಲಿ ವಾರ್ತಾಭಾರತಿಗೆ ಮಾತ್ರ ಇದು ಮುಖಪುಟದ ಸುದ್ದಿಯಾಗುವ ಅರ್ಹತೆ ಇದೆ ಅನ್ನಿಸಿತು. ಸಾಮಾನ್ಯವಾಗಿ ಸಾಮಾಜಿಕ–ಆರ್ಥಿಕ ಚಳುವಳಿಗಳ ಕವರೇಜಿಗೆ ಆದ್ಯತೆ ಕೊಡುವ 'ದಿ ಹಿಂದೂ' ಮತ್ತು 'ಪ್ರಜಾವಾಣಿ' ಸಹ ಒಳಗಿನ ಪುಟಗಳಲ್ಲಿ ಮಾತ್ರ ಜಾಗ ಕೊಟ್ಟಿತ್ತು. ಹಲವು ಅಂತರಾಷ್ಟ್ರೀಯ ಪತ್ರಿಕೆಗಳು ಮುಖಪುಟದಲ್ಲಿ ಮತ್ತು ಟಿವಿ ವಾಹಿನಿಗಳೂ ಅಗ್ರ ಸುದ್ದಿಯಾಗಿ ಪ್ರಕಟಿಸಿದ್ದ ಹಿನ್ನೆಲೆಯಲ್ಲಿ ಇದು ವಿಚಿತ್ರ, ಆದರೂ ನಿಜ. ಇದು 6 ದಿನಗಳ ದೀರ್ಘ ಚಾರಿತ್ರಿಕ ಜಾಥಾವಾದರೂ ನೆರೆಯ ರಾಜ್ಯಕ್ಕೆ ಒಬ್ಬ ವಿಶೇಷ ವರದಿಗಾರನನ್ನು ಕಳಿಸುವ ಕಷ್ಟ ಯಾವ ಕನ್ನಡ ಪತ್ರಿಕೆಯೂ ಮಾಡಿಲ್ಲ.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಕವರೇಜ್ ಮಾಡಿದ ಮಾಧ್ಯಮಗಳು ಚಳುವಳಿಯ ಸಮಗ್ರ ಚಿತ್ರಣವನ್ನೇನೂ ಕೊಡಲಿಲ್ಲ. ಟೈಮ್ಸ್ ಗುಂಪಿನವಕ್ಕೆ (ಕನ್ನಡದ ವಿಜಯ ಕರ್ನಾಟಕ ಸೇರಿದಂತೆ) ಮತ್ತು ಇತರ ಕೆಲವಕ್ಕೆ ಮುಂಬಯಿಯಲ್ಲಿ ಟ್ರಾಫಿಕ್ ಜಾಮ್ ಆಗಬಹುದು ಎಂಬುದು ರೈತರ ಬವಣೆಗಿಂತ ಹೆಚ್ಚಿನ ಆತಂಕದ ವಿಷಯವಾಗಿತ್ತು. ಮರುದಿನ 10ನೇ ತರಗತಿಯ ಪರೀಕ್ಷೆಗಳಿದ್ದ ಕಾರಣ ತಮ್ಮ ಕಾರ್ಯಕ್ರಮ ಬದಲಾಯಿಸಿ, ರಾತ್ರಿಯಿಡೀ ನಡೆದು ಹಗಲು ಮೂಡುವ ಮೊದಲೇ ಮುಂಬಯಿಯ ಆಜಾದ್ ಮೈದಾನ ತಲುಪಿದ ರೈತರ ಸಂಘಟಕರ ಮುತುವರ್ಜಿ ಅವರಿಗೆ ಸುದ್ದಿಯಾಗಲಿಲ್ಲ. ಕವರೇಜ್ ಮಾಡಿದ ಮಾಧ್ಯಮಗಳಲ್ಲಿ ಹಲವು ಅದರಲ್ಲೂ ಟಿವಿ ವಾಹಿನಿಗಳು ಜಾಥಾವನ್ನು ಅಭೂತಪೂರ್ವವಾಗಿ ಸಂಘಟಿಸಿದ ಅಖಿಲ ಭಾರತ ಕಿಸಾನದ ಸಭಾದ ಹೆಸರನ್ನು ಮತ್ತು ಅದರ ನಾಯಕರು ಸಿಪಿಐ(ಎಂ) ನಾಯಕರೂ ಎಂಬುದನ್ನು ಮರೆ ಮಾಚಲು ಪ್ರಯತ್ನಿಸಿದರು. ಉದಾಹರಣೆಗೆ, ಡಾ. ಅಶೋಕ್ ಧವಳೆ ಅವರನ್ನು ತೋರಿಸುವಾಗ ಒಂದು ಟಿವಿ ವಾಹಿನಿಯಲ್ಲಿ ಅವರನ್ನು ರೈತ ನಾಯಕ ಎಂದು ಮಾತ್ರ ತೋರಿಸಲಾಯಿತು, ಹೇಳಲಾಯಿತು. ಅವರನ್ನು ಅಖಿಲ ಭಾರತ ಕಿಸಾನದ ಸಭಾದ ಅಧ್ಯಕ್ಷರೆಂದಾಗಲಿ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೆಂದಾಗಲಿ ಪರಿಚಯಿಸಲಿಲ್ಲ. ಅತ್ಯಂತ ಭಟ್ಟಂಗಿ ಟಿವಿ ವಾಹಿನಿಗಳಾದ ಟೈಮ್ಸ್ ನೌ, ರಿಪಬ್ಲಿಕನ್ ಮತ್ತು ಇತರ ವಾಹಿನಿಗಳು ಲೆನಿನ್ ಭಾವಚಿತ್ರಗಳನ್ನು ಹಿಡಿದಿದ್ದ ರೈತರನ್ನು ತೋರಿಸಿ ಕಮ್ಯುನಿಸ್ಟರು ರೈತರ ಸಮಸ್ಯೆಗಳನ್ನು "ರಾಜಕೀಯಕರಣ"ಗೊಳಿಸುತ್ತಿದ್ದಾರೆ ಎಂದು ಆಪಾದಿಸಿತು. ನಕ್ಸಲೀಯರು ರೈತ ಚಳುವಳಿಯಲ್ಲಿ ನುಗ್ಗಿದ್ದಾರೆ ಎಂದು ಬಿಜೆಪಿ ಸಚಿವೆ ಪೂನಂ ಮಹಾಜನ್ ಅವರ "ರೈತರು ನಗರದ ಮಾವೋವಾದಿ"ಗಳಂತೆ ವರ್ತಿಸುತ್ತಿದ್ದಾರೆಂಬ ಹೇಳಿಕೆಗೆ ಇಂಬು ಕೊಡಲು ಪ್ರಯತ್ನಿಸಿದವು.

ಮುಖ್ಯವಾಹಿನಿ ಮಾಧ್ಯಮಗಳ ಮುಜುಗರ ಅರ್ಥವಾಗುವಂತಹದ್ದು. ಕೆಲವೇ ದಿನಗಳ ಹಿಂದೆ ತ್ರಿಪುರಾದ ಚುನಾವಣಾ ಫಲಿತಾಂಶದ ನಂತರ ಸಿಪಿಐ(ಎಂ) ಮತ್ತು ಇಡೀ ಎಡ ಚಳುವಳಿಯನ್ನು ಕೇರಳ ಬಿಟ್ಟರೆ ಭಾರತದ ರಾಜಕಾರಣದಿಂದ 'ರೈಟ್–ಆಫ್' ಮಾಡಿದ್ದ ಮಾಧ್ಯಮಗಳಿಗೆ, ಕೇಸರಿ ಸರಕಾರವನ್ನು ಕೆಂಪು ಚಳುವಳಿ ಬೀದಿ ಹೋರಾಟದಲ್ಲಿ ಮಣಿಸಬಲ್ಲುದು ಎಂಬುದನ್ನು ಅರಗಿಸಿಕೊಳ್ಳುವುದು ಅದನ್ನು ಒಪ್ಪಿಕೊಳ್ಳುವುದು ಕಷ್ಟವಾಗುವಂತಹುದೇ. ಮಾಧ್ಯಮ ಮಾಲಕರಿಗೆ, ಸಂಪಾದಕರಿಗೆ, ವರದಿಗಾರರಿಗೆ ಮಾತ್ರವಲ್ಲ ಅಂಕಣಕಾರರು ವಿಶ್ಲೇಷಕರ 'ವಿಶ್ಲೇಷಣೆ'ಗೂ ಇದು ದಕ್ಕಲಿಲ್ಲ. ಇದು ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಮಾತ್ರವಲ್ಲ, ಸಾಮಾಜಿಕ ಮಾಧ್ಯಮಗಳಿಗೂ ಅನ್ವಯಿಸುವಂತಹುದು. ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಪ್ರಮುಖ ಪತ್ರಕರ್ತರೂ ಅಂಕಣಕಾರರು ವಿಶ್ಲೇಷಕರೂ ಆಗಿರುವ ಮತ್ತು ಸಾಮಾಜಿಕ ಮಾಧ್ಯಮಗಳಲ್ಲೂ ನವಮಾಧ್ಯಮಗಳಲ್ಲೂ 'ಪ್ರತಿಷ್ಟಿತ' ಸ್ಥಾನ ಹೊಂದಿರುವವರಿಗೂ ಇದು ಹೆಚ್ಚಿನ ಮುಜುಗರ ತಂದಿದೆ.

ಬಲಪಂಥೀಯರಿಗೆ ಉದಾರವಾದಿಗಳಿಗೆ ಮಾತ್ರವಲ್ಲ, ಕೆಲವು 'ಸ್ವತಂತ್ರ' ಎಡಪಂಥೀಯ ಪ್ರಗತಿಪರ ಪತ್ರಕರ್ತರೂ ಅಂಕಣಕಾರರು ವಿಶ್ಲೇಷಕರಿಗೂ ಇದು 'ಬಿಸಿ ತುಪ್ಪ'ವಾಯಿತು. ತ್ರಿಪುರಾದ ಚುನಾವಣಾ ಫಲಿತಾಂಶದ ನಂತರ ಸಿಪಿಐ(ಎಂ) ಮತ್ತು ಸಂಘಟಿತ ಎಡಪಂಥದ "ನಿಧನ ವಾರ್ತೆ"ಯನ್ನು ಕೆಲವೊಮ್ಮೆ ಹಿಗ್ಗಿನಿಂದ ಕೆಲವೊಮ್ಮೆ ಹುಸಿ ಅನುಕಂಪದಿಂದ ಕಮೆಂಟಿಸಿದ್ದ ಇವರು ಮಹಾರಾಷ್ಟ್ರದ ರೈತರ ಲಾಂಗ್ ಮಾರ್ಚಿನ ಬಗ್ಗೆ ಜಾಣ ಮೌನಕ್ಕೆ ಜಾರಿದರು. ಸಿಪಿಐ(ಎಂ) ನಾಯಕರಿಗೆ 'ಅಹಂಕಾರ ಆತ್ಮಪ್ರತಿಷ್ಟೆ ಹೆಚ್ಚು", "ಆತ್ಮಾವಲೋಕನಕ್ಕೆ ಅವರು ತಯಾರಿಲ್ಲ". "ಸಿಪಿಐ(ಎಂ) ಜನಬೆಂಬಲ ಮತ್ತು ದುಡಿಯುವ ಜನರ ಜತೆ ಸಂಪರ್ಕ ಸಂಬಂಧ ಕಳೆದುಕೊಂಡಿದೆ, ಅಪ್ರಸ್ತುತವಾಗಿದೆ" "ಸಿಪಿಐ(ಎಂ) ನಿಧನಕ್ಕೆ ಕಣ್ಣೀರು ಬೇಡ, ಅವರು ಎಂದೂ ಬದಲಾಗುವುದಿಲ್ಲ" ಎಂದೆಲ್ಲಾ ಅಪ್ಪಣೆ ಕೊಡಿಸಿದವರು ಇವರು. ಒಂದು ಚುನಾವಣಾ ಸೋಲಿನ ನಂತರವೇ ಸಿಪಿಐ(ಎಂ) ನ ಆತ್ಮವಿಮರ್ಶೆಯ ಹೇಳಿಕೆ–ದಾಖಲೆಗಳನ್ನು ಎಂದೂ ಓದದೆ ತಮ್ಮ ತೀರ್ಪು ಘೋಷಿಸಿದ್ದ, ಕೆಲವು ದಿನಗಳ ಹಿಂದೆಯಷ್ಟೇ ಮುಖ್ಯವಾಹಿನಿ ಮತ್ತು ಸಾಮಾಜಿಕ ಮಾಧ್ಯಮಗಳಲ್ಲೂ ಡಂಗುರ ಸಾರಿದ್ದ ಇವರು, ಈಗಲಾದರೂ "ಆತ್ಮವಿಮರ್ಶೆ" ಮಾಡಿಕೊಳ್ಳುತ್ತಾರೋ ನೋಡಬೇಕು.


ಅಪಪ್ರಚಾರದಲ್ಲಿ ವಿಫಲವಾದ ಬಿಜೆಪಿ ಐಟಿ ಸೆಲ್

ಜಾಥಾ ಮುಂಬಯಿಗೆ ತಲುಪುವ ಹಿಂದಿನ ದಿನವೇ ಇಡೀ ದಿನ ಅದು ಫೇಸ್ ಬುಕ್ ಟ್ವಿಟರುಗಳಲ್ಲಿ "#KisanLongMarch" ಹ್ಯಾಶ್ ಟ್ಯಾಗ್ ಟ್ರೆಂಡ್ (ಒಂದೇ ದಿನದಲ್ಲಿ ಅದು 38 ಸಾವಿರ ದಾಟಿತ್ತು) ಆಗುತ್ತಿದ್ದಂತೆ, ಮಹಾರಾಷ್ಟ್ರ ಸರಕಾರಕ್ಕೆ ಗಾಬರಿಯಾದಾಗ ಬಿಜೆಪಿ ಐಟಿ ಸೆಲ್ ವ್ಯವಸ್ಥಿತ ಅಪಪ್ರಚಾರಕ್ಕೆ ಇಳಿಯಿತು. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರಕಾರಗಳು ಹೇಗೆ ರೈತ–ಪರವಾಗಿವೆ, ರೈತರನ್ನು ಕಮ್ಯುನಿಸ್ಟರು ಹೇಗೆ ದಾರಿ ತಪ್ಪಿಸುತ್ತಿದ್ದಾರೆ, ಎಂದು "ಅಂಕಿ–ಅಂಶಗಳ" ಜತೆ ಎದುರಿಸಲು 20 ಪುಟಗಳ ಟಿಪ್ಪಣಿಯನ್ನು ಹಂಚಿತು. ಅದು #KisanThanksDevendra ಎಂಬ ಹ್ಯಾಶ್ ಟ್ಯಾಗ್ ನ್ನು ಟ್ರೆಂಡ್ ಮಾಡಲು ತನ್ನ ರಾಷ್ಟ್ರವ್ಯಾಪಿ ಸಾಮಾಜಿಕ ಮಾಧ್ಯಮ ಜಾಲದ ಬಾಡಿಗೆ ಸೇವಕರ ಮೂಲಕ ಪೋಸ್ಟ್/ಟ್ವೀಟುಗಳ "ಸಾಮೂಹಿಕ ಉತ್ಪಾದನೆ"ಗೆ ಪ್ರಯತ್ನಿಸಿತು. ಬಿಜೆಪಿ ಐಟಿ ಸೆಲ್ ನ ಒಂದು ಪ್ರತಿ ಬಿಜೆಪಿ ಫೇಕ್ ಪ್ರಚಾರವನ್ನು ಬಯಲಿಗೆಳೆಯುವ 'ಆಲ್ಟ್ ನ್ಯೂಸ್"ನ ಪ್ರತೀಕ್ ಸಿನ್ಹಾಗೆ ಸಿಕ್ಕಿ ಅದನ್ನು ಆತ ಟ್ವಿಟರ್ ನಲ್ಲಿ ಪ್ರಕಟಿಸಿದ. ಆಗ ಬಿಜೆಪಿಯ ಐಟಿ ಸೆಲ್ ನ ಅಪಪ್ರಚಾರದ ಗೇಮ್ ಬಯಲಾಯಿತು. ಅದು ಫೇಸ್ ಬುಕ್ ಟ್ವಿಟರಿನಲ್ಲಿ ಸಾಕಷ್ಟು ವ್ಯಂಗ್ಯ ಅವಹೇಳನಕ್ಕೆ ಗುರಿಯಾಯಿತು. ಅದಕ್ಕಿಂತ ಹೆಚ್ಚಾಗಿ ಕಿಸಾನ್ ಮಾರ್ಚಿನ ಬಗ್ಗೆ ಜನತೆಯಲ್ಲಿ ಮೂಡಿದ್ದ ನಿಜವಾದ ಸೌಹಾರ್ದತೆ ಅನುಕಂಪಗಳ ಎದುರು ಬಿಜೆಪಿ ಐಟಿ ಸೆಲ್ ಅಪಪ್ರಚಾರ ಕೆಲಸ ಮಾಡಲಿಲ್ಲ. ಫೇಸ್ ಬುಕ್ ಟ್ವಿಟರಿನಲ್ಲಿ ಬಿಜೆಪಿ ಫೇಕ್ ಮತ್ತು ಅಪಪ್ರಚಾರದ ತಂತ್ರಗಳು ಈಗಾಗಲೇ ಹಲವು ಪ್ರಕರಣಗಳಲ್ಲಿ ಬಯಲಾಗಿದ್ದು ಸಹ ಇದಕ್ಕೆ ನೆರವಾಯಿತು.

ಕಿಸಾನ್ ಲಾಂಗ್ ಮಾರ್ಚ್– ವ್ಯಂಗ್ಯಚಿತ್ರಕಾರರು ಕಂಡಂತೆ



ಮಂಜುಲ್, ಫಸ್ಟ್ ಪೋಸ್ಟ್



ಸುರೇಂದ್ರನ್, ದಿ ಹಿಂದು







ಕೇಸರಿ ಸರಕಾರವನ್ನು ಮಣಿಸಿದ ಕೆಂಬಾವುಟದ ರೈತರು

ಮಾರ್ಚ್ 12, 2018. ಮುಂಬೈಯ ಐತಿಹಾಸಿಕ ಆಝಾದ್ ಮೈದಾನ ಮತ್ತೊಂದು ಐತಿಹಾಸಿಕ ಸಾಧನೆಗೆ ಸಾಕ್ಷಿಯಾಯಿತು. ಕೇವಲ ಒಂಭತ್ತು ದಿನಗಳ ಹಿಂದೆ ಈಶಾನ್ಯ ಭಾರತವನ್ನು ಅಪ್ಪಳಿಸಿದ ಕೇಸರಿ ಚಂಡಮಾರುತ ತ್ರಿಪುರಾದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲೇ ಕೆಂಬಾವುಟಗಳನ್ನು ಕಿತ್ತೆಸೆದಿದೆ ಎಂದು ಕೇಕೆ ಹಾಕಿದ್ದ ಮಾಧ್ಯಮಗಳು ಮಹಾರಾಷ್ಟ್ರದ 50ಸಾವಿರ ಬಡರೈತರು ಹಿಡಿದಿದ್ದ ಅವೇ ಕೆಂಬಾವುಟಗಳು, ಅವರ ಕೆಂಪು ಟೋಪಿಗಳಿಂದ ಮಾತ್ರವಲ್ಲ, ಸುಡುಬಿಸಿಲಿನಲ್ಲಿ ಸುಮಾರು 200 ಕಿ.ಮೀ. ಹರಕು ಚಪ್ಪಲಿಗಳಲ್ಲೇ ನಡೆದು ಬರುವಾಗ ಪಾದಗಳಲ್ಲಿ ಬೊಬ್ಬೆಗಳೆದ್ದು ಸುರಿದ ರಕ್ತದಿಂದಲೂ ದೇಶದ ಅತ್ಯಂತ ಶ್ರೀಮಂತ ರಾಜ್ಯದ ರಾಜಧಾನಿ ಮಾತ್ರವಲ್ಲ, ದೇಶದ ಹಣಕಾಸು ರಾಜಧಾನಿಯೂ ಆದ ಮುಂಬೈ ನಗರ ಕೆಂಪಾಯಿತು ಎಂದು ಹೇಳಬೇಕಾಗಿ ಬಂತು.


ಕೈಯಲ್ಲಿ ಕೆಂಬಾವುಟ ಹಿಡಿದು ಹಾಡುತ್ತ ಕುಣಿಯುತ್ತ ಸಾಗುತ್ತಿರುವ 60 ವರ್ಷದ ರಕ್ಮಾಬಾಯಿ ಬೆಂದ್ಮಕಳೆ.

ಕೆಂಬಾವುಟದ ಮೇಲೆ ಕೇಸರಿ ಪತಾಕೆಯ ಸೈದ್ಧಾಂತಿಕ ವಿಜಯ ಸಾಧಿಸಿದ್ದೇವೆ ಎಂದು ಸಾರಿದ ತಮ್ಮ ಸರ್ವೋಚ್ಚ ಮುಖಂಡರ ಮಾತನ್ನು ನಂಬಿ ಈ ಬಡರೈತರಿಂದೇನಾದೀತು ಎಂದು ಭಾವಿಸಿ ಉಪೇಕ್ಷೆಯಿಂದಿದ್ದ ಮಹಾರಾಷ್ಟ್ರದ ಕೇಸರಿ ಸರಕಾರ ನಾಶಿಕ್‌ನಿಂದ ಹೊರಟಿದ್ದ 25,000 ರೈತರ ಸಂಖ್ಯೆ ಮುಂಬೈ ಪ್ರವೇಶಿಸುವಾಗ 50,000 ಅದ, ಮತ್ತು ತಮ್ಮ ಬೇಡಿಕೆಗಳು ಈಡೇರದಿದ್ದರೆ ವಿಧಾನ ಭವನಕ್ಕೆ ಮುತ್ತಿಗೆ ಹಾಕಲು ಸಿದ್ಧರಾಗೇ ಬಂದಿದ್ದ ಈ 50ಸಾವಿರ ರೈತರ ದೃಢನಿರ್ಧಾರದ ಸುದ್ದಿಗಳನ್ನು ಪಡೆದಾಗ ಕಂಗಾಲಾಯಿತು ಎನ್ನಲಾಗಿದೆ. ಈ ಕಿಸಾನ್ ಲಾಂಗ್‌ಮಾರ್ಚ್‌ಗೆ ನೇತೃತ್ವ ನೀಡಿದ್ದ ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾದ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಲೇಬೇಕಾಗಿ ಬಂತು. ಮೂರು ಗಂಟೆಗಳ ಕಾಲ ಚರ್ಚೆ ನಡೆಸಿ ಸುಮಾರಾಗಿ ಎಲ್ಲ ಬೇಡಿಕೆಗಳನ್ನು ಒಪ್ಪಬೇಕಾಗಿ ಬಂತು, ಮಾತ್ರವಲ್ಲ ಅದನ್ನು, ಈ ಹಿಂದೆ ಇದೇ ಸರಕಾರ ಮಾಡಿರುವ ವಿಶ್ವಾಸದ್ರೋಹದ ಹಿನ್ನೆಲೆಯಲ್ಲಿ, ಕಿಸಾನ್ ಸಭಾ ಪಟ್ಟು ಹಿಡಿದಂತೆ ಲಿಖಿತವಾಗಿ ಕೊಟ್ಟಿತು ಮತ್ತು ಮರುದಿನ ವಿಧಾನಸಭೆಯಲ್ಲೂ ಮಂಡಿಸಿತು.

***

ಆತ್ಮಹತ್ಯೆಯಲ್ಲ–ಐಕ್ಯ ಹೋರಾಟ' ಎಂಬ ಜಾಗೃತಿ

ಇದೊಂದು ವಿಸ್ಮಯ ಉಂಟು ಮಾಡಿರುವ ಹೋರಾಟ ಎನ್ನುತ್ತಾರೆ ಈ ಕಿಸಾನ್ ಲಾಂಗ್ ಮಾರ್ಚ್‌ಗೆ ನೇತೃತ್ವ ನೀಡಿದವರಲ್ಲಿ ಒಬ್ಬರಾದ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಡಾ.ಅಶೋಕ ಧವಳೆ. ಇಂತಹ ಒಂದು ಹೋರಾಟ ಮಹಾರಾಷ್ಟ್ರದಲ್ಲಾಗಲೀ, ದೇಶದಲ್ಲಾಗಲೀ ಇತ್ತೀಚಿನ ವರ್ಷಗಳಲ್ಲಿ ಕಾಣಬಂದಿಲ್ಲ. ಇದು ರೈತಾಪಿಗಳನ್ನು ಮತ್ತು ಜನತೆಯನ್ನೂ ಹುರಿದುಂಬಿಸಿತು. ಆಳುವ ಕೇಸರಿ ಪಡೆಗಳ ಹೊರತಾಗಿ ಸುಮಾರಾಗಿ ಎಲ್ಲ ರಾಜಕೀಯ ಬಣ್ಣಗಳ ಮತ್ತು ಸಂಘಟನೆಗಳ ಬೆಂಬಲ ಪಡೆಯುವಲ್ಲಿ ಯಶಸ್ವಿಯಾಯಿತು.

ಮಾರ್ಚ್ 12, ವಾಸ್ತವವಾಗಿ ಮಹಾರಾಷ್ಟ್ರದಲ್ಲಿ ರೈತರ ಮೂರು ವರ್ಷಗಳ ನಿರಂತರ ಹೋರಾಟ ತುತ್ತತುದಿಯನ್ನು ತಲುಪಿದ ದಿನ. "ಆತ್ಮಹತ್ಯೆಯಲ್ಲ–ಐಕ್ಯ ಹೋರಾಟ' ಎಂಬ ಜಾಗೃತಿಯನ್ನು ರೈತಾಪಿ ಜನಗಳಲ್ಲಿ ಮೂಡಿಸಿದ ರಾಜ್ಯವ್ಯಾಪಿ ರಾಸ್ತಾರೊಖೋ, 11 ದಿನಗಳ ಚಾರಿತ್ರಿಕ ರೈತ ಮುಷ್ಕರ ಮತ್ತು ನಂತರ ಜಿಲ್ಲಾವಾರು ರೈತ ಸಮಾವೇಶಗಳು ಮತ್ತು ಅದರ ಕರೆಯಂತೆ ಪ್ರತಿ ಹಳ್ಳಿಯಲ್ಲಿ ವ್ಯಾಪಕ ಪ್ರಚಾರದ ನಂತರ ಈ ಎಲ್ಲದರಲ್ಲಿ ಎತ್ತಿದ ರೈತರ ಬೇಡಿಕೆಗಳನ್ನು ಹೊತ್ತ, ಬಿಜೆಪಿ ರಾಜ್ಯ ಸರಕಾರದ ವಿಶ್ವಾಸದ್ರೋಹವನ್ನು ನೆನಪಿಸುವ ಕೆಂಪು ಘೋಷಣಾ ಫಲಕಗಳಿಂದ ಈ ಲಾಂಗ್‌ಮಾರ್ಚ್ ಮಾರ್ಚ್ 6ರಂದು ನಾಶಿಕ್‌ನಿಂದ ಹೊರಟಿತು.

ಅಂದು ರಾಜ್ಯದ ಇತರೆಡೆಗಳಿಂದಲೂ ರೈತರು ಬಂದು ನಾಶಿಕ್‌ನಲ್ಲಿ ಸೇರಿದ್ದರು. ಉದಾಹರಣೆಗೆ 790 ಕಿ.ಮೀ. ದೂರದ ಮರಾಠವಾಡ ಪ್ರದೇಶದ ಪರ್ಬಾನಿ ಜಿಲ್ಲೆಯಿಂದ ಬಂದ 55 ವರ್ಷದ ರಾವ್ತೊವರ್ ಸೋಯಾಬೀನ್ ಬೆಳೆಯುವ ರೈತ. ಕಳೆದ ಒಂದು ವರ್ಷವಂತೂ ಬಹಳ ಕಷ್ಟದ ಕಾಲ. ಮೊದಲು ಮಳೆ ವಿಳಂಬದಿಂದ, ನಂತರ ಹುಳು ಬಾಧೆಯಿಂದ ಆದ ನಷ್ಟ ಕಳೆದ ಜೂನ್‌ನಲ್ಲಿ 11 ದಿನಗಳ ಮುಷ್ಕರದ ನಂತರ ಮಹಾರಾಷ್ಟ್ರದ ಸರಕಾರ ಒಪ್ಪಿದ ಸಾಲಮನ್ನಾದಿಂದ ಸ್ವಲ್ಪವಾದರೂ ಪರಿಹಾರ ಸಿಗಬಹುದು ಎಂದು ನಿರೀಕ್ಷಿಸಿದ್ದರು. ಅದೂ ಈ ಸರಕಾರದ ವಿಶ್ವಾಸದ್ರೋಹದಿಂದ ಈಡೇರದಿದ್ದಾಗ ಇತರ ಇಂತಹ ಸಾವಿರಾರು ರೈತರೊಂದಿಗೆ ಸೇರಿಕೊಂಡು ರಾಜ್ಯ ಸರಕಾರದ ಬಾಗಿಲಿಗೇ ಹೋಗೋಣ ಎಂದು ನಾಶಿಕ್‌ಗೆ ಬಂದರು.

ಮೊದಲ ದಿನ ಸುಮಾರು 30 ಕಿ.ಮೀ. ನಡೆದು ಈ ರೈತರು ಇಗತ್‌ಪುರಿ ತಲುಪಿದರು. ಅದು ಈ ಲಾಂಗ್‌ಮಾರ್ಚ್‌ನ ಮೊದಲ ತಂಗುದಾಣವಾಗಿತ್ತು. ನಾಶಿಕ್–ಆಗ್ರಾ ಹೆದ್ದಾರಿಯ ಪಕ್ಕದಲ್ಲೇ. 65ವರ್ಷದ ಶಂಕರ್ ವಘೇರೆ ತನ್ನ ಹೆಗಲ ಮೇಲಿದ್ದ ಪ್ಲಾಸ್ಟಿಕ್ ಚೀಲವನ್ನು ಪಕ್ಕಕ್ಕಿಟ್ಟು ಕಾಲುಚೆಲ್ಲಿ ಕೂತರು– 15 ನಿಮಿಷಗಳ ಕಾಲ ಕಣ್ಣುಮುಚ್ಚಿಕೊಂಡೇ. ಬಹಳ ಸುಸ್ತಾಗಿತ್ತು. ಆದರೆ ಹುರುಪು ಹಾಗೆಯೇ ಇತ್ತು.–"ನಮ್ಮ ಹಕ್ಕುಗಳಿಗಾಗಿ ನಾವು ಹೋರಾಡಲೇ ಬೇಕು. ಭತ್ತ ಬೆಳೆಯುವ ನಮಗೆ ಎಕ್ರೆಗೆ 12,000ರೂ. ಖರ್ಚಾಗುತ್ತದೆ. ಮಳೆ ಚೆನ್ನಾಗಿದ್ದರೆ, 15 ಕ್ವಿಂಟಾಲ್ ಸಿಗುತ್ತದೆ. ಇಲ್ಲವಾದರೆ ಅದೂ ಇಲ್ಲ. ನಮಗೆ ಮಾರುಕಟ್ಟೆಯಲ್ಲಿ ಸಿಗೂದು ಕ್ವಿಂಟಾಲ್‌ಗೆ 1000ರೂ. ಅಂದರೆ ಎಕ್ರೆಗೆ ಹೆಚ್ಚೆಂದರೆ 15,000 ರೂ. ನಾವು ಬದುಕುಳಿಯುವುದು ಹೇಗೆ? ನನಗೆ ಈ ಲಾಂಗ್ ಮಾರ್ಚ್ ಬಗ್ಗೆ ತಿಳಿದಾಗ, ಏನೇ ಬರಲಿ, ನಾನು ಇದರಲ್ಲಿ ಭಾಗವಹಿಲೇಬೇಕು ಎಂದು ನಿರ್ಧರಿಸಿದೆ"

ಅವರೊಂದಿಗೆ ಬಂದಿದ್ದ ಸಾವಿರಾರು ಇತರ ರೈತರಲ್ಲಿ ಪ್ರತಿಯೊಬ್ಬರದ್ದೂ ಇಂತಹುದೇ ಕತೆಗಳು. ಆದರೆ ಈಗ ತುಸು ವಿರಮಿಸುವ ಸಮಯ. ಊಟದ ಸಮಯ. ಕಿಸಾನ್ ಸಭಾದ ಮುಖಂಡತ್ವ ಈ ಬಗ್ಗೆ ವಿವರವಾದ ಯೋಜನೆಯನ್ನು ಸಾಂಗ್ಲಿಯಲ್ಲಿ ಫೆಬ್ರುವರಿ 16ರಂದು ರಾಜ್ಯಮಂಡಳಿ ಸಭೆಯಲ್ಲಿ ಈ ಲಾಂಗ್‌ಮಾರ್ಚ್ ಬಗ್ಗೆ ನಿರ್ಧರಿಸಿದಾಗಲೇ ತಯಾರಿಸಿತ್ತು. ಪ್ರತಿದಿನ ತಂಗುವ ಹಳ್ಳಿಗಳಲೇ ಧಾನ್ಯ , ಎಣ್ಣೆ, ಒಲೆಗಳಿಗೆ ಕಟ್ಟಿಗೆ ಸಂಗ್ರಹಿಸುವುದು, ರೈತರು ಅಲ್ಲೇ 'ಭಕ್ರಿ–ಬಾಜಿ'(ರೊಟ್ಟಿ–ಪಲ್ಯ)ಗಳನ್ನು, ಖಿಚಡಿಗಳನ್ನು ತಯಾರಿಸಿಕೊಳ್ಳುವುದು. ಟ್ಯಾಂಕರುಗಳಲ್ಲಿ ಕುಡಿಯುವ ನೀರಿನ ಪೂರೈಕೆ ಏಳು ದಿನಗಳ ಕಾಲವೂ ದಾರಿಯುದ್ದಕ್ಕೂ .

ನಂತರ ಹಾಡು, ಭಜನೆ, ಕುಣಿತ ಮತ್ತು ಮುಕ್ತ ಆಕಾಶದ ಕೆಳಗೇ ತುಸು ನಿದ್ದೆ. ಮುಂಜಾನೆದ್ದು ಚಹಾ,ತಿಂಡಿ. ಮತ್ತೆ ಮುಂಬಯಯತ್ತ ಪಯಣ. ಪಯಣದಲ್ಲೂ ದಣಿವು ಮರೆಯಲು ಹಾಡು–ಕುಣಿತ – 60 ವರ್ಷದ ರಕ್ಮಾಬಾಯಿ ಬೆಂದ್ಮಕಳೆ ಕೈಯಲ್ಲಿ ಕೆಂಬಾವುಟ ಹಿಡಿದು ಹಾಡುತ್ತ ಕುಣಿಯುತ್ತ ಸಾಗುತ್ತಿದ್ದುದು ಈ ಕಿಸಾನ್ ಲಾಂಗ್ ಮಾರ್ಚ್‌ನ ಒಂದು ಲಾಂಛನವೇ ಆಗಿಬಿಟ್ಟಿತು.

***

"ನಿಮ್ಮ ದಯೆ ಬೇಡ, ನಮ್ಮ ಹಕ್ಕು ಬೇಕು"
"ಹಸಿವು, ಸಂಕಟ, ಶೋಷಣೆ ಕೊನೆಗೊಳಿಸುವ ನಡೆ"

"ಇದೊಂದು ಪ್ರತಿಭಟನೆಯ ನಾಟಕವಲ್ಲ. ಯಾವ ಐಟಿ ಸೆಲ್ ಕೂಡ ಈ ಸವಾಲಿನ ಸಾಚಾತನವನ್ನು ಕೆಡಿಸಲಾರದು. ಅವರು ಒಂದು ಕಷ್ಟಕರ ಸಮರದಲ್ಲಿ ತೊಡಗಿರುವ ಧೀರ ಮಹಿಳೆಯರು, ಪುರುಷರು" ಎಂದಿದ್ದಾರೆ ಅವರೊಡನೆ ಮಾರ್ಚ್ 10ರಂದು ಪುಣೆಯಿಂದ 40ಕಿ.ಮೀ. ನಡೆದ ಒಬ್ಬ 24 ವರ್ಷದ ಯುವ ವೆಬ್ ಡಿಸೈನರ್ ಆಯುಷ್ ದುಬೆ. ಸುಡುಬಿಸಿಲಿನ ಝಳ ತಾಳಲಾರದೆ 40 ಕಿ.ಮೀ. ನಡೆದ ನಂತರ ಈತ ಪುಣೆಗೆ ಹಿಂದಿರುಗಬೇಕಾಯಿತು. ಆದರೆ "ಹೊರಗೆ ಗದ್ದೆಗಳಲ್ಲಿ ಬೆವರು ಸುರಿಸುವ ಈ ಸೂಪರ್‌ಮಾನವರ ನಡಿಗೆ ನಿಧಾನಗೊಳ್ಳುವ ಸೂಚನೆಗಳೂ ಕಾಣಲಿಲ್ಲ. ಕೆಲವು ವಯಸ್ಸಾದ ಮಹಿಳೆಯರಂತೂ ಕನಿಷ್ಟ ಮೂರು ಬಾರಿ ತಲೆಗೆ ಏನಾದರು ಹೊದ್ದುಕೊಳ್ಳಪ್ಪ ಎಂದು ನನಗೇ ನೆನಪಿಸಿದರು" ಎಂದಿದ್ದಾರೆ ಆಯುಷ್.


ತುಸು ವಿರಾಮ... ನಂತರ ಮತ್ತೆ ನಡಿಗೆ


ಚಪ್ಪಲಿ ಹರಿದರೂ ನಿಲ್ಲದ ಕಾಲುಗಳು




'ಭಕ್ರಿ–ಬಾಜಿ' ಚಹಾ–ಖಿಚಡಿಯೊಂದಿಗೆ ತುಸು ವಿಶ್ರಾಂತಿ




ಗುಡ್ಡ–ಬೆಟ್ಟಗಳನು ದಾಟಿ ಮಹಾನಗರದ ಮಹಾ ಬೀದಿಗಳಲ್ಲಿ ಸಾಗಿದ ಕಿಸಾನ್ ಲಾಂಗ್ ಮಾರ್ಚ್



"ನಿಮ್ಮ ದಯೆ ಬೇಡ, ನಮ್ಮ ಹಕ್ಕು ಬೇಕು" ಎಂಬ ಘೋಷಣೆ ಮೊಳಗಿಸಿದ ಈ ಲಾಂಗ್ ಮಾರ್ಚ್‌ನ ಒಂದು ಆಶ್ಚರ್ಯಕಾರೀ ಅಂಶ ಎಂದರೆ ಈ ರೈತರು ದಾರಿಯುದ್ದಕ್ಕೂ ತೋರಿದ ಉನ್ನತ ಮಟ್ಟದ ಶಿಸ್ತು ಎನ್ನುತ್ತಾರೆ ಅವರು. ಒಂದೇ ಒಂದು ಹಿಂಸಾಚಾರದ ಘಟನೆ ನಡೆಯದಂತೆ ಈ ದೀರ್ಘ ಪಯಣವನ್ನು ಮುಗಿಸುತ್ತಿದ್ದಾರೆ. ಆಹಾರ ತಯಾರಿಸುವಲ್ಲೂ, ಹಂಚುವಲ್ಲೂ ಅದೇ ಶಿಸ್ತು. ಪ್ರತಿ ಊಟದ ಸ್ವಲ್ಪ ಮೊದಲು ಕೆಲವು ತಂಡಗಳು ಮೆರವಣಿಗೆಯಿಂದ ಪ್ರತ್ಯೇಕಗೊಂಡು ಸ್ವಲ್ಪ ಮುಂದೆ ಹೋಗಿ ಒಂದು ಸುಮಾರಾದ ಖಾಲಿ ಜಾಗ ನೋಡಿ ಆಹಾರ ಬೇಯಿಸಲು ವ್ಯವಸ್ಥೆ ಮಾಡುತ್ತಿದ್ದವು. ಉಳಿದವರು ಅಲ್ಲಿಗೆ ತಲುಪುವ ವೇಳೆಗೆ ಖಿಚಡಿ ಅಥವ ಇನ್ನೇನೋ ಊಟ ಸಿದ್ಧವಿರುತ್ತಿತ್ತು. ರಾತ್ರಿ ಕಳೆಯಲು ಟೆಂಟ್‌ಗಳೇನೂ ಇಲ್ಲ. ಖಾಲಿ ಆಕಾಶ. ಸುಡುಬಿಸಿಲಿನಲ್ಲಿ ನಡಿಗೆಯ ನಂತರ ಇನ್ನೂ ಶಕ್ತಿ ಉಳಿದಿದ್ದವರ ಜಾನಪದ ಹಾಡು–ಕುಣಿತ ; ಉಳಿದವರಿಗೆ ಅವನ್ನು ನೋಡುತ್ತಲೇ ಜೊಂಪು– ಇದು ಆಯುಷ್ ದುಬೆ ಅವರೊಡನೆ ನಡೆಸಿದ 40 ಕಿ.ಮೀ. ದೂರದ ಸಹಪಯಣದ ಅನುಭವ.

ಇಂತಹ ದುಡಿಯುವ ಜನವಿಭಾಗಗಳ ಪ್ರತಿಭಟನೆಗಳು, ರ್‍ಯಾಲಿಗಳಲ್ಲಿ ಕಾರ್ಪೊರೇಟ್ ಮಾಧ್ಯಮಗಳ ಪತ್ರಕರ್ತರಿಗೆ ಸಾಮಾನ್ಯವಾಗಿ ಕಾಣುವುದು "ತಾವು ಯಾವುದಕ್ಕೆ ಪ್ರತಿಭಟನೆ ಮಾಡುತ್ತಿದ್ದೇವೆ ಎಂಬ ಅರಿವೇ ಇಲ್ಲದ ಬಾಡಿಗೆ ಪ್ರತಿಭಟನಾಕಾರರು." ಅದೇ ಗತ್ತಿನಲ್ಲಿ ಲಾಂಗ್ ಮಾರ್ಚಿನ ರೈತರನ್ನೂ ಕೇಳಿದಾಗ ಅವರಲ್ಲಿ ಪ್ರತಿಯೊಬ್ಬರೂ ತಮ್ಮ ಬೇಡಿಕೆಗಳ ಬಗ್ಗೆ ಹೊಂದಿದ್ದ ಸ್ಪಷ್ಟ ನಿಲುವು ಎಂತಹ ಪೇಚು ತಂದಿತು, ಅವರ ಮೇಲರಿಮೆಯನ್ನು ಚುಚ್ಚಿತು ಎಂಬುದನ್ನು ಒಬ್ಬ ಪ್ರಾಮಾಣಿಕ ಪತ್ರಕರ್ತರು ವರ್ಣಿಸಿದ್ದಾರೆ.

ಮೆರವಣಿಗೆಯಲ್ಲಿ ಸಾಗಿದ್ದ ಸಣಕಲು ದೇಹದ ರೈತ ಮಹಿಳೆಯೊಬ್ಬಳು ದಣಿವಿನಿಂದ ಮೂರ್ಛೆ ತಪ್ಪಿ ಬಿದ್ದಳು. ಕೆಲವು ಕ್ಷಣಗಳ ನಂತರ ಎದ್ದು ನಿಂತಾಗ ಪತ್ರಕರ್ತರೊಬ್ಬರು ನೀವೀಗ ನಿಮ್ಮ ಹಳ್ಳಿಗೆ ವಾಪಾಸು ಹೋಗುತ್ತೀರಾ ಎಂದು ಕೇಳಿದಾಗ ತಟ್ಟನೆ ಆಕೆಯ ಉತ್ತರ– "ಇಲ್ಲ! ನಾನು ಹಳ್ಳಿಗೆ ವಾಪಾಸು ಹೋದರೆ ಅಲ್ಲಿ ಸಾಯುತ್ತೇನೆ.. ಸಾಯಬೇಕಾದರೆ ನಾನು ಈ ಲಾಂಗ್ ಮಾರ್ಚ್‌ನಲ್ಲೇ, ನಮ್ಮ ಹಸಿವು, ಸಂಕಟ, ಶೋಷಣೆ ಕೊನೆಗೊಳಿಸುವ ಈ ಮೆರವಣಿಗೆಯಲ್ಲೇ ಸಾಯುತ್ತೇನೆ."

***

ವಿದ್ಯಾರ್ಥಿಗಳಿಗೆ–ನಾಗರಿಕರಿಗೆ ಅನಾನುಕೂಲ ತಪ್ಪಿಸಲು ರಾತ್ರಿಯಿಡೀ ಪಯಣ– ಮುಂಬೈ ಬೀದಿಗಳಲ್ಲಿ ಅಭೂತಪೂರ್ವ ಸ್ವಾಗತ

ರೈತರ ನಾಲ್ಕು ದಿನಗಳ ಇಂತಹ ದೃಢ ನಿರ್ಧಾರದ, ಆಕ್ರೋಶ ತುಂಬಿದ್ದರೂ ಶಿಸ್ತಿನ ನಡೆ, ಈ ಲಾಂಗ್ ಮಾರ್ಚ್ ಅದಾಗಲೇ ಥಾಣೆ–ಮುಂಬೈನ ಕಾರ್ಮಿಕ ವರ್ಗ, ಮಧ್ಯಮ ವರ್ಗ, ದಲಿತರು, ಮುಸ್ಲಿಮರು, ಸಿಖ್ಖರು ಮತ್ತಿತರ ಜನವಿಭಾಗಗಳ ಗಮನ ಸೆಳೆಯಿತು. ಇದಕ್ಕೆ ಮೊದಲು ಸಿಐಟಿಯು, ಜನವಾದಿ ಮಹಿಳಾ ಸಂಘಟನೆ, ಎಸ್‌ಎಫ್‌ಐ, ಡಿವೈಎಫ್‌ಐ ಪಾಲ್ಘರ್, ಥಾಣೆ ಮತ್ತು ಮುಂಬೈ ಜಿಲ್ಲೆಗಳಲ್ಲಿ ರೈತರಿಗೆ ಬೆಂಬಲವಾಗಿ ಒಂದು ಸಾಮೂಹಿಕ ಪ್ರಚಾರಂದೋಲನ ನಡೆಸಿದ್ದವು. ಆದರೂ ಲಾಂಗ್ ಮಾರ್ಚ್‌ಗೆ ವಿವಿಧ ಜನವಿಭಾಗಗಳಿಂದ ಸಿಕ್ಕ ಸ್ಪಂದನೆ ಅಮೋಘವಾಗಿತ್ತು ಎನ್ನುತ್ತಾರೆ ಡಾ. ಅಶೋಕ ಧವಳೆ.

ಮುಂಬೈಯಲ್ಲಂತೂ ಲಾಂಗ್ ಮಾರ್ಚ್ ಸಾಗಿ ಬಂದ ಈಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ ಗುಂಟ ನಿವಾಸಿಗಳ ಸಂಘಗಳ ಮಂದಿ ಸಾಲುಗಟ್ಟಿ ನಿಂತು ಹೂಮಳೆ ಸುರಿಸುವುದರೊಂದಿಗೆ ನೀರು, ಅವಲಕ್ಕಿ, ಅವರ ಮಕ್ಕಳು ಬಿಸ್ಕತ್‌ಗಳನ್ನು ಹಂಚಿದರು. ಸಿಖ್ಖರು ತಮ್ಮ ವೈಶಿಷ್ಟ್ಯವಾದ 'ಲಂಗರ್'ಗಳನ್ನು ಏರ್ಪಡಿಸಿ ನಡೆದು ದಣಿದಿದ್ದ ರೈತರ ಹೊಟ್ಟೆ ತಣಿಸಿದರು. ಮುಂಬೈಯ ಪ್ರಸಿದ್ಧ ಡಬ್ಬವಾಲಾಗಳ ಸಂಘಟನೆ ತನ್ನ ಸದಸ್ಯರಿಗೆ ರೈತರ ನೆರವಿಗೆ ಬರುವಂತೆ ಮೊದಲೇ ವಿನಂತಿಸಿಕೊಂಡಿತ್ತು.

ಕೊನೆಯ ದಿನ ಹಗಲಿನಲ್ಲಿ ಮುಂಬೈ ಬೀದಿಗಳಲ್ಲಿ ನಡೆದು ಆಝಾದ್ ಮೈದಾನ ಸೇರುವುದು ಈ ಮೊದಲಿನ ಕಾರ್ಯಕ್ರಮವಾಗಿತ್ತು. ಆದರೆ ಆ ದಿನ ಲಕ್ಷಾಂತರ ಮಕ್ಕಳು ಎಸ್‌ಎಸ್‌ಸಿ ಪರೀಕ್ಷೆಗೆ (ಹತ್ತನೇ ತರಗತಿಯ ಪಬ್ಲಿಕ್ ಪರೀಕ್ಷೆ) ಹಾಜರಾಗಬೇಕಿತ್ತು. ಸುಮಾರು 50000 ರೈತರ ಮೆರವಣಿಗೆ ಖಂಡಿತ ಈ ಮಹಾನಗರದ ಸಂಚಾರ ವ್ಯವಸ್ಥೆಯನ್ನು ಸ್ಥಗಿತಗೊಳಿಸಬಹುದಿತ್ತು. ಆದರೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಮತ್ತು ನಾಗರಿಕರಿಗೆ ಅನಾನುಕೂಲತೆ ತಪ್ಪಿಸಲು ಹಗಲಿಡೀ ನಡೆದು ದಣಿದಿದ್ದರೂ ಕತ್ತಲಾದ ಮೇಲೆ ಎಂದಿನಂತೆ ಊಟ ಮುಗಿಸಿ ವಿಶ್ರಮಿಸುವ ಬದಲು, ರೈತರು ನಸುಕು ಹರಿಯುವ ಮೊದಲೆ ಆಝಾದ್ ಮೈದಾನ ಸೇರಲು ನಿರ್ಧರಿಸಿದರು. ಅದಕ್ಕಾಗಿ ರಾತ್ರಿಯಿಡೀ ನಡೆದರು. ಇದು ಮುಂಬೈ ನಗರವಾಸಿಗಳ ಭಾರೀ ಪ್ರಶಂಸೆಗೆ ಪಾತ್ರವಾಯಿತು ಮಾತ್ರವಲ್ಲ, ದೇಶಾದ್ಯಂತ ಜನಚಳುವಳಿಗಳಲ್ಲಿ ಟ್ರಾಫಿಕ್ ಜಾಮ್‌ಗಳನ್ನು ಮಾತ್ರ ಕಾಣುವ ಮಂದಿಗಳೂ ಬಾಯಿ ಮುಚ್ಚಿಕೊಳ್ಳುವಂತೆ ಮಾಡಿತು.

***

ಪುಟ 16 ನೋಡಿ



ಕತ್ತಲಾದ ಮೇಲೆ ಎಂದಿನಂತೆ ಊಟ ಮುಗಿಸಿ ವಿಶ್ರಮಿಸುವ ಬದಲು, ರಾತ್ರಿಯಿಡೀ ನಡೆದ ರೈತರು ನಸುಕು ಹರಿಯುವ ಮೊದಲೆ ಆಝಾದ್ ಮೈದಾನ ತಲುಪಿದರು.



ಕೇಂದ್ರ ಮುಂಬೈಯ ಬಾಯ್ಕುಲಾದಲ್ಲಿ ಆಹಾರದ ಪೊಟ್ಟಣಗಳನ್ನು ಸಂಗ್ರಹಿಸಿ ಸ್ವಾಗತ ಕೋರಲು ಕಾಯುತ್ತಿದ್ದ ಮುಂಬೈಗರು



ಸುಡುಬಿಸಿಲಿನಲ್ಲಿ ದೀರ್ಘ ನಡಿಗೆಯ ನಂತರ ಜಾನಪದ ಹಾಡು–ಕುಣಿತ




"ನಮ್ಮ ಹಸಿವು, ಸಂಕಟ, ಶೋಷಣೆ ಕೊನೆಗೊಳಿಸುವ ಈ ಉದ್ದದ ನಡೆ"





ಮುಂಬರುವ ವಿಧಾನಸಭೆ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಸ್ಪರ್ಧಿಸಲಿರುವ ಆಯ್ದ ಕ್ಷೇತ್ರಗಳ ಚುನಾವಣಾ ಪ್ರಕ್ರಿಯೆ ಬಗ್ಗೆ ವಿಶೇಷವಾಗಿ ವರದಿ ಮಾಡಲು 'ಜನಶಕ್ತಿ' ನಿರ್ಣಯಿಸಿದೆ. ಈ ವರದಿಗಳು ಪ್ರಮುಖವಾಗಿ ಮೂರು ಹಂತದ ಸಮೀಕ್ಷೆಗಳನ್ನು ಹೊಂದಿರುತ್ತವೆ. ಇವಲ್ಲದೆ ಕೆಲವು ಕ್ಷೇತ್ರಗಳ ವಿಶೇಷ ವರದಿಗಳು ಪ್ರಕಟವಾಗಲಿವೆ. ಪ್ರತಿ ಕ್ಷೇತ್ರದ ಬಗ್ಗೆ ಚುನಾವಣಾ ಘೋಷಣೆಗೆ ಮೊದಲಿನ, ಘೋಷಣೆಯ ನಂತರ ಮತ್ತು ಅಭ್ಯರ್ಥಿ ಆಯ್ಕೆಯ ನಂತರ – ಈ ಮೂರು ಹಂತದ ಸಮೀಕ್ಷಾ ವರದಿಗಳನ್ನು ಪ್ರಕಟಿಸಲಾಗಗುತ್ತದೆ. ಮೊದಲ ಹಂತದ ವರದಿ ಕ್ಷೇತ್ರದ ಸಾಮಾಜಿಕ–ಆರ್ಥಿಕ ಪರಿಸ್ಥಿತಿ, ಜನತೆ ಎದುರಿಸುತ್ತಿರುವ ಸಮಸ್ಯೆಗಳು, ಅವನ್ನು ಪರಿಹರಿಸಲು ಹಾಲಿ ಶಾಸಕನ ಪ್ರಯತ್ನಗಳು, ಸಾಫಲ್ಯ–ವೈಫಲ್ಯಗಳು, ಹಾಲಿ ಶಾಸಕನ ಹಗರಣಗಳು, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.
ಮೊದಲಿನ ಹಂತದ ಮೊದಲ ವರದಿ ಕಳೆದ ವಾರ ಮಂಗಳೂರು ದಕ್ಷಿಣ ಕ್ಷೇತ್ರದ ಬಗ್ಗೆ ಪ್ರಕಟವಾಗಿತ್ತು. ಈ ವಾರ ಮಂಗಳೂರು ಉತ್ತರ ಮತ್ತು ಶ್ರೀನಿವಾಸಪುರ ಕ್ಷೇತ್ರಗಳ ಸಮೀಕ್ಷಾ ವರದಿ.

ಕೋಲಾರದ ಶ್ರೀನಿವಾಸಪುರ ಕ್ಷೇತ್ರ

ತರಕಾರಿ–ಮಾವುಗಳ ರಾಜಧಾನಿಯಲ್ಲೇ ಕಡು ಬಡತನ

ಸೂರ್ಯನಾರಾಯಣಸ್ವಾಮಿ



ಶ್ರೀನಿವಾಸಪುರ ತಾಲೂಕಿನ ರಾಯಲ್ಪಾಡು, ನವಲಕಿ, ರೋಕೂರು, ಯಲ್ದೂರು, ಕಸಬಾ ಸೇರಿ 5 ಹೋಬಳಿಗಳು 2018 ರ ಹಿಂದಿನ ವಿಧಾನಸಭಾ ಕ್ಷೇತ್ರವಾಗಿತ್ತು. 2018 ರಲ್ಲಿ ಕ್ಷೇತ್ರ ಪುನರ್ ವಿಂಗಡನೆ ಆದ ಮೇಲೆ ಕೋಲಾರ ತಾಲೂಕಿನ ಸುಗಟೂರು ಮತ್ತು ಹೋಳೂರು ಹೋಬಳಿಗಳನ್ನು ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸಲಾಗಿದೆ.

ಈ ಕ್ಷೇತ್ರದಲ್ಲಿ ಎಲ್ಲಾ ಜಾತಿ ಸಮುದಾಯಗಳ ಜನವಿದ್ದರೂ ಒಕ್ಕಲಿಗ, ಪರಿಶಿಷ್ಟಜಾತಿ, ಕುರುಬ, ಬಲಿಜಿಗ, ಮುಸ್ಲಿಂ ಸಮುದಾಯದ ಜನಸಂಖ್ಯೆ ಹೆಚ್ಚಿದೆ. ರಾಜಕೀಯವಾಗಿ ಒಕ್ಕಲಿಗ ಸಮುದಾಯ ಗ್ರಾಮೀಣ ಭಾಗದಲ್ಲಿ ಪ್ರಾಬಲ್ಯ ಹೊಂದಿದೆ. ನಗರ ಪ್ರದೇಶದಲ್ಲಿ ಮುಸ್ಲಿಂ ಮತ್ತು ಬಲಿಜಿಗರ ಸಮುದಾಯ ಪ್ರಾಬಲ್ಯ ಹೊಂದಿದೆ.

ಇಲ್ಲಿ ಮೊದಲಿನಿಂದಲೂ ಪಕ್ಷ ರಾಜಕಾರಣಕ್ಕೆ ಜೋತು ಬಿದ್ದಿಲ್ಲ. ಹಣ, ಜಾತಿ ಹಾಗೂ ಪಕ್ಷಗಳು ಇಲ್ಲಿ ನಿರ್ಣಾಯಕವಲ್ಲ. ವ್ಯಕ್ತಿ ನಿಷ್ಠೆ, ಜನಪ್ರತಿನಿಧಿಗಳ ಅಭಿವೃದ್ಧಿ ಕೆಲಸ, ವೈಯಕ್ತಿಕ ವರ್ಚಸ್ಸಿನ ಮುಂದೆ ಪಕ್ಷಗಳು ಗೌಣವಾಗಿವೆ.

ಇಲ್ಲಿ ಶೇ. 75% ರಷ್ಟು ಜನ ಕೃಷಿ ಅವಲಂಬಿತ ಜೀವನ ಮಾಡುತ್ತಾರೆ. ರಾಯಲ್ಪಾಡು ಹೋಬಳಿ ಹೊರತುಪಡಿಸಿ ಉಳಿದ ಎಲ್ಲಾ ಹೋಬಳಿಗಳಲ್ಲಿ ಮಾವು ಪ್ರಧಾನ ತೋಟಗಾರಿಕಾ ಬೆಳೆಯಾಗಿದೆ. ಇದು ವಾರ್ಷಿಕ ಬೆಳೆಯಾಗಿದ್ದು ಕುಟುಂಬಗಳ ಆರ್ಥಿಕ ಪರಿಸ್ಥಿತಿ ಸುಧಾರಣೆ ಮಾಡುತ್ತಿದೆ. ಇದರೊಟ್ಟಿಗೆ ನೀರಾವರಿ ಹೊಂದಿರುವ ರೈತ ಕುಟುಂಬಗಳು ತರಕಾರಿ ಬೆಳೆಗಳು ಹಾಗೂ ಹೈನುಗಾರಿಕೆಯಿಂದ ಆರ್ಥಿಕ ಮೂಲಗಳು ಕಂಡು ಕೊಂಡಿದ್ದಾರೆ. ಇಲ್ಲಿ ಯಾವುದೇ ಕಾರ್ಖಾನೆಗಳು ಇಲ್ಲದ ಕಾರಣ, ಕೂಲಿಕಾರರು ಮಾವಿನ ಸುಗ್ಗಿಯಲ್ಲಿ 3 ತಿಂಗಳ ಕಾಲ ಮಾತ್ರ ನಿರಂತರ ಕೂಲಿ ಸಿಗುತ್ತದೆ. ಉಳಿದ ದಿನಗಳಲ್ಲಿ ಕೆಲಸಗಳಿಗೆ ಕಾಯಬೇಕಾಗುತ್ತದೆ. ಅದರಿಂದಾಗಿ, ಬೆಂಗಳೂರು, ಹೈದರಾಬಾದ್ ನಗರಗಳಂತಹ ದೊಡ್ಡ ದೊಡ್ಡ ನಗರಗಳಿಗೆ ಕೆಲಸ ಅರಸಿ ವಲಸೆ ಹೋಗುವುದು ಇಂದಿಗೂ ಜೀವಂತವಾಗಿದೆ. ವಲಸೆ ತಪ್ಪಿಸಲು ಸರ್ಕಾರ ಜಾರಿಗೆ ತಂದಿರುವ ಉದ್ಯೋಗ ಖಾತ್ರಿ ಯೋಜನೆ ಶ್ರೀನಿವಾಸಪುರ ತಾಲೂಕಿನಲ್ಲಿ ಸಂಪೂರ್ಣ ವಿಫಲವಾಗಿದೆ. ಇಲ್ಲಿ ಆಡಳಿತರೂಢ ಶಾಸಕರುಗಳು ಮುಖಂಡರು ಯಂತ್ರಗಳ ಮೂಲಕವೇ ಖಾತ್ರಿ ಯೋಜನೆಯನ್ನು ನಡೆಸುತ್ತಾರೆ. ನೂತನವಾಗಿ ಸೇರಿರುವ ಸುಗಟೂರು ಹೋಬಳಿಯಲ್ಲಿ ರೈತ ಕೃಷಿ, ಕೂಲಿಕಾರರ ಸಂಘಟನೆ ಬಲಿಷ್ಠವಾಗಿರುವುದರಿಂದ ಸ್ವಲ್ಪಮಟ್ಟಿಗೆ ಖಾತ್ರಿ ಯೋಜನೆ ಕೂಲಿಕಾರರಿಗೆ ಸಿಕ್ಕಿದೆ.

ಇಲ್ಲಿ ನೀರಾವರಿ ಮೂಲಗಳು ತೀರಾ ಕಡಿಮೆ ಇದ್ದರೂ, ಕಡಿಮೆ ನೀರಿನಲ್ಲಿ ಬೆಂಗಳೂರು ಚೆನ್ನೈ ನಗರಗಳಿಗೆ ದಿನ ನಿತ್ಯ ಲೋಡ್‌ಗಟ್ಟಲೆ ತರಕಾರಿಗಳು ಸಾಗಾಣಿಕೆ ಮಾಡುತ್ತಾರೆ. ಯಲ್ದೂರು, ಕಸಬಾ, ಹೋಳುರು, ಸುಗಟೂರು ಹೋಬಳಿಗಳಲ್ಲಿ ರೇಷ್ಮೆ ಅವಲಂಬಿತ ಕುಟುಂಬಗಳು ಹೆಚ್ಚಾಗಿ ಕಾಣಬಹುದಾಗಿದೆ. ಇದರಿಂದ ಹಲವು ರೈತರು ತನ್ನ ಆರ್ಥಿಕತೆಯನ್ನು ಸುಧಾರಿಸುವಂತಾಗಿದೆ.

ಜನತೆ ಎದುರಿಸುತ್ತಿರುವ ಸಮಸ್ಯೆಗಳು:

ಬಹುಮುಖ್ಯವಾಗಿ ನೀರಾವರಿ ಸಮಸ್ಯೆ ಬಹುದಿನಗಳಿಂದ ಸಮಸ್ಯೆಯಾಗಿದೆ. ಇದನ್ನು ಸುಧಾರಿಸಲು ತಾತ್ಕಾಲಿಕ ಪ್ರಯತ್ನಗಳು ನಡೆದಿದೆಯಾದರು ಸಫಲವಾಗಲಿಲ್ಲ. ಮಾವು ಪ್ರಮುಖ ಬೆಳೆಯಾಗಿರುವುದರಿಂದ ಇಲ್ಲಿ ಶೀತಲಕೇಂದ್ರವಾಗಲಿ, ಸಂಸ್ಕರಣಾ ಘಟಕವಾಗಲಿ ಪ್ರಾರಂಭ ಮಾಡದ ಕಾರಣ ಬೆಳೆದಂತಹ ಮಾವನ್ನು ದಲ್ಲಾಳಿಗಳ ಮೂಲಕ ಮಾರಾಟ ಮಾಡಬೇಕಿದೆ. ತಾಲೂಕಿನಲ್ಲಿ ಶೈಕ್ಷಣಿಕವಾಗಿ ಯುವಕರು ಮುಂದುವರೆದಿದ್ದಾರೆ. ಆದರೆ ಉದ್ಯೋಗಗಳು ಇಲ್ಲದೆ ನಿರುದ್ಯೋಗದಿಂದ ನರಳುತ್ತಿದ್ದಾರೆ. ಇದರ ನಿವಾರಣೆಗೆ ಕೈಗಾರಿಕೆಗಳ ಸ್ಥಾಪನೆ ಮಾಡಬೇಕಾಗಿತ್ತು. ಆದರೆ ಪ್ರಯತ್ನ ನಡೆದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಜನತೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ನೀಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಗ್ರಾಮೀಣ ಪ್ರದೇಶಗಳ ರಸ್ತೆಗಳು ತೀರಾ ಹದಗೆಟ್ಟಿವೆ. ಕೇವಲ ನಗರವನ್ನು ಅಭಿವೃದ್ಧಿ ಪಡಿಸುವ ಮೂಲಕ ಗ್ರಾಮೀಣ ರಸ್ತೆಗಳನ್ನು ನಿರ್ಲಕ್ಷ ಮಾಡಲಾಗಿದೆ. ವಸತಿ ಯೋಜನೆ ಸ್ವಲ್ಪ ಮಟ್ಟಿಗೆ ಸಾಕಾರವಾಗಿದೆ. ಆದರೆ ಇನ್ನೂ ಹಲವಾರು ಕುಟುಂಬಗಳಿಗೆ ನಿವೇಶನವಿಲ್ಲದೆ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರರ ಕೌಟುಂಬಿಕ ಹಿನ್ನೆಲೆಯ ರಮೇಶ್‌ಕುಮಾರ್ ಇಲ್ಲಿನ ಶಾಸಕ. ಬ್ರಾಹ್ಮಣ ಸಮುದಾಯದವರು. ಬ್ರಾಹ್ಮಣರ ಸಂಖ್ಯೆ ಬೆರಳೆಣಿಕೆಯಷ್ಟಿದ್ದರೂ ಎಲ್ಲಾ ಸಮುದಾಯದ ಮತದಾರರು ಅವರ ಕೈ ಹಿಡಿದಿದ್ದಾರೆ. ಅವರ ರಾಜಕೀಯ ಚತುರತೆ ಮತ್ತು ವಾಗ್ಮಿ ಗುಣಗಳಿಂದ 5 ಬಾರಿ ಜಯವನ್ನು ಪಡೆದಿದ್ದಾರೆ.

ಒಕ್ಕಲಿಗ ಸಮುದಾಯದ ವೆಂಕಟಶಿವಾರೆಡ್ಡಿ ಸ್ವಾತಂತ್ರ್ಯ ಹೋರಾಟದ ಕುಟುಂಬ ಹಿನ್ನೆಲೆಯಲ್ಲಿ ಬಂದವರಾಗಿದ್ದಾರೆ. ಎಲ್ಲಾ ಒಕ್ಕಲಿಗರು ಇವರಿಗೆ ಮತ ನೀಡದಿದ್ದರೂ ಎಲ್ಲಾ ಸಮುದಾಯದ ಜನರ ನಡುವೆ ಪ್ರತೀ ವಿಶ್ವಾಸವನ್ನು ತೋರುವುದರಿಂದ 4 ಬಾರಿ ಜಯವನ್ನು ಪಡೆದಿದ್ದಾರೆ.

ಈ ಕ್ಷೇತ್ರ ಯಾರು ಹೆಚ್ಚು, ಯಾರು ಕಡಿಮೆ ಎಂದು ಹೇಳುವುದು ಸುಲಭದ ಮಾತಾಗಿಲ್ಲ. ಗೆಲುವಿನಲ್ಲಿ ನಿರಂತರತೆ ಇಲ್ಲದಿದ್ದರೂ, ಇವರಿಬ್ಬರ ನಡುವೆ ನಡೆಯುವ ಚುನಾವಣೆ ಸ್ಪರ್ಧೆಯಲ್ಲಿ ಗೆಲುವಿನ ಅಂತರ ತುಂಬಾ ಕಡಿಮೆ ಮತಗಳು. ಸರಾಸರಿ 5 ರಿಂದ 6 ಸಾವಿರ ಮತಗಳು. ಕೆ.ಆರ್. ರಮೇಶ್ ಕುಮಾರ್ ಮತ್ತು ಜಿ.ಕೆ. ವೆಂಕಟಶಿವಾರೆಡ್ಡಿ ಇದು ನಮಗೆ ಕೊನೆ ಚುನಾವಣೆ ನಮ್ಮನ್ನು ಬೆಂಬಲಿಸಿ ಎಂದು ಇಬ್ಬರು ಮತದಾರರ ನಡುವೆ ಮನವಿ ಮಾಡುತ್ತಿದ್ದಾರೆ. ಕಳೆದ 20 ವರ್ಷಗಳಿಂದ ಸ್ಪರ್ಧೆ ಮಾಡುತ್ತಿರುವ ಬಿಜೆಪಿ ಪಕ್ಷದಿಂದ ಡಾ॥ ವೇಣುಗೋಪಾಲ್ ಮತ್ತು ಎಸ್‌ಎಲ್‌ಎನ್ ಮಂಜುನಾಥ್ ಸ್ಪರ್ಧೆ ಮಾಡಲು ಬಯಸಿದ್ದಾರೆ. ಇಲ್ಲಿ ಬಿಜೆಪಿ ಯ ಹಿಂದೂಪರ ಸಂಘಟನೆಗಳು ಸಕ್ರಿಯವಾಗಿದ್ದರೂ ಯಾವುದೇ ಸ್ಥಳೀಯ ಚುನಾವಣೆಗಳಲ್ಲಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾಗಿಲ್ಲ.

ಜಿಲ್ಲಾ ಪಂಚಾಯತ್‌ನ 7 ಸ್ಥಾನಗಳ ಪೈಕಿ 5 ಜೆಡಿ(ಎಸ್), 2 ಕಾಂಗ್ರೆಸ್ ಸ್ಥಾನಗಳನ್ನು ಪಡೆದಿವೆ. ತಾಲೂಕು ಪಂಚಾಯತಿ, ಗ್ರಾಮ ಪಂಚಾಯ್ತಿ ಮತ್ತು ಪುರಸಭೆಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಬಹುತೇಕ ಸಹಕಾರಿ ಸಂಸ್ಥೆಗಳು ಕಾಂಗ್ರೆಸ್ ಬೆಂಬಲಿತವಾಗಿವೆ.

ಹಲವು ವರ್ಷಗಳ ನಂತರ ಕೆ.ಆರ್. ರಮೇಶ್‌ಕುಮಾರ್ ಸಂಪುಟದಲ್ಲಿ ಆರೋಗ್ಯ ಸಚಿವರಾಗಿದ್ದಾರೆ. ಇವರು ಕ್ಷೇತ್ರಕ್ಕೆ ಕುಡಿಯುವ ನೀರಿನ ಘಟಕಗಳು, ಆಸ್ಪತ್ರೆಗಳ ಸುಧಾರಣೆ, 16,000 ಮನೆಗಳ ನಿರ್ಮಾಣಕ್ಕೆ ಮುಂದಾಗಿ ರಸ್ತೆಗಳ ಅಭಿವೃದ್ಧಿ ಜೊತೆಗೆ ಸ್ತ್ರೀಶಕ್ತಿ ಸಂಘಗಳಿಗೆ ಸಹಕಾರಿ ಸಾಲ ನೀಡುತ್ತಾ ಸೂಪರ್ ಸ್ಪೆಶಾಲಿಟಿ ಮತ್ತು ಕ್ಯಾನ್ಸರ್ ಆಸ್ಪತ್ರೆಗಳನ್ನು ಮಂಜೂರು ಮಾಡಿರುವುದಾಗಿ ಕ್ಷೇತ್ರದಲ್ಲಿ ಮತ್ತಷ್ಟು ಕೆಲಸಗಳು ಮಾಡಲು ಅವಕಾಶ ನೀಡಿ ಎಂದು ಮತದಾರರ ಮುಂದೆ ಹೋಗುತ್ತಿದ್ದಾರೆ. ●



ಕೋಲಾರದಲ್ಲಿಯೇ ಹಿಂದುಳಿದ ತಾಲೂಕು

ಕೋಲಾರ ಕರ್ನಾಟಕದಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಜಿಲ್ಲಾ ಮಾನವ ಅಭಿವೃದ್ಧಿ ವರದಿ 2014ರ ಪ್ರಕಾರ ಶ್ರೀನಿವಾಸಪುರ ತಾಲೂಕು ಮುಳಬಾಗಲು ಬಿಟ್ಟರೆ ಹೆಚ್ಚಿನ ಅಭಿವೃದ್ಧಿ ಸೂಚಕಗಳಲ್ಲಿ ಕೋಲಾರ ಜಿಲ್ಲೆಯಲ್ಲಿಯೇ ಹಿಂದುಳಿದ ತಾಲೂಕು. ಜನತೆಯ ಆರ್ಥಿಕ ಮಟ್ಟ ಸೂಚಿಸುವ ಜೀವನ ಮಟ್ಟ, ಆಹಾರ ಭದ್ರತೆಯಲ್ಲಿ ಕೊನೆಯ (5ನೇ) ಸ್ಥಾನದಲ್ಲಿದೆ. ಶಿಕ್ಷಣ ಬಿಟ್ಟರೆ ಆರೋಗ್ಯ ಸೇರಿದಂತೆ ಹೆಚ್ಚಿನ ವಿಷಯಗಳಲ್ಲಿ ಮತ್ತು ಒಟ್ಟಾರೆ ಮಾನವ ಅಭಿವೃದ್ಧಿ ಸೂಚಕದಲ್ಲಿ ತಾಲೂಕು 4ನೇ ಸ್ಥಾನದಲ್ಲಿದೆ. ಶೇ. 78.5 ರಷ್ಟು ಮಹಿಳೆಯರು ಅನಿಮೀಯಾದಿಂದ ನರಳುತ್ತಿದ್ದಾರೆ. ಜಿಲ್ಲೆಯ ಶಿಶು ಮರಣದ ಪ್ರಮಾಣ (ಸಾವಿರ ಮಕ್ಕಳಲ್ಲಿ 62) ಜಿಲ್ಲಾ ಸರಾಸರಿ 39ಕ್ಕಿಂತಲೂ ಬಹಳ ಹೆಚ್ಚು ಇದೆ. ಕುಪೋಷಣೆಯ ಮಕ್ಕಳ ಪ್ರಮಾಣ ಶೇ. 35. ಕುಟುಂಬಗಳು ಆರೋಗ್ಯಕ್ಕೆ ಮಾಡುವ ಖರ್ಚು ಸಹ ಎಲ್ಲಾ ತಾಲೂಕುಗಳಿಗಿಂತ ಹೆಚ್ಚು. ಇದು (ಮುಳಬಾಗಲಿನ ಶೇ. 73 ಬಿಟ್ಟರೆ) ಅತ್ಯಂತ ಹೆಚ್ಚು ಬಿ.ಪಿ.ಎಲ್. ಕಾರ್ಡಿನ ಪ್ರಮಾಣ (ಶೇ. 72) ಇರುವ ತಾಲೂಕು, ಅಂದರೆ ಹೆಚ್ಚು ಬಡತನ ಇರುವ ತಾಲೂಕು. ಶೌಚಾಲಯ ಇರುವ ಮನೆಗಳ ಪ್ರಮಾಣ ಈ ತಾಲೂಕಿನಲ್ಲಿ ಜಿಲ್ಲೆಯಲ್ಲಿಯೇ ಅತ್ಯಂತ ಕಡಿಮೆ. ಶೇ. 30. ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಕಡಿಮೆ – ಶೇ. 22.5 ಮನೆ ಇಲ್ಲದವರ ಪ್ರಮಾಣ ಶೇ. 15.

ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರ

ಅರ್ಧಾಂಶ ಬೃಹತ್‌ನಗರ ಇನ್ನರ್ಧ ಹಳ್ಳಿಗಾಡು

ವಾಸುದೇವ ಉಚ್ಚಿಲ್

ಕೆಲವು ವರ್ಷಗಳ ಹಿಂದೆ ಸುರತ್ಕಲ್ ಅಸೆಂಬ್ಲಿ ಕ್ಷೇತ್ರವೆಂದು ಪರಿಚಿತವಾಗಿದ್ದ ಪ್ರದೇಶ ಈಗ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರವಾಗಿದೆ. ಈ ಕ್ಷೇತ್ರ ಪುನರ್ನಿರೂಪಣೆ ಎಂಬುದು ಚುನಾವಣಾ ಮತದಾರರ ಪಟ್ಟಿಯಲ್ಲಿ ಆಗೀಗ ನಡೆಯುವ ಪ್ರಕ್ರಿಯೆ. ಬೃಹತ್ ಮಂಗಳೂರು ನಗರದ ಉತ್ತರ ಭಾಗದ 22 ವಾರ್ಡ್‌ಗಳು, ಅದಕ್ಕೂ ಈಶಾನ್ಯಕ್ಕೆ ಚಾಚಿರುವ 22 ಗ್ರಾಮಗಳು ಮಂಗಳೂರು ಉತ್ತರ ಅಸೆಂಬ್ಲಿ ಎನಿಸಿದೆ.

22 ಗ್ರಾಮಗಳಲ್ಲಿ ಕಿರು ಕೈಗಾರಿಕೆಗಳಿಗಾಗಿ ರಾಜ್ಯ ಸರ್ಕಾರ ನಿರ್ಮಿಸಿದ ಇಂಡಸ್ಟ್ರಿಯಲ್ ಎಸ್ಟೇಟನ್ನು ಒಳಗೊಂಡ ಗಂಜಿಮಠವೂ ಇದೆ. ಇನ್ನುಳಿದಂತೆ ಎಲ್ಲಾ ಗ್ರಾಮಗಳೂ ಅಭಿವೃದ್ಧಿಯಲ್ಲಿ ತೀರಾ ಹಿಂದೆ ಇವೆ. ಈ ಪ್ರದೇಶಗಳ ಮಧ್ಯೆ ಗುರುಪುರ ಹೊಳೆ ಪಶ್ಚಿಮಾಭಿಮುಖವಾಗಿ ಹರಿದು, ಮಂಗಳೂರಿನ ನವಮಂಗಳೂರು ಸಮೀಪ ಸಮುದ್ರ ದಂಡೆಗೆ ಸಮಾನಾಂತರವಾಗಿ ದಕ್ಷಿಣಕ್ಕೆ ಹರಿದು ನೇತ್ರಾವತಿಯನ್ನು ಜತೆಗೂಡುತ್ತದೆ.

ಇಡೀ ದ.ಕ.ಜಿಲ್ಲೆಗೆ ಅಡಿಪಾಯವಾಗಿದ್ದ 4 ಯೋಜನೆಗಳು 50–60ರ ದಶಕದಲ್ಲಿ ಅಂದಿನ ರಾಜಕೀಯ ಮುತ್ಸದ್ದಿಯೂ ಪಾರ್ಲಿಮೆಂಟು ಸದಸ್ಯರೂ ಆದ ಶ್ರೀನಿವಾಸ ಮಲ್ಯರ ಪ್ರಯತ್ನದಿಂದ ಜಿಲ್ಲೆಗೆ ಬಂತು. ಅವುಗಳಲ್ಲಿ ನವಮಂಗಳೂರು ಸರ್ವಋತು ಬಂದರು, ಸುರತ್ಕಲ್ಲಿನ ರೀಜನಲ್ ಇಂಜಿನಿಯರಿಂಗ್ ಕಾಲೇಜು– ಈ ಎರಡು ಮಂಗಳೂರು ಉತ್ತರ ಅಸೆಂಬ್ಲಿ ಕ್ಷೇತ್ರವ್ಯಾಪ್ತಿಯಲ್ಲೇ ಇವೆ. ಬಜ್ಪೆ ವಿಮಾನ ನಿಲ್ದಾಣ ಮತ್ತು ಮಂಗಳೂರಿನಿಂದ ಹಾದು ಹೋಗುವ ಕೇರಳ–ಮುಂಬಯಿ ರಾಷ್ಟ್ರೀಯ ಹೆದ್ದಾರಿ ಶ್ರೀನಿವಾಸ ಮಲ್ಯರ ಪ್ರಯತ್ನದಿಂದಲೇ ಆಗಿದ್ದು, ಅದು ಜಿಲ್ಲೆಯ ಸಂಚಾರ ಸಾರಿಗೆ, ವ್ಯಾಪಾರ ವಹಿವಾಟಿನ ಮುನ್ನಡೆಗೆ ಕಾರಣವಾಗಿದೆ. 1970ರ ದಶಕದಿಂದೀಚೆಗೆ ಬೈಕಂಪಾಡಿ ಇಂಡಸ್ಟ್ರಿಯಲ್ ಎಸ್ಟೇಟ್, ಮಂಗಳೂರು ಫರ್ಟಿಲೈಸರ್ಸ್ ಆಂಡ್ ಕೆಮಿಕಲ್ಸ್ ಕಾರ್ಖಾನೆ, ಎಂಆರ್‌ಪಿಎಲ್ ಮತ್ತು ಹೆಚ್‌ಪಿಸಿಎಲ್ ಪೆಟ್ರೋಲಿಯಂ ಸಂಸ್ಕರಣಾ ಸ್ಥಾವರಗಳು, ಬಿಎಎಸ್‌ಎಫ್ ಪಿಗಾಮೆಂಟ್ ಘಟಕಗಳು, ಕೆನರಾ ಸ್ಟೀಲ್ಸ್ ಇತ್ಯಾದಿ ಸಾಕಷ್ಟು ದೊಡ್ಡ ದೊಡ್ಡ ಉದ್ಯಮಗಳು ನವಮಂಗಳೂರು ಬಂದರದ ಈಶಾನ್ಯಕ್ಕಿರುವ ಕೈಗಾರಿಕಾ ವಲಯ (ಈಗ ವಿಶೇಷ ಆರ್ಥಿಕ ವಲಯ)ದಲ್ಲಿದೆ. ಮಂಗಳೂರಿನಿಂದ ಮುಂಬಯಿಗೂ ಬೆಂಗಳೂರಿಗೂ ರೈಲು ವಿಸ್ತರಣೆಯಾಗಿರುವುದು, ಮಂಗಳೂರಿನಿಂದ ಬೆಂಗಳೂರಿಗೆ ತೈಲವಾಹಕ ಪೈಪುಗಳ ನಿರ್ಮಾಣ– ಇವೆಲ್ಲದರಿಂದ ಬಂದರು ಕೇಂದ್ರವಾಗಿ ಇರುವ, ವಿವಿಧ ಉದ್ಯಮಗಳ ಸಂಕೀರ್ಣವಾಗಿ ಮಂಗಳೂರು ಉತ್ತರ ಅಸೆಂಬ್ಲಿ ಕ್ಷೇತ್ರವಿದೆ.

ಈ ಎಲ್ಲಾ ಉದ್ದಿಮೆಗಳಿಂದಾಗಿ ದಕ್ಷಿಣ ಕನ್ನಡದ ಜನರ ಉದ್ಯೋಗದ ಹಸಿವು ಹಿಂಗಿದೆಯೋ ಎಂದು ಕೇಳಿದರೆ ಸಕಾರಾತ್ಮಕ ಉತ್ತರ ಸಿಗಲಿಕ್ಕಿಲ್ಲ. ಕೆಲವು ಉದ್ಯಮಗಳಂತೂ ವಿಶೇಷ ಪರಿಣತರ ಅವಶ್ಯಕತೆಯನ್ನು ಬಯಸುವಂಥದ್ದು. ಎಂಆರ್‌ಪಿಎಲ್ ತೈಲಸ್ಥಾವರ ಆಗಬೇಕೆಂದು ಹೋರಾಟದ ಮುಂಚೂಣಿಯಲ್ಲಿ ಅಂದು ಇದ್ದುದು ಡಿವೈಎಫ್‌ಐ ಮತ್ತು ಸಿಪಿಐ(ಎಂ). ಆದರೆ ಅಲ್ಲಿ ಉದ್ಯೋಗ ಪಡೆದ ಜಿಲ್ಲೆಯ ಜನರು ಕೆಲವು ನೂರು ಸಂಖ್ಯೆಯಲ್ಲಿ ಮಾತ್ರ. ತೈಲ ಸಾಗಣೆ, ಲಾರಿ ಸಾಗಾಟ ಇತ್ಯಾದಿಗಳಲ್ಲಿಯೂ ಬೇರೆ ರಾಜ್ಯಗಳ ಜನರೇ ಸಾಕಷ್ಟಿದ್ದಾರೆ. ಇಲ್ಲಿನ ಆಧುನೀಕೃತಗೊಂಡ ಬೃಹತ್

ಅರ್ಧಾಂಶ ನಗರ, ಇನ್ನು ಅರ್ಧಾಂಶ ಗ್ರಾಮಾಂತರವಾಗಿರುವ ಮಂಗಳೂರು ಉತ್ತರ ಅಸೆಂಬ್ಲಿ ಪ್ರದೇಶವನ್ನು ಶಾಸಕರಾಗಿ ಪ್ರತಿನಿಧಿಸುವವರು ಈ ಪ್ರದೇಶಗಳ ವಿಶಿಷ್ಟ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ವಿಶೇಷ ತಿಳುವಳಿಕೆಯುಳ್ಳವರಾಗಿರಬೇಕಾದ ಅಗತ್ಯ ಇದೆ.

ಉದ್ದಿಮೆಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ತಾಂತ್ರಿಕ ಪರಿಣತರಿದ್ದಾರೆ. ಕಿರು ಕೈಗಾರಿಕೆಗಳಿಗೆ 1990ರ ವರೆಗೂ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸಬ್ಸಿಡಿ ಹಾಗೂ ಇತರ ನೆರವು ನೀಡುತ್ತಿದ್ದವು. 1990ರ ಬಳಿಕದ ನವ ಉದಾರೀಕರಣ ನೀತಿಯ ಫಲವಾಗಿ ಹಿಂದೊಮ್ಮೆ ಸ್ಥಳೀಯ ಜನರಿಗೆ ಉದ್ಯೋಗ ಒದಗಿಸಿಕೊಟ್ಟ ಬೈಕಂಪಾಡಿಯ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಒಂದೊಂದೇ ಕಿರು ಕೈಗಾರಿಕೆಗಳು ಮುಚ್ಚಿ ಹೋಗುತ್ತಿವೆ. ಗಂಜೀಮಠದ ಹೊಸ ಇಂಡಸ್ಟ್ರಿಯಲ್ ಎಸ್ಟೇಟಿನ ನಿವೇಶನಗಳು ಹೆಚ್ಚಿಗೆ ಖಾಲಿ ಇವೆ. ವಿಶೇಷ ಆರ್ಥಿಕ ವಲಯವನ್ನು ಸರಕಾರ ನಿರ್ಮಿಸಿ, ಅದರ ಮೂಲಕ ಬೃಹತ್ ಉದ್ದಿಮೆಗಳಿಗೆ ಜನರ ಭೂಮಿ ಸ್ವಾಧೀನಪಡಿಸಿ ಒದಗಿಸುವ ಪ್ರಕ್ರಿಯೆ ಹೆಚ್ಚುತ್ತಲೇ ಹೋಗಿದೆ. ಇದರಿಂದ ಎಂಆರ್‌ಪಿಎಲ್ ತೈಲಸಂಕೀರ್ಣಗಳಿಗೆಂದು ಭೂಸ್ವಾಧೀನ ನಡೆಯುತ್ತಿರುವುದರ ಜೊತೆಗೇನೇ ಈ ಎಸ್ಟೇಟುಗಳ ಹೊರವಲಯದ ಜನತೆಯ ಮೇಲೆ ಈ ಸ್ಥಾವರದ ಆಡಳಿತಗಾರರು ಹಾಗೂ ಎಸ್‌ಇಝಡ್ ಅಧಿಕಾರಿಗಳು ದಬ್ಬಾಳಿಕೆ ನಡೆಸುತ್ತಿದ್ದಾರೆ. ಜೋಕಟ್ಟೆ, ಕಾನ, ತೋಕೂರು ಗ್ರಾಮಗಳ ಜನತೆ ಶಬ್ದ ಮಾಲಿನ್ಯ, ವಾಯುಮಾಲಿನ್ಯ ಹಾಗೂ ಜಲಮಾಲಿನ್ಯ ಹೀಗೆ ಹಲವು ರೀತಿಯ ಕೆಡುಕಿಗೆ ಈಡಾಗುತ್ತಿದ್ದಾರೆ. ಇದರ ವಿರುದ್ಧ ಜೋಕಟ್ಟೆ ನಾಗರಿಕರು ಹೋರಾಟ ಸಮಿತಿ ರಚಿಸಿಕೊಂಡು ಕಳೆದ 4 ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಈ ಬೃಹತ್ ಉದ್ದಿಮೆಗಳ ಮೇಲೆ ಕಿಂಚಿತ್ತೂ ಅಂಕುಶ ಹಾಕಲು ಸಮರ್ಥರಾಗಿಲ್ಲ. ಇನ್ನೊಂದೆಡೆ ಪಿಗ್‌ಮೆಂಟ್ ಕಾರ್ಖಾನೆಯೊಂದರ ವಿಷಪೂರಿತ ತ್ಯಾಜ್ಯವನ್ನು ತೋಡುಗಳ ಮೂಲಕ ಗುರುಪುರ ಹೊಳೆಗೆ ಕಳುಹಿಸಲಾಗುತ್ತಿದೆ. ಆ ನದಿಯಲ್ಲಿ ಮೀನುಗಳು ಸತ್ತ, ದುರ್ವಾಸನೆ ಸೇರಿಕೊಂಡ ಪರಿಸ್ಥಿತಿ ಇದ್ದರೂ, ಜಿಲ್ಲಾಡಳಿತ ನಿಯಂತ್ರಣ ತರುವಲ್ಲಿ ವಿಫಲವಾಗಿವೆ. ಉದ್ದಿಮೆಗಳ ಸಂಕೀರ್ಣವೇ ಆಗಿರುವ ಈ ಪ್ರದೇಶ ಒಂದೆಡೆ ಜನರಿಗೆ ಸಾಕಷ್ಟು ಉದ್ಯೋಗಗಳನ್ನೂ ಕೊಟ್ಟಿಲ್ಲ, ಇನ್ನೊಂದೆಡೆ ಮಿತಿಯಿಲ್ಲದ ಮಾಲಿನ್ಯಕ್ಕೆ ಕಾರಣವಾಗಿದೆ.

ಉಳಿದಂತೆ ಮಂಗಳೂರಿನ ತಣ್ಣೀರು ಬಾವಿಯಿಂದ ಸುರತ್ಕಲ್‌ವರೆಗೆ ಕಡಲತೀರದಲ್ಲಿ ಮೀನುಗಾರಿಕೆ ನಡೆಸುವ ಮೀನುಗಾರರ ಸಮುದಾಯವಿದೆ. ಮಂಗಳೂರು ಹಳೇ ಬಂದರು ಮೀನುಗಾರಿಕಾ ಬಂದರಾಗಿದ್ದು, ಅದು ಗುರುಪುರ ನದಿ ದಂಡೆಯಲ್ಲಿದೆ. ಇಡೀ ಜಿಲ್ಲೆಯ ಮೀನುಗಾರಿಕಾ ಚಟುವಟಿಕಾ ಕೇಂದ್ರ ಈ ಬಂದರು. ತಣ್ಣೀರುಬಾವಿಯಿಂದ ಸುರತ್ಕಲ್‌ವರೆಗಿನ ಮೀನುಗಾರ ಮಹಿಳೆಯರು ಮಂಗಳೂರು ಮೀನು ಮಾರ್ಕೆಟ್‌ನಲ್ಲೋ ಅಥವಾ ಪೂರ್ವಭಾಗದ ಊರುಗಳ ಮಾರ್ಕೆಟುಗಳಲ್ಲೋ ಬೆಳಗ್ಗೆಯಿಂದ ಸಂಜೆವರೆಗೆ ಮೀನುವ್ಯಾಪಾರ ಮಾಡುತ್ತಾರೆ. ಮೀನು ವ್ಯಾಪಾರ, ಗುಜರಿ ವ್ಯಾಪಾರ, ಸಣ್ಣ ಪುಟ್ಟ ವ್ಯಾಪಾರವನ್ನು ನಡೆಸುವ ಬ್ಯಾರಿ ಮುಸ್ಲಿಮರ ಸಮುದಾಯ ದೊಡ್ಡ ಸಂಖ್ಯೆಯಲ್ಲಿ




ಮಂಗಳೂರು ಉತ್ತರ ಅಸೆಂಬ್ಲಿ ಕ್ಷೇತ್ರದಲ್ಲಿ ವಾಸಿಸುತ್ತಾರೆ, ಇವರಲ್ಲಿ ಒಂದಿಷ್ಟು ಕುಟುಂಬಗಳು ಕೊಲ್ಲಿ ಪ್ರದೇಶಕ್ಕೆ ಹೋಗಿರುವದರಿಂದ ಇತ್ತೀಚೆಗೆ ಆರ್ಥಿಕವಾಗಿ ಅನುಕೂಲಸ್ಥರಾಗಿದ್ದಾರೆ. ಕೊಲ್ಲಿ ಪ್ರದೇಶದಲ್ಲಿನ ರಾಜಕೀಯ ಬಿಕ್ಕಟ್ಟುಗಳಿಂದಾಗಿ ಕೆಲವೊಮ್ಮೆ ಹಣಕಾಸೂ ಕಳೆದುಕೊಂಡು– ಕೆಲವರು ಕೊಲ್ಲಿ ಬಿಟ್ಟು ಊರಿಗೆ ವಾಪಾಸಾಗಿದ್ದಾರೆ. ಮೀನುವ್ಯಾಪಾರದಲ್ಲಿ ಸ್ವಾರ್ಥ–ಸ್ಪರ್ಧೆ ಕಾರಣವಾಗಿ ಹಿಂದೆ ಬ್ಯಾರಿ ಹಾಗೂ ಮೊಗವೀರ ಸಮುದಾಯದ ನಡುವೆ ಘರ್ಷಣೆಗಳು ನಡೆದಿವೆ. ಅಂದರೆ ಬಾಬ್ರಿ ಮಸೀದಿ ವಿನಾಶದ ಬಳಿಕದ ಇತ್ತೀಚಿನ ವರ್ಷಗಳಲ್ಲಿ ಈ ಎರಡು ಸಮುದಾಯಗಳ ಮಧ್ಯೆ ಮತೀಯ ಸಂಘರ್ಷ ಕಡಿಮೆಯಾಗಿದೆ. ಸುರತ್ಕಲ್ ಪ್ರದೇಶದಲ್ಲಿ ಇತರ ಕೆಳಜಾತಿಯ ಮುಖ್ಯವಾಗಿ ಬಿಲ್ಲವ, ಕುಲಾಲ, ಪ.ಜಾತಿ ಇವರನ್ನು ಮುಂದಿಟ್ಟು ಆರೆಸ್ಸೆಸ್ ಪದೇ ಪದೇ ಘರ್ಷಣೆಗಳನ್ನು ಮಾಡಿಸುತ್ತಿದೆ. ಸದಾ ಮತೀಯ ಸಂಶಯವನ್ನು ಜನರ ಮನಸ್ಸಿನಲ್ಲಿರುವಂತೆ ಮಾಡಲಾಗಿದೆ. ಇತ್ತೀಚೆಗೆ ದೀಪಕ್‌ರಾವ್ ಕೊಲೆಗೆ ಪ್ರತೀಕಾರವೆಂದು ಬಿಂಬಿಸಿ ಬಶೀರ್ ಎಂಬವರ ಕೊಲೆ ನಡೆದಿದೆ. ಹಿಂದೂ ಮತೀಯವಾದಿ ಗೂಂಡಾ ಪಡೆಗಳು ನವಮಂಗಳೂರು ಪ್ರದೇಶದಲ್ಲೂ ಕೈಗಾರಿಕಾ ವಲಯಗಳಲ್ಲೂ ತಮ್ಮದೇ ಆದ ಸಾಮ್ರಾಜ್ಯ ಮಾಡಿಕೊಂಡು ಅನೇಕರನ್ನು ಉದ್ಯೋಗ ಅವಕಾಶಗಳಿಂದ ವಂಚಿಸುತ್ತಿದ್ದಾರೆ.

ಮಂಗಳೂರು ನಗರದ್ದೇ ಜನವಸತಿ ವಾರ್ಡುಗಳಾದ ಪಂಜಿಮೊಗರು, ಕಾವೂರು, ವಾಮಂಜೂರು ಇತ್ಯಾದಿ ಪ್ರದೇಶಗಳಲ್ಲೂ ವಸತಿ ನಿವೇಶನ ರಹಿತರ ಸಂಖ್ಯೆ ಹೇರಳವಾಗಿದೆ. ಸುರತ್ಕಲ್ ಸಮೀಪದ ಇಡ್ಯಾ ಎಂಬಲ್ಲಿ ನಗರಪಾಲಿಕೆ ಕಾದಿರಿಸಿದ 7 ಎಕ್ರೆ ನಿವೇಶನವಿದ್ದರೂ ಆ ಜಮೀನಿನ ಬಗ್ಗೆ ಸುರತ್ಕಲ್ ಶಾಸಕ ಮೊಯಿದಿನ್ ಬಾವಾ ಏನೂ ಮಾಡಿಲ್ಲ. ಆದರೆ ಸುರತ್ಕಲ್‌ನ ನವೀನ ಮಾರುಕಟ್ಟೆ ನಿರ್ಮಾಣ ಕಾರಣ, ತಾತ್ಕಾಲಿಕ ಮಾರುಕಟ್ಟೆ ಮಂಗಳೂರು ನಗರಪಾಲಿಕೆ ಕಟ್ಟಿಸಿಕೊಟ್ಟಾಗ, ಆ ಶಾಸಕರ ಹಿಂಬಾಲಕರು ತಮಗೆ ಒದಗಿಸಲಾದ ಕೊಠಡಿಗಳನ್ನು ಬೇಕಾದಂತೆ ಒಡೆದು ವಿಸ್ತರಿಸಿದ್ದಾರೆ. ಡಿವೈಎಫ್‌ಐ 8 ದಿನ ಈ ಬಗ್ಗೆ ಅಹೋರಾತ್ರಿ ಧರಣಿ ನಡೆಸಿದ ಮೇಲೆ ಈ ಹೆಚ್ಚುವರಿ ಕಾಮಗಾರಿಗಳನ್ನು ಪಾಲಿಕೆಯವರು ಒಡೆದು ಹಾಕಿದ್ದಾರೆ. ಇದರ ಜೊತೆ ಚುನಾವಣೆ ಸಮೀಪಿಸುತ್ತಿರುವಾಗ ಈಗ ತಿಂಗಳ ಹಿಂದೆ ಗ್ರಾಮೀಣ ಮಹಿಳೆಯರಿಗೆ ಸೀರೆ ಹಂಚಿ ಶಾಸಕರು ನಗೆಪಾಟಲಾಗಿದ್ದಾರೆ. ವಿಶೇಷ ಆರ್ಥಿಕ ವಲಯದ ಮಾಲಿನ್ಯದ ಪ್ರಶ್ನೆಯಲ್ಲಿ ಈ ಶಾಸಕರು ಏನೂ ಕೆಲಸ ಮಾಡಿಲ್ಲ.

ಗುರುಪುರ ವಾಮಂಜೂರು ಮತ್ತು ಗುರುಪುರ ನಡುವೆ ಗುರುಪುರ ಹೊಳೆ ಮೇಲೆ ಇರುವ ಸೇತುವೆ ನೂರು ವರ್ಷಕ್ಕೂ ಹಳೆಯದಾಗಿದೆ. ಇದನ್ನು ಬದಲಾಯಿಸಬೇಕೆಂದು ಜನ ಒತ್ತಾಯಿಸುತ್ತಾ ಬಂದಿದ್ದರೂ ಶಾಸಕರಿಂದ ಈ ಬಗ್ಗೆ ಯಾವ ಪ್ರಸ್ತಾಪವೂ ಇರುವುದಿಲ್ಲ. ಗುರುಪುರದಿಂದ ಕುಪ್ಪೆಪದವಿನವರೆಗಿನ ಪ್ರದೇಶದಲ್ಲಿ ಹಿಂದೆ ಭತ್ತದ ಬೇಸಾಯವೂ, ಅಡಕೆ ತೆಂಗು ಕೃಷಿಯೂ ವ್ಯಾಪಕವಾಗಿತ್ತು. ಬಡ ಮಹಿಳೆಯರು ಬೀಡಿ ಕಟ್ಟುತ್ತಿದ್ದರು. ಈಗ ಬೀಡಿ ಉದ್ಯಮವೂ ಕ್ಷೀಣಿಸುತ್ತಿದ್ದು, ವಾರಕ್ಕೆ ಎರಡು, ಮೂರು ದಿನಗಳ ಕೆಲಸ ಸಿಗುತ್ತಿದೆ. ಸರಕಾರೀ ಭೂಮಿ 40–50 ವರ್ಷ ಸಾಗುವಳಿ ಮಾಡಿದವರಿಗೆ ಹಕ್ಕು ಪತ್ರ ಸಿಕ್ಕಿಲ್ಲ. ನಿವೇಶನಕ್ಕಾಗಿ ಪ್ರಾಂತ ರೈತ ಸಂಘದ ಮೂಲಕ ಬಡ ಕೃಷಿಕೂಲಿಕಾರರು ಕಳೆದ 5 ವರ್ಷಗಳಿಂದ ಹೋರಾಟ ಮಾಡಿದ್ದಾರೆ. ಇದೀಗ ಸರಕಾರೀ ಜಾಗದಲ್ಲಿ ಮನೆ ಮಾಡಿದ ಒಂದಿಷ್ಟು ಮಂದಿಗೆ 94ಸಿಯಂತೆ ಭೂಮಿ ಮಂಜೂರಾಗುತ್ತಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ 2 ವರ್ಷಗಳಿಗೂ ಹಿಂದೆ ಈ ಭಾಗದ ಕೆಲವು ಗ್ರಾಮ ಪಂಚಾಯತ್‌ಗಳು ಉದ್ಯೋಗ ಕೊಡಿಸುತ್ತಿದ್ದವು. ಈಗೆರಡು ವರ್ಷಗಳಿಂದ ಉದ್ಯೋಗ ನೀಡಿಕೆ ಕಡಿಮೆಯಾಗಿದೆ. ಈ ವರ್ಷ ತೆಂಗಿಗೆ ಉತ್ತಮ ಧಾರಣೆ ಇದ್ದರೂ ಸಾಕಷ್ಟು ಫಸಲು ಆಗಿರುವುದಿಲ್ಲ. ಭತ್ತ ಬೆಳೆಯುವ ಭೂಮಿ ಪ್ರಮಾಣ ರೈತನಲ್ಲಿ ಕಡಿಮೆ ಇದ್ದು, ಭತ್ತ ಬೆಳೆಯುವುದು ನಷ್ಟದಾಯಕವಾಗುತ್ತಿದೆ. ಹಾಗಾಗಿ ರೈತರು ಭೂಮಿಯನ್ನು ಪಡಿಲು(ಖಾಲಿ) ಬಿಡುತ್ತಿದ್ದಾರೆ. ಆ ಭೂಮಿಗಾಗಿ ಭೂ ಮಾಫಿಯಾಗಳು ಸಿದ್ಧವಾಗಿ ಕಾಯುತ್ತಿವೆ. ಆ ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಸಮಸ್ಯೆ ಬೇಸಗೆಯಲ್ಲಿ ಬಹಳ. ಈ ಬಗ್ಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಬೇರೆ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಿದಂತೆ ಇಲ್ಲಿಯೂ ಅನುಷ್ಠಾನಗೊಳಿಸಬಹುದಿತ್ತು. ತಮ್ಮ ಕ್ಷೇತ್ರದ ನಗರ ಭಾಗಕ್ಕಷ್ಟೇ ಲಕ್ಷ್ಯಕೊಟ್ಟಿರುವ ಶಾಸಕರು ಗ್ರಾಮಾಂತರ ಭಾಗದ ತನ್ನ ಪ್ರಶ್ನೆ ಬಗ್ಗೆ ಕನಿಷ್ಟ ಕಾಳಜಿಯನ್ನೂ ಹೊಂದಿಲ್ಲ.

ಅರ್ಧಾಂಶ ನಗರ, ಇನ್ನು ಅರ್ಧಾಂಶ ಗ್ರಾಮಾಂತರವಾಗಿರುವ ಮಂಗಳೂರು ಉತ್ತರ ಅಸೆಂಬ್ಲಿ ಪ್ರದೇಶವನ್ನು ಶಾಸಕರಾಗಿ ಪ್ರತಿನಿಧಿಸುವವರು ಈ ಪ್ರದೇಶಗಳ ವಿಶಿಷ್ಟ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ವಿಶೇಷ ತಿಳುವಳಿಕೆಯುಳ್ಳವರಾಗಿರಬೇಕಾದ ಅಗತ್ಯ ಇದೆ. ●



40ಸಾವಿರ ಕೋಟಿ ರೂ. ನುಂಗಿ ಪರಾರಿಯಾದ 36 ಹಗರಣಕೋರರು

36 ಹಗರಣಕೋರರು ಸುಮಾರು 40,000 ಕೋಟಿ ರೂ. ಸಾರ್ವಜನಿಕ ಹಣವನ್ನು ನುಂಗಿ ದೇಶ ಬಿಟ್ಟು ಪರಾರಿಯಾಗಿದ್ದಾರೆ. ಇದು ವಿದೇಶಾಂಗ ವ್ಯವಹಾರಗಳ ರಾಜ್ಯ ಮಂತ್ರಿಗಳು ಮಾರ್ಚ್ 14ರಂದು ಸಂಸತ್ತಿನಲ್ಲಿ ' ಲಿಖಿತ 'ಉತ್ತರದಲ್ಲಿ ಕೊಟ್ಟಿರುವ ಮಾಹಿತಿ. ಅವರು ಈ ವ್ಯಕ್ತಿಗಳ ಹೆಸರುಗಳನ್ನೂ ಕೊಟ್ಟಿದ್ದಾರೆ. ನಿಜ, ಇವರೆಲ್ಲರೂ ಅಚ್ಛೇದಿನ್‌ಗಳಲ್ಲಿ ಪರಾರಿಯಾದವರಲ್ಲ, ಆದ್ದರಿಂದ ಪ್ರಸಕ್ತ ಸ್ವಯಂಘೋಷಿತ ಅಚ್ಛೇದಿನ್ 'ಚೌಕೀದಾರ'ರನ್ನು ಇದಕ್ಕೆ ಹೊಣೆ ಮಾಡುವಂತಿಲ್ಲ. ಆದರೆ ಈ 40 ಲಕ್ಷ ಕೋಟಿಯಲ್ಲಿ ಅರ್ಧಕ್ಕೂ ಹೆಚ್ಚು ಕಳೆದ ಮೂರೂ ಮುಕ್ಕಾಲು ವರ್ಷಗಳಲ್ಲೇ ಲೂಟಿಯಾಗಿದೆ ಎಂಬುದನ್ನೂ ನಿರ್ಲಕ್ಷಿಸುವಂತಿಲ್ಲ. (ನ್ಯೂಸ್‌ಕ್ಲಿಕ್, ಮಾರ್ಚ್ 16)

ಅದೇನೇ ಇರಲಿ, ಇವರೆಲ್ಲರೂ ಬಿಲಿಯಾಧಿಪತಿಗಳು, ಇವರಲ್ಲಿ 12 ಮಂದಿಯನ್ನು ಇ.ಡಿ.(ಜಾರಿ ನಿರ್ದೇಶನಾಲಯ) ಹುಡುಕುತ್ತಿದ್ದರೆ, 31 ಮಂದಿಯನ್ನು ಸಿಬಿಐ ಹುಡುಕುತ್ತಿದೆ. ಅಂದರೆ ಕೆಲವರು ಇಬ್ಬರಿಗೂ ಬೇಕಾಗಿದ್ದಾರೆ. ಆದರೆ ಇವರು ಸಿಂಗಾಪುರದಿಂದ ಸ್ಯೆಂಟ್ ಕಿಟ್ಸ್ ವರೆಗೆ ಜಗತ್ತೆಲ್ಲಾ ಹರಡಿಕೊಂಡಿದ್ದಾರೆ. ಆದ್ದರಿಂದ ಇ.ಡಿ.. ಅಥವ ಸಿಬಿಐ ಕೈಗೆ ಸಿಗುವ, 40,000 ಕೋಟಿ ರೂ.ಗಳ ವಸೂಲಾಗುವ ಸಂಭವ ಬಹಳ ಕಡಿಮೆ ಎನ್ನಲಾಗುತ್ತಿದೆ. ವಿಜಯ ಮಲ್ಯ ಪ್ರಕರಣವೇ ಇದಕ್ಕೆ ಸಾಕ್ಷಿ.

ಲೋಕಸಭೆಯಲ್ಲಿ ಪ್ರಕಟಿಸಿದ ಕೆಲವು ಹೆಸರುಗಳು ಮತ್ತು ನುಂಗಿದ ಮೊತ್ತಗಳು ಹೀಗಿವೆ:

ವಿಜಯ ಮಲ್ಯ	ರೂ.9000 ಕೋಟಿ
ನೀರವ್ ಮೋದಿ ಇತ್ಯಾದಿ	13700 ಕೋಟಿ
ಜತಿನ್ ಮೆಹ್ತ	7000 ಕೋಟಿ
ಲಲಿತ್ ಮೋದಿ	125 ಕೋಟಿ
ಸಂದೇಸ್ರಾರ ಸೋದರರು	5000 ಕೋಟಿ
ಜೊಬನ್‌ಪುತ್ರ	770 ಕೋಟಿ
ರಿತೇಶ್ ಜೈನ್	1500 ಕೋಟಿ

ಸರಕಾರ ಈಗ ಪರಾರಿಯಾದ ಆರ್ಥಿಕ ಅಪರಾಧಿಗಳ ಮಸೂದೆ, 2018 ಸಿದ್ಧಪಡಿಸಿದೆಯಂತೆ- ಇಂತಹವರು ಭಾರತೀಯ ಕಾನೂನುಗಳಿಮದ ತಪ್ಪಿಸಿಕೊಳ್ಳದಂತೆ ಮಾಡಲು ಇದರಿಮದ ಸಾಧ್ಯವಾಗುತ್ತದೆ ಎನ್ನಲಾಗಿದೆ. ಆದರೆ ನಿಜವಾದ 'ಚೌಕೀದಾರಿಕೆ' ಮಾಡಿದ್ದರೆ ಈಗಿರುವ ಕಾನೂನು ಗಳೇ ಸಾಕಿತ್ತು ಇವರನ್ನು ಹಿಡಿದು ಹಾಕಲು ಎನ್ನುತ್ತಾರೆ ಪರಿಣಿತರು. ಇದಲ್ಲದೆ ಉದ್ದೇಶಪೂರ್ವಕವಾಗಿ ಸಾಲ ಬಾಕಿ ಮಾಡಿಕೊಂಡಿವೆ ಎಂದು ಪಟ್ಟಿ ಮಾಡಿರುವ ಕಂಪನಿಗಳಿಗೆ ಸಂಬಂಧಪಟ್ಟ 91 ವ್ಯಕ್ತಿಗಳ ಪಟ್ಟಿಯನ್ನೂ ಮಾಡಲಾಗಿದೆಯಂತೆ.

ಏನೇ ಆಗಲಿ, ಈ ಹೊಸ ಕಾನೂನು ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂತಾಗಿದೆ ಎಂದು ಇನ್ನುಕೆಲವರು ಟಿಪ್ಪಣಿ ಮಾಡಿದ್ದಾರೆ. ಭ್ರಷ್ಟಾಚಾರ-ವಿರೋಧಿ 56 ಅಂಗುಲ ಎದೆಯುಬ್ಬಿಸಿ ಜನಗಳನ್ನು ಆಕರ್ಷಿಸಿದವರ ವಿಶ್ವಾಸಾರ್ಹತೆ ಈ ನಾಲ್ಕು ವರ್ಷಗಳಲ್ಲಿ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಹೇಗಾದರೂ ಮಾಡಿ ಜನಗಳ ವಿಶ್ವಾಸವನ್ನು 2019ರ ಮೊದಲು ಮತ್ತೆ ಗಳಿಸಿಕೊಳ್ಳಬೇಕಲ್ಲವೇ, ಅದ-ಕ್ಕೇ ಇವೆಲ್ಲ ದಿಡ್ಡಿ ಬಾಗಲು ಹಾಕುವ ಕಸರತ್ತುಗಳು ಎಂಬುದು ಅವರ ವಿಶ್ಲೇಷಣೆ.



ರಕ್ಷಣಾ ಕ್ಷೇತ್ರದಲ್ಲಿ 'ಮೇಕ್ ಇನ್ ಇಂಡಿಯಾ' ಕೇವಲ ಲೊಳಲೊಟ್ಟೆ!

ಹೌದು, ಸಂಸದೀಯ ಸಮಿತಿಯ ಮುಂದೆ ಉಪಸೇನಾಧ್ಯಕ್ಷರ ಮಂಡನೆಯಿಂದ ಇದೇ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಈ ಫೆಬ್ರುವರಿಯಲ್ಲಿ ಮಂಡಿಸಿರುವ ರಕ್ಷಣಾ ಬಜೆಟ್ ಸೇನೆಯ ಆಧುನೀಕರಣದ ನಿರೀಕ್ಷೆಯನ್ನು ನುಚ್ಚುನೂರು ಮಾಡಿದೆ, ಸರಕಾರದ 'ಮೇಕ್ ಇನ್ ಇಂಡಿಯ' ನೆಲ ಬಿಟ್ಟು ಮೇಲೇಳಲಿಕ್ಕಿಲ್ಲ ಎಂದು ಅವರು ರಕ್ಷಣಾ ಇಲಾಖೆಯ ಸಂಸದೀಯ ಸಮಿತಿಯ ಮುಂದೆ ಹೇಳಿರುವುದಾಗಿ ವರದಿಯಾಗಿದೆ.

ರಕ್ಷಣಾ ಬಜೆಟ್ ನಲ್ಲಿ ಅಲ್ಪ ಹೆಚ್ಚಳ ಹಣದುಬ್ಬರವನ್ನೂ ಸರಿ ಹೊಂದಿಸಲಾರದು ಎಂದು ಅವರು ಹೇಳಿದ್ದಾರಂತೆ. ಯುರಿ ದಾಳಿ, ಭಾರೀ ಪ್ರಚಾರಕ್ಕೆ ಬಳಸಿಕೊಂಡ ಮಿಂಚಿನ ಪ್ರಹಾರ(ಸರ್ಜಿಕಲ್ ಸ್ಟ್ರೈಕ್) ಮತ್ತು ಮತ್ತು ದೋಕ್ಲಂ ವಿವಾದದ ಸಂದರ್ಭದಲ್ಲಿ ಸೇನೆ ಮಾಡಿದ ತುರ್ತು ಖರೀದಿಗೆ ತೆರಲೂ ಸಾಕಷ್ಟು ಹಣ ಇಲ್ಲವಂತೆ. ಸೈನಿಕರನ್ನು ತಮ್ಮ 'ದೇಶಭಕ್ತಿ'ಯ ಬಂಡವಾಳವಾಗಿಸಿಕೊಂಡ ಮಂದಿಯ ' 'ದೇಶಭಕ್ತಿ'ಯ ನಿಜಸ್ವರೂಪವನ್ನು ಬಹುಶಃ ಇದು ಬಿಚ್ಚಿಡುತ್ತದೆ.

ಏರ್ ಇಂಡಿಯಾಕ್ಕೆ ಸರಕಾರದಿಂದಲೇ 325 ಕೋಟಿ ರೂ. ಬಾಕಿ!

ವಿವಿಐಪಿಗಳ ವಿದೇಶ ಪ್ರಯಾಣಗಳಿಗೆ ಏರ್ ಇಂಡಿಯಾ ವಿಮಾಳ ಬಳಕೆಗೆ ಭಾರತ ಸರಕಾರದ ವಿವಿಧ ಇಲಾಖೆಗಳು ತೆರಬೇಕಾದ ಬಾಕಿ ಜನವರಿ 31 ರವೇಳೆಗೆ 325.81 ಕೋಟಿ ರೂ. ಎಂದು ನಿವೃತ್ತ ವಿಮಾನ ಪಡೆ ಅಧಿಕಾರಿ ಕೊಮೊಡೊರ್ ಲೋಕೇಶ್ ಬತ್ರ ಅವರ ಮಾಹಿತಿ ಹಕು ಕಾಯ್ದೆ ಅಡಿಯ ಪ್ರಶ್ನೆಗೆ ದೊರೆತ ಉತ್ತರ ಹೇಳುತ್ತದೆ. ಇದರಲ್ಲಿ 84.01 ಕೊಟಿ ರೂ. ಹಿಂದಿನ ವರ್ಷದ ಬಾಕಿಯಾದರೆ ಉಳಿದದ್ದು ಈ ವರ್ಷದ ಬಾಕಿ.

ಏರ್ ಇಂಡಿಯಾವನ್ನು ಈ ಸರಕಾರ ಖಾಸಗೀಕರಿಸುತ್ತಿರುವ ಹಿನ್ನೆಲೆಯಲ್ಲಿ ಬತ್ರ ಅವರು ಈ ಪ್ರಶ್ನೆ ಕೇಳಿದ್ದರು. ಏರ್ ಇಂಡಿಯಾ ನಷ್ಟ ಮಾಡುತ್ತಿದೆ ಎಂಬ ಕಾರಣಕ್ಕೆ ಅದನ್ನು ಖಾಸಗೀಕರಿಸಲಾಗುತ್ತಿದೆ ತಾನೇ?

ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ವಿದೇಶ ಪ್ರಯಾಣಗಳಿಗೆ ಏರ್ ಇಂಡಿಯಾ ವಿಶೇಷ ವಿಮಾನ ಸೇವೆಗಳನ್ನು ಒದಗಿಸುತ್ತದೆ. ವಿದೇಶಾಂಗ ಇಲಾಖೆಯಿಂದ ಬರಬೇಕಾದ ಬಾಕಿ ರೂ. 178.55 ಕೋಟಿ , ಸಂಪುಟ ಸೆಕ್ರೆಟಾರಿಯೆಟ್ ಮತ್ತು ಪ್ರಧಾನ ಮಂತ್ರಿಗಳ ಕಚೇರಿಯಿಂದ ರೂ. 128.84 ಕೋಟಿ ಮತ್ತು ರಕ್ಷಣಾ ಇಲಾಖೆಯಿಂದ 18.42 ಕೋಟಿ

ಕಳೆದ ವರ್ಷದ ಬಾಕಿ ರೂ. 451.71 ಕೊಟಿ ರೂ. ಇತ್ತು. ಇವರ್ಷದ ಬಿಲ್ ರೂ. 553.01 ಕೋಟಿ. ಒಟ್ಟು 1004.72 ಕೋಟಿ ರೂ. ಇದರಲ್ಲಿ 678.91 ಕೋಟಿ ರೂ. ತೆರಲಾಗಿದೆ.

ಉಪಚುನಾವಣೆಗಳ ಸೋಲುಗಳಿಂದ ಮಾಜಿ ಮಿತ್ರರಿಂದಲೇ ಅವಿಶ್ವಾಸ ಠರಾವಿನ ವರೆಗೆ..

ತ್ರಿಪುರಾದಲ್ಲಿ ಅಚ್ಛೇ ದಿನ್‌ಗಳು ಲೆನಿನ್ ಪ್ರತಿಮೆಯನ್ನು ಉರುಳಿಸುವುದರೊಂದಿಗೆ ಇನ್ನೇನು ಆರಂಭವಾಗುತ್ತಿದೆ ಎನ್ನುವಷ್ಟರಲ್ಲೇ ಇದೇನಾಗುತ್ತಿದೆ? ಮುಂಬಯಿಯಲ್ಲಿ ಕೆಂಬಾವುಟಗಳ ಸವಾಲು ಬಂತು. ಇನ್ನೆರಡು ದಿನಗಳಲ್ಲೇ ಅಚ್ಛೇದಿನ್‌ಗಳ ಹೊಸ ಅಧ್ಯಾಯವನ್ನು ತೆರೆದ ಉತ್ತರಪ್ರದೇಶದ ಮುಖ್ಯಮಂತ್ರಿಗಳ ಗಟ್ಟಿ ಕ್ಷೇತ್ರವೇ ಕಾಲಡಿಯಿಂದ ಜಾರಿ ಹೋಯಿತು. ಜತೆಗೆ ಉಪಮುಖ್ಯ ಮಂತ್ರಿಗಳದ್ದೂ, ಮತ್ತು ಹಿಂಬಾಗಿಲಿಂದ ಪಟ್ಟಕ್ಕೆರಿದ ಪಕ್ಕದ ಬಿಹಾರಿನಲ್ಲೂ ಅದೇ ಕತೆ.


ಅದರಿಂದ ಸುಧಾರಿಸಿಕೊಳ್ಳುತ್ತಿರುವಂತೆಯೇ ಸಂಸತ್ತಿನಲ್ಲಿ ಮೊನ್ನೆ-ಮೊನ್ನೆಯ ವರೆಗೆ ತಮ್ಮದೇ ಸರಕಾರದಲ್ಲಿ ಇದ್ದವರಿಂದ 'ಅವಿಶ್ವಾಸ ಠರಾವು'!

ಉತ್ತರಪ್ರದೇಶದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ತಮ್ಮ ಹೊಸ ಹುದ್ದೆಗಳನ್ನು ಬಿಟ್ಟುಕೊಡಬೇಕಾಗಿ ಬಂದ ಮೇಲೆ ಆ ಕ್ಷೇತ್ರಗಳಿಗೆ ನಡೆದ ಚುನಾವಣೆಗಳು ಅಚ್ಛೇ ದಿನ್‌ವಾಲಾಗಳನ್ನು ತಬ್ಬಿಬ್ಬುಗೊಳಿಸಿರುವುದಂತೂ ನಿಜ.

ಮುಖ್ಯಮಂತ್ರಿಗಳ ದಶಕಗಳ ಕೋಟೆ ಗೋರಖ್‌ಪುರದಲ್ಲಿ ಅಚ್ಛೇ ದಿನ್ ಅಭ್ಯರ್ಥಿ 21,961 ಮತಗಳಿಂದ ಸೋತಿದ್ದಾರೆ. ಉಪಮುಖ್ಯಮಂತ್ರಿಗಳ ಫುಲ್‌ಪುರದಲ್ಲಂತೂ ಅಚ್ಛೇ ದಿನ್ ಅಭ್ಯರ್ಥಿ 59,613 ಮತಗಳಿಂದ ಸೋತರು.

ಇದು ಕೇವಲ ಇಲ್ಲಿಯ ಎರಡು ಪ್ರತಿಪಕ್ಷಗಳು ಕೈಜೋಡಿಸಿದ್ದರ ಪರಿಣಾಮವೇ? ಗೋರಖ್‌ಪುರದಲ್ಲಿ ಅಲ್ಲಿ ಮತದಾನ ನಡೆದದ್ದೇ 47% ದಷ್ಟು, ಯೋಗಿ ಆದಿತ್ಯನಾಥರು ಗೆದ್ದ ಲೋಕಸಭಾ ಚುನಾವಣೆಗೆ ಹೋಲಿಸಿದರೆ 8% ಕಡಿಮೆ.ಫುಲ್‌ಪುರದಲ್ಲಿಯೂ ಮತದಾನದ ಪ್ರಮಾಣ 50%ದಿಂದ 37%ಕ್ಕೆ ಇಳಿದಿತ್ತು . ಅದೂ ನಗರಗಳಲ್ಲಿ ಮತದಾನ ಗಣನೀಯವಾಗಿ ಇಳಿಯಿತು ಎನ್ನಲಾಗಿದೆ.

ಇವು ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಅಚ್ಛೇದಿನ್‌ವಾಲಾಗಳತ್ತ ಆಕರ್ಷಿತರಾದವರು ಈ ಬಾರಿ ಮತಗಟ್ಟೆಗಳತ್ತ ಹೋಗಲಿಲ್ಲವೇ? ಅಂದರೆ ಒಂದು ವರ್ಷ ಕಳೆಯುವಷ್ಟರಲ್ಲೇ ಭ್ರಮನಿರಸನ ಆರಂಭವಾಗಿದೆಯೇ?



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್

ಬಿಹಾರದ ಅರಾರಿಯಾ ಲೋಕಸಭಾ ಕ್ಷೇತ್ರದಲ್ಲಿ ಆರ್‌ಜೆಡಿ ಅಭ್ಯರ್ಥಿ 61,988 ಮತಗಳಿಂದ ಗೆದ್ದಿದ್ದಾರೆ. ವಿಧಾನ ಸಭಾ ಚುನಾವಣೆಗಳಲ್ಲಿ ಜಹಾನಾಬಾದ್‌ನಲ್ಲಿ ಆರ್‌ಜೆಡಿ ಅಭ್ಯರ್ಥಿ ಕಳೆದ ಬಾರಿ ತಮ್ಮೊಂದಿಗಿದ್ದ ಜೆಡಿ(ಯು)ನ ಅಭ್ಯರ್ಥಿಯನ್ನು 35036 ಮತಗಳಿಂದ ಸೋಲಿಸಿದರೆ, ಭಭುವಾದಲ್ಲಿ ಬಿಜೆಪಿ ಅಭ್ಯರ್ಥಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದ್ದು 15,000 ಮತಗಳಿಂದ .ಇಲ್ಲಿ ಎಲ್ಲ ಪಕ್ಷಗಳು ತಂತಮ್ಮ ಸ್ಥಾನಗಳನ್ನು ಉಳಿಸಿಕೊಂಡಿದ್ದರೂ, ಜೆಡಿ(ಯು) ಅಚ್ಛೇದಿನ್ ಕ್ಯಾಂಪಿಗೆ ಸೇರಿದ್ದರಿಂದ ತೀವ್ರವಾಗಿ ಬದಲಾದ ಸನ್ನಿವೇಶದಲ್ಲಿ ಇದನ್ನು ನೋಡಬೇಕಾಗುತ್ತದೆ. ಜನಗಳು ಜೆಡಿ(ಯು) ಮುಖ್ಯಮಂತ್ರಿಗಳ ಅಂತರಾತ್ಮನ ದನಿ ಕೂಡ ಹುಸಿ ಎಂದು ಭಾವಿಸಲಾರಂಭಿಸಿದ್ದಾರೆಯೇ? ಇದು ಕೆಲವು ವಿಶ್ಲೇಷಕರು ಕೇಳುವ ಪ್ರಶ್ನೆ.

ಇದಾದ ಇನ್ನೆರಡು ದಿನಗಳಲ್ಲೇ ಅಚ್ಛೇದಿನ್ ಹಡಗಿನಲ್ಲಿ ಸಹಪ್ರಯಾಣಿಕರಾಗಿದ್ದ ಆಂಧ್ರದ ತೆಲುಗುದೇಶಂ ಆ ಹಡಗನ್ನು ಬಿಟ್ಟು ಬಂದಿದ್ದಾರೆ. ಅಷ್ಟೇ ಅಲ್ಲ, ತಮ್ಮ ಹಳೆಯ ಮಿತ್ರರ ವಿರುದ್ಧ ಅವಿಶ್ವಾಸ ಠರಾವನ್ನು ಮಂಡಿಸಿದ್ದಾರೆ. ಈ ಠರಾವು ಮಂಡಿಸಲು ಅವರಿಗೆ 50 ಸದಸ್ಯರ ಅವಶ್ಯಕತೆಯಿತ್ತು, ಅವರ ಬಲ ಕೇವಲ 16. ಆದರೆ 119 ಸದಸ್ಯರ ಬೆಂಬಲ ಪಡೆಯುವಲ್ಲಿ ತೆಲುಗುದೇಶಂಗೆ ಏನೂ ತೊಂದರೆಯಾಗಿಲ್ಲ.


ನಿಜ, ಇದರಿಂದ ಅಚ್ಛೇ ದಿನ್ ಹಡಗಿಗೆ ಸದ್ಯಕ್ಕೇನೂ ತೊಂದರೆಯಾಗಲಿಕ್ಕಿಲ್ಲ. ಆದರೆ 'ಪ್ರತಿಪಕ್ಷ-ಮುಕ್ತ ಭಾರತ'ದ ಅದರ ಕನಸು ಖಂಡಿತಾ ಈಡೇರುವುದಿಲ್ಲ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗಲಾರಂಭಿಸಿದೆ. 22 ರಾಜ್ಯಗಳಲ್ಲಿ ನಮ್ಮ ಅಥವ ನಮ್ಮ ಮಿತ್ರ ಸರಕಾರಗಳಿವೆ ಎನ್ನುತ್ತಿರುವಾಗಲೇ, ಅವರ ಹಳೆಯ ಬಹುದಿನಗಳ ಮಿತ್ರರು ದೂರವಾಗುತ್ತಿರುವುದು – ಮೊದಲು ಶಿವಸೇನೆ, ನಂತರ ತೆಲುಗು ದೇಶಂ, ಬಹುಶಃ ಮುಂದೆ ಅಕಾಲಿದಳವೂ? ಇವೆಲ್ಲ ಅಚ್ಛೇದಿನ್‌ಗಳು ಕೊನೆಯಾಗುತ್ತಿರುವುದರ ಸೂಚನೆಯೇ? ಇಲ್ಲ ಎನ್ನುತ್ತಾರೆ ಬಿಜೆಪಿ ಮುಖಂಡರು. ತೆಲುಗುದೇಶಂ ಬಿಟ್ಟು ಹೋದದ್ದು ಒಳ್ಳೆಯದೇ ಆಯಿತು, ಅಲ್ಲಿ ನಾವು ಇನ್ನೊಂದು ತ್ರಿಪುರಾ ಸಾಧಿಸುತ್ತೇವೆ ಎನ್ನುತ್ತಿದ್ದಾರೆ.

ಆದರೆ ಲೋಕಸಭೆಯಲ್ಲಿ ರಫೇಲ್ ಮತ್ತು ನೀರವ್ ಮೋದಿ ಪ್ರಕರಣಗಳ ಹಿನ್ನೆಲೆಯಲ್ಲಿ 'ಅವ್ಯವಸ್ಥೆ' ಇದ್ದರೂ ಬಜೆಟನ್ನು ಯಾವುದೇ ಚರ್ಚೆಯಿಲ್ಲದೆ ಪಾಸು ಮಾಡಿಸಿಕೊಂಡ ಸರಕಾರ, ಅವಿಶ್ವಾಸ ಠರಾವನ್ನು ನೂರಕ್ಕೂ ಹೆಚ್ಚು ಸದಸ್ಯರು ಬೆಂಬಲಿಸಿದರೂ 'ಅವ್ಯವಸ್ಥೆ'ಯ ನೆಪ ಹೂಡಿ ಅಧಿವೇಶನವನ್ನೇ ಮುಂದೂಡಿದ್ದು ಅಚ್ಛೇದಿನ್‌ವಾಲಾಗಳ ಆತ್ಮವಿಶ್ವಾಸವನ್ನು ತೋರಿಸುತ್ತದೆಯೆ ಅಥವ ಭೀತಿಯನ್ನೇ?

ಒಂದೊಮ್ಮೆ ಭಾರತದ ರಾಜಕಾರಣದಲ್ಲಿ 'ಅಸ್ಪೃಶ್ಯ'ವಾಗಿದ್ದ ತಾವು ಈಗ ಎಲ್ಲರಿಗೂ ಬೇಕು ಎಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಹಿಂದುತ್ವ ಮಂದಿ ಈಗ ಮತ್ತೆ ಏಕಾಂಗಿತನದತ್ತ ಸರಿಯುತ್ತಿರುವಂತೆ ಕಾಣುತ್ತದೆ, ಅವರ ಬಾಲ ಹಿಡಿದ ಪ್ರಾದೇಶಿಕ ಪಕ್ಷಗಳಿಗೆ ಅದು ತಮ್ಮನ್ನು ನುಂಗಿ ಹಾಕುತ್ತದೆ ಎಂದು ನಿಜವಾಗಿಯೂ ತಿಳಿಯಲಾರಂಭಿಸಿದೆ ಎನ್ನುತ್ತಾರೆ ಒಬ್ಬ ಹಿರಿಯ ವಿಶ್ಲೇಷಕರು.


ಈ ನಡುವೆ ರೈತ ಚಳುವಳಿಹೆಚ್ಚೆಚ್ಚು ರಾಜ್ಯಗಳಿಗೆ ಹರಡುತ್ತಿರುವುದು, ಜತೆಗೆ ಕಾರ್ಮಿಕ ಚಳುವಳಿಯಲ್ಲಿ ಹೆಚ್ಚುತ್ತಿರುವ ಐಕ್ಯತೆ ಸನ್ನಿವೇಶಕ್ಕೆ ಹೊಸ ತಿರುವು ನೀಡಬಲ್ಲವೇ?

ಲೂಟ್ ಇಂಡಿಯ



ವ್ಯಂಗ್ಯಚಿತ್ರ: ಅರವಿಂದ್ ಟಿಎಂ

ಬಂಡವಾಳ ಹೂಡಿಕೆಯ ಮೇಳಗಳ ಕತೆ– ಶಿಂಗಾರವೆಲ್ಲಾ ಮುಗಿದಿದೆ, ಆದರೆ ಹೋಗುವುದೆಲ್ಲಿಗೆ?



ಭಾರೀ ಬಂಡವಾಳ ಹೂಡಿಕೆಯ ಘೋಷಣೆಗಳಾಗಿವೆ. ಆದರೂ ಉದ್ಯೋಗ ಸೃಷ್ಠಿಯ ಪರಿಣಾಮ ಹುಡುಕಿದರೂ ಕಾಣುತ್ತಿಲ್ಲ. ಘೋಷಣೆಯಾದ ಹೂಡಿಕೆಯ ಬಹಳಷ್ಟು ಪ್ರಸ್ತಾಪಗಳು ಅನುಷ್ಠಾನಗೊಂಡಿಲ್ಲ. ಈ ಎಲ್ಲ ಘೋಷಣೆಗಳು ಮಕಾಡೆ ಮಲಗುವ ಸೂಚನೆಗಳೇ ಹೆಚ್ಚು. ಉದ್ಯೋಗ ಸೃಷ್ಟಿ ಆಗುತ್ತಿಲ್ಲ. ನಿರುದ್ಯೋಗ ಹೆಚ್ಚುತ್ತಿದೆ. ಐಟಿ ಮತ್ತು ಇತರ ಕೆಲವು ವಲಯಗಳಲ್ಲಿ ಉದ್ಯೋಗಗಳು ನಾಶವಾಗುತ್ತಿವೆ. ಒಟ್ಟಾರೆ ಬೇಡಿಕೆ ಕುಗ್ಗುತ್ತಿರುವುದರಿಂದ, ಇಡೀ ಅರ್ಥವ್ಯವಸ್ಥೆಯೇ ಮುಗ್ಗರಿಸುತ್ತಿದೆ. ಹಾಗಾಗಿ, ಈ ಎಲ್ಲಾ ಹೂಡಿಕೆ ಮೇಳಗಳಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ ಎಂಬದು ಸ್ಪಷ್ಟ

ಸಂಗ್ರಹ–ಅನುವಾದ: ಕೆ.ಎಂ.ನಾಗರಾಜ್

ಇತ್ತೀಚಿನ ವರ್ಷಗಳಲ್ಲಿ, ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ನಡೆದ ಬಂಡವಾಳ ಹೂಡಿಕೆಯ ಮೇಳಗಳ ಅಬ್ಬರ ಒಂದಕ್ಕಿಂತ ಇನ್ನೊಂದು ದೊಡ್ಡದು ಎನ್ನುವಂತಿದೆ. ಈ ಮೇಳಗಳ ಉದ್ದೇಶವೇ ಬೇರೆ. ಅವು ಪಡೆದ ಪ್ರಚಾರದ ಉದ್ದೇಶವೇ ಬೇರೆ. ಈ ಮೇಳಗಳಲ್ಲಿ ಘೋಷಣೆಯಾದ ಹೂಡಿಕೆಯ ಪ್ರಸ್ತಾಪಗಳ ಪ್ರಮಾಣಕ್ಕೂ ಮತ್ತು ಇದೇ ಪ್ರಸ್ತಾಪಗಳು ಸಾಕಾರಗೊಂಡಿರುವ ಪ್ರಮಾಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಪ್ರಸ್ತಾಪಗಳ ಅನುಷ್ಠಾನದ ಬಗ್ಗೆ ಯೋಚಿಸಿದರೆ, ಬಾರ್ಮೆಸೈಡ್ ಔತಣದ ಕತೆ ನೆನಪಾಗುತ್ತದೆ.

ಬಾರ್ಮೆಸೈಡ್ ಔತಣ

ಮಲಗುವ ಮುನ್ನ ಮಕ್ಕಳಿಗೆ ಹೇಳುವ 'ಒಂದು ಸಾವಿರದ ಒಂದು ಅರೆಬಿಯನ್ ನೈಟ್ಸ್' ಕತೆಗಳಲ್ಲಿ, ಶ್ರೀಮಂತನೊಬ್ಬ ತನ್ನ ಬಳಿ ಬಂದ ಭಿಕ್ಷುಕನ ಜೊತೆ ನೆಡೆದುಕೊಂಡ ಒಂದು ಕತೆ ಹೀಗಿದೆ: ಒಬ್ಬ, ದುರಾದೃಷ್ಟದಿಂದಾಗಿ, ತನ್ನ ಪಿತ್ರಾರ್ಜಿತ ಆಸ್ತಿಯನ್ನೆಲ್ಲಾ ಕಳೆದುಕೊಂಡು ಬೇರೆ ದಾರಿ ಇಲ್ಲದೆ ಭಿಕ್ಷಾಟನೆಗಿಳಿದ. ತನ್ನ ಮಾತುಗಾರಿಕೆ ಮತ್ತು ನಾಜೂಕಿನ ನಡವಳಿಕೆಯಿಂದಾಗಿ ಅವನ ಹೊಸ ವೃತ್ತಿ ಚನ್ನಾಗಿಯೇ ಸಾಗಿತ್ತು. ಒಂದು ದಿನ ಹೀಗೆವ ಹೋಗುತ್ತಿರುವಾಗ ಒಂದು ಮಹಡಿಯ ಮನೆ ಅವನ ಗಮನ ಸೆಳೆಯಿತು. ಅಲ್ಲಿದ್ದ ಕಾವಲುಗಾರನನ್ನು ವಿಚಾರಿಸಿದಾಗ, ಅದು ಔದಾರ್ಯ ಮತ್ತು ಕನಿಕರದ ಗುಣಗಳಿಗೆ ಹೆಸರು ಪಡೆದಿದ್ದ ಬಾರ್ಮೆಸೈಡ್ ಕುಟುಂಬದವರ ಮನೆ ಎಂಬುದು ತಿಳಿಯಿತು. ತನಗೆ ಏನಾದರೂ ಭಿಕ್ಷೆ ಕೊಡುವರೇ ಎಂದು ಕೇಳಿದ. ಒಳಗೆ ಹೋಗಿ ನೇರವಾಗಿ ಯಜಮಾನರೊಂದಿಗೇ ವಿಚಾರಿಸು ಎಂದ ಕಾವಲುಗಾರ. ಅವನು ಒಳಗೆ ಹೋದ. ಎದುರಿಗೆ ಕುಳಿತಿದ್ದ ಶ್ರೀಮಂತ ಅವನನ್ನು ಸೌಜನ್ಯದಿಂದ ಸ್ವಾಗತಿಸಿದ. ಸಹಾಯ ಕೇಳಲು ಬಂದಿದ್ದ ಅವನ ಉತ್ಸಾಹ ಇಮ್ಮಡಿಯಾಯಿತು. ಸ್ವಾಮಿ, ನಾನೊಬ್ಬ ಬಡವ. ನನ್ನಂತಹ ನಿರ್ಭಾಗ್ಯನಿಗೆ ನಿಮ್ಮಂತಹ ಕರುಣಾಳುವಿನಿಂದ ತಿನ್ನಲು ಏನಾದರೂ ಸಿಗಬಹುದೆ? ಎಂದು ಕೇಳಿದ. ಶ್ರೀಮಂತ ಹೇಳಿದ – ನಾನು ಬದುಕಿರುವಾಗ ನಿನ್ನಂತವನೊಬ್ಬ ಉಪವಾಸದಿಂದ ನರಳುವುದೇ? ಇಂತಹ ಪರಿಸ್ಥಿತಿ ಯಾರಿಗೂ ಬರಬಾರದು. ನಾನು ನಿನ್ನನ್ನು ಕಡೆಗಣಿಸಿದ್ದೇನೆಂದು ಯಾರೂ ಹೇಳಬಾರದು ಎಂದ. ಆಗ ಅವನು, ಸ್ವಾಮಿ, ಇಡೀ ದಿನ ಏನೂ ತಿಂದಿಲ್ಲ ಎಂದ. ಶ್ರೀಮಂತ, ಏನು? ಹಸಿವಿನಿಂದ ನರಳುತ್ತಿದ್ದಿಯಾ? ಎಂದು ಕೇಳಿದ. ತಕ್ಷಣವೇ, ಏಯ್! ಯಾರಲ್ಲಿ! ಸೇವಕರೇ, ಊಟಕ್ಕೆ ಮೊದಲು ಕೈ ತೊಳೆಯೋಣ ಸ್ವಲ್ಪ ನೀರು ತನ್ನಿ ಎಂದ. ಅವನು ಕಣ್ಣು ಬಾಯಿ ಅರಳಿಸಿ ನೋಡುತ್ತಿದ್ದಾನೆ – ಸೇವಕರೂ ಇಲ್ಲ; ನೀರೂ ಇಲ್ಲ. ಆದರೂ ಶ್ರೀಮಂತ ಕೈ ತೊಳೆದುಕೊಂಡು ಕೈ ಒರಸಿಕೊಂಡದ್ದನ್ನುಅವನು ಗಮನಿಸಿದ. ಏನಯ್ಯಾ ನೀನಿನ್ನೂ ಕೈ ತೊಳೆಯಲೇ ಇಲ್ಲವಲ್ಲ ಎಂದ ಶ್ರೀಮಂತ. ಅವನೂ ಕೈ ತೊಳೆದು ಒರಸಿಕೊಂಡಂತೆ ಮಾಡಿದ. ಶ್ರೀಮಂತ ಹೇಳಿದ – ಇವನಿಗೆ ಬಹಳ ಹಸಿವಾಗಿದೆ, ಬೇಗ ಬಡಿಸಿ ಎಂದು. ಸುತ್ತ ಮುತ್ತ ಕಣ್ಣಾಡಿಸಿದರೂ ತಿನ್ನುವ ಪದಾರ್ಥಗಳು



ಅವನಿಗೆ ಕಾಣುತ್ತಿಲ್ಲ. ಆದರೂ, ಶ್ರೀಮಂತ ತಟ್ಟೆಗೆ ಬಡಿಸಿಕೊಳ್ಳುತ್ತಾ; ಬಾಯಿ ಚಪ್ಪರಿಸುತ್ತಾ ಅವನಿಗೆ ಹೇಳಿದ – ಸಂಕೋಚಪಡಬೇಡ, ತಿನ್ನ, ತಿನ್ನು, ಹೊಟ್ಟೆ ತುಂಬಾ ತಿನ್ನುಎಂದ. ಶ್ರೀಮಂತನನ್ನೇ ಅನುಕರಿಸಿ ಅವನೂ ಹೊಟ್ಟೆ ತುಂಬಾ ತಿಂದ. ಬಳಿಕ, ಅವನು, ಊಟ ಭರ್ಜರಿಯಾಗಿತ್ತು; ಇಷ್ಟು ರುಚಿಯಾದ ಭಕ್ಷ್ಯ ಬೋಜ್ಯಗಳನ್ನು ನಾನು ಯಾವತ್ತೂ ತಿಂದೇ ಇಲ್ಲ ಎಂದ. ನಗುತ್ತಾ ಶ್ರೀಮಂತ, ಸ್ವಲ್ಪ ಸುರಾಪಾನ ಮಾಡೋಣವೆ? ಎಂದು ಕೇಳಿದ. ಅವನ ಸಂಕೋಚ ಗಮನಿಸಿ, ಪರವಾಗಿಲ್ಲ; ಸ್ವಲ್ಪ ತಗೊ ಎಂದ ಶ್ರೀಮಂತ. ಇಬ್ಬರೂ ಒಂದರ ನಂತರ ಮತ್ತೊಂದು ಗ್ಲಾಸ್ ಇಳಿಸಿದಂತೆ ಮಾಡಿದರು. ಕೆಲವೇ ಕ್ಷಣಗಳನಂತರ ಭಿಕ್ಷುಕ ದಿಢೀರನೆ ಶ್ರೀಮಂತನ ಕೆನ್ನೆಗೆ ಬಾರಿಸಿದ. ಏನಯ್ಯಾ! ನನಗೇ ಹೊಡಿತೀಯಾ? ಎಂದು ಶ್ರೀಮಂತ ಕೇಳಿದ. ಅವನು, ನಾಚಿಕೆ ನಟಿಸುತ್ತಾ, ನಾನು ಏನು ಮಾಡಿದೆ ಎಂದು ನನಗೆ ಗೊತ್ತಾಗಲೇ ಇಲ್ಲ, ಗುಂಡು ಸ್ವಲ್ಪ ಜಾಸ್ತಿಯಾಯ್ತು, ಅಷ್ಟೆ! ದಯಮಾಡಿ ಕ್ಷಮಿಸಿ ಎಂದ. ಇಬ್ಬರೂ ಬಿದ್ದು ಬಿದ್ದು ನಕ್ಕರು. ಶ್ರೀಮಂತ ಹೇಳಿದ – ನಿನ್ನ ಜಾಣ್ಮೆಯನ್ನು ಮೆಚ್ಚಿದೆ, ಈಗ ನಿಜಕ್ಕೂ ಒಂದು ಒಳ್ಳೆಯ ಊಟಮಾಡೋಣ, ಬಾ, ಎಂದ. ... ಹೀಗೆ ಚಾಟಿ ಇಲ್ಲದೆ ಬುಗುರಿ ಆಡಿಸುವ ಈ ಕತೆ ಅನೇಕ ತಿರುವು ಪಡೆಯುತ್ತಾ ಸಾಗುತ್ತದೆ.

ಘೋಷಣೆಗಳ ಸುರಿಮಳೆ

ಇತ್ತೀಚಿನ ದಿನಗಳಲ್ಲಿ ಅನೇಕ ರಾಜ್ಯಗಳಲ್ಲಿ ಭಾರಿ? ಗುಲ್ಲೆಬ್ಬಿಸಿದ ಬಂಡವಾಳ ಹೂಡಿಕೆಯ ಮೇಳಗಳು ಜರುಗಿವೆ. ದೇಶದ ಕೆಲವು ಕಾರ್ಪೊರೆಟ್ ದಣಿಗಳು, ಪ್ರಧಾನ ಮಂತ್ರಿಯವರ ಸಮ್ಮುಖದಲ್ಲಿ, ಉದ್ಯೋಗ ಸೃಷ್ಠಿಯ ಸಲುವಾಗಿ, ಪೈಪೋಟಿಗೆ ಬಿದ್ದವರಂತೆ ಬಂಡವಾಳ ಹೂಡಿಕೆಯ ಘೋಷಣೆಗಳ ಮಳೆಗರೆದಿದ್ದಾರೆ. ದೇಶವನ್ನು ಉಜ್ವಲ ಭವಿಷ್ಯದತ್ತ ಕೊಂಡೊಯ್ಯುವ ನಿಮ್ಮ ಕನಸನ್ನು ನಾವು ನನಸು ಮಾಡುತ್ತೇವೆ ಎಂಬುದಾಗಿ ಪ್ರಧಾನ ಮಂತ್ರಿಯವರನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದಾರೆ. ಇಂತಹ ಮೇಳಗಳಲ್ಲಿ ಆಗಿರುವ ಘೋಷಣೆಗಳ ಒಂದು ಚಿತ್ರ ಕೆಳಗಿರುವ ಕೋಷ್ಟಕದಲ್ಲಿ ಸಿಗುತ್ತದೆ.

ವೈಬ್ರಂಟ್ ಗುಜರಾತ್

ಗುಜರಾತ್ ಅಭಿವೃದ್ಧಿ ಮಾದರಿಯ ವ್ಯಾಪಕ ಪ್ರಚಾರವು 2014ರ ಚುನಾವಣೆಯಲ್ಲಿ ಮೋದಿಯವರ ಗೆಲುವಿಗೆ ಕಾರಣವಾದ ಅಂಶಗಳಲ್ಲಿ ಒಂದು. ಹಾಗಾಗಿ, ಈ ಎಲ್ಲ ಹೂಡಿಕೆ ಮೇಳಗಳಿಗೆ ಗುಜರಾತ್ ಮಾದರಿಯೆ? ಸ್ಫೂರ್ತಿ. ಏಕೆಂದರೆ, ಮೋದಿಯವರವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 'ವೈಬ್ರಂಟ್ ಗುಜರಾತ್ ' ಹೆಸರಿನ ಹೂಡಿಕೆಯ ಮೇಳಗಳನ್ನು ಆಯೋಜಿಸಿದ್ದರು. 2003 –2017 ರ ಅವಧಿಯಲ್ಲಿ ಇಂತಹ ಎಂಟು ಮೇಳಗಳಾಗಿವೆ. 'ಮಿಂಟ್' ಪತ್ರಿಕೆಯ ಅಂದಾಜಿನ ಪ್ರಕಾರ ಈ ಮೇಳಗಳಲ್ಲಿ ಘೋಷಣೆಯಾದ ಹೂಡಿಕೆಯ ಮೊತ್ತ 76 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿದೆ! ಆದರೆ, ಇವುಗಳಲ್ಲಿ ಅನುಷ್ಠಾನಗೊಂಡ ಪ್ರಸ್ತಾಪಗಳೆಷ್ಟು ಎಂಬ ನಿಖರ ಮಾಹಿತಿ ಲಭ್ಯವಿಲ್ಲ.

ಹೂಡಿಕೆಯ ಮೇಳಗಳಲ್ಲಿ ಮಾಡುವ ಇಂತಹ ಘೋಷಣೆಗಳ ಬಗ್ಗೆ ಆಶ್ಚರ್ಯವೇನಿಲ್ಲ. ಉದ್ಯಮಿಗಳ ಗುಂಪು ಅಧಿಕಾರಾರೂಢ ರಾಜಕಾರಣಿಗಳನ್ನು ಸಂಪ್ರೀತಗೊಳಿಸಲು ಮತ್ತು ಹಣದ ಚೀಲಗಳನ್ನು ಸರಬರಾಜು ಮಾಡುವ ಉದ್ಯಮಿಗಳ ಗುಂಪಿಗೆ ಋಣ ತೀರಿಸುವ ರಾಜಕಾರಣಿಗಳು ಇಂತಹ ಮೇಳಗಳ ಮೂಲಕ ಒಬ್ಬರನ್ನೊಬ್ಬರು ಖುಷಿಪಡಿಸುತ್ತಾರೆ. ರಾಜಕಾರಣಿಗಳು ಚುನಾವಣೆ ಗೆಲ್ಲುವ ಸಲುವಾಗಿ, ಉದೋಗ ಸೃಷ್ಠಿಸುವುದಾಗಿ ಜನರಿಗೆ ಭರವಸೆ ಕೊಡುತ್ತಾರೆ. ಮತ್ತು, ಅತಿ ಕಡಿಮೆ ಕೂಲಿಯಲ್ಲಿ ಕೆಲಸಗಾರರನ್ನು ಒದಗಿಸುವ, ಅಗ್ಗದ ಬೆಲೆಯಲ್ಲಿ ಕೆಲವು ಸೌಕರ್ಯಗಳನ್ನು ಒದಗಿಸುವ, ತೆರಿಗೆ ರಿಯಾಯ್ತಿ ಕೊಡುವ ಮೂಲಕ ಉದ್ಯಮಿಗಳನ್ನು ಖುಷಿ ಪಡಿಸಿ ತಮಗೆ ಸಲ್ಲಬೇಕಾದ ಕಾಣಿಕೆಯನ್ನು ಪಡೆಯುತ್ತಾರೆ. ಅಂದರೆ, ಈ ಮೇಳಗಳ ಮೂಲಕ ಈ ಎರಡೂ ಗುಂಪುಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತವೆ.

ಇಷ್ಟೆಲ್ಲಾ ಬಂಡವಾಳ ಹೂಡಿಕೆಯ ಘೋಷಣೆಗಳಾಗಿವೆ. ಆದರೂ ಉದ್ಯೋಗ ಸೃಷ್ಠಿಯ ಪರಿಣಾಮ ಹುಡುಕಿದರೂ ಕಾಣುತ್ತಿಲ್ಲ. ಘೋಷಣೆಯಾದ ಹೂಡಿಕೆಯ ಎಲ್ಲ ಪ್ರಸ್ತಾಪಗಳು ಅನುಷ್ಠಾನಗೊಂಡಿಲ್ಲ. ಈ ಸಂಬಂಧವಾಗಿ ಕೈಗೊಂಡ ಒಂದು ಅಧ್ಯಯನದ ಪ್ರಕಾರ, ಲಭ್ಯವಿರುವ ಮಾಹಿತಿ ಹೀಗಿದೆ:

2003–2016ರ ಅವಧಿಯ ಘೋಷಣೆಗಳು ಮತ್ತು ಅನುಷ್ಠಾನಗೊಂಡ ಪ್ರಸ್ತಾವನೆಗಳು (ಪ್ರತಿ ಶತ)

ರಾಜ್ಯಗಳು	%
ಮಧ್ಯ ಪ್ರದೆಏಶ	35.7
ಉತ್ತರ ಪ್ರದೆಏಶ	35.3
ರಾಜಾಸ್ತಾನ	32.5
ಮಹಾರಾಷ್ಟ್ರ	29.1
ಗುಜರಾತ್	25.0
ಝಾರ್ಖಂಡ್	14.1

ಬಂಡವಾಳ ಹೂಡಿಕೆಯ ಈ ಎಲ್ಲ ಘೋಷಣೆಗಳು ಮಕಾಡೆ ಮಲಗುವ ಸೂಚನೆಗಳು ಕಾಣುತ್ತಿವೆ. ಉದಾಹರಣೆಯಾಗಿ ಹೇಳುವುದಾದರೆ,ಮ್ಯಾಗ್ನೆಟಿಕ್ ಮಹಾರಾಷ್ಟ್ರ ಮೇಳದಲ್ಲಿ, ಮುಂಬೈ ಮತ್ತು ಪುಣೆ ನಡುವೆ ಒಂದು ಹೈಪರ್ ಲೂಪ್ ಸಂಚಾರ ವ್ಯವಸ್ಥೆ ನಿರ್ಮಿಸುವ ಒಂದು ಯೋಜನೆಯ ಸಂಬಂಧವಾಗಿ ವರ್ಜಿನ್ ಕಂಪೆನಿಯೊಂದಿಗೆ ಮಹಾರಾಷ್ಟ್ರ ಸರ್ಕಾರವು ಒಂದು ಚೌಕಟ್ಟು ಒಪ್ಪಂದಕ್ಕೆ ಸಹಿ ಹಾಕಿದೆ. ಗರ್ಭಾವಸ್ಥೆಯಲ್ಲಿರುವ ಹೈಪರ್ ಲೂಪ್ ಸಂಚಾರ ವ್ಯವಸ್ಥೆಯು ಈ ವರೆಗೂ ಜಾಗತಿಕ ಮಟ್ಟದಲ್ಲಿ ಯಾವುದೇ ಸುರಕ್ಷಾ ಪರೀಕ್ಷೆಗೂ ಒಳಪಟ್ಟಿಲ್ಲ. ಆದರೂ, ಅದಾಗಲೆ?, ಸಂಚಾರದ ಅವಧಿ ನಾಲ್ಕು ಗಂಟೆಗಳಿಂದ ಕೇವಲ ಇಪ್ಪತ್ತೈದು ನಿಮಿಷಗಳೆಂದೂ, ಹದಿನೈದು ಕೋಟಿ ಜನ ಪ್ರಯಾಣಿಸುತ್ತಾರೆಂದೂ, ಮೂರು ಲಕ್ಷ ಐವತ್ತು ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಗುತ್ತದೆಂದೂ ಅಂಕಿ ಸಂಖ್ಯೆಗಳು ಹೊರಬಂದಿವೆ!

ಅದೇನೇ ಇರಲಿ, ವಾಸ್ತವ ಪರಿಸ್ಥಿತಿ ಏನೆಂಬುದು ಮುಖ್ಯವಾಗುತ್ತದೆ. ರಿಸರ್ವ್ ಬ್ಯಾಂಕ್ ವರದಿಯ ಪ್ರಕಾರ, ಮೇ 2016 ಮತ್ತು ಡಿಸೆಂಬರ್ 2017ರ ನಡುವಿನ 20 ತಿಂಗಳ ಅವಧಿಯಲ್ಲಿ, ಕೈಗಾರಿಕಾ ಉತ್ಪತ್ತಿಯ ಸೂಚ್ಯಂಕದಲ್ಲಿ 7.42% ಏರಿಕೆಯಾಗಿದೆ. ಅದು, ವಾರ್ಷಿಕ ಬೆಳವಣಿಗೆಯ ಲೆಕ್ಕದಲ್ಲಿ, ಕೇವಲ 4.5%. ಜೂನ್ 2014– ಅಕ್ಟೋಬರ್ 2017 ಅವಧಿಯಲ್ಲಿ ಕೈಗಾರಿಕೆಗಳಿಗೆ ದೊರೆತ ಸಾಲದ ವಾರ್ಷಿಕ ಬೆಳವಣಿಗೆ ದರ 1%ಗಿಂತಲೂ ಕಡಿಮೆ. ಇತ್ತೀಚೆಗೆ ಅದು ಇನ್ನೂ ಕಡಿಮೆಯಾಗಿದೆ. 2014–15ರಲ್ಲಿ 10.2% ಇದ್ದ ಬಂಡವಾಳದ ಒಟ್ಟು ಶೇಖರಣೆಯ ಪ್ರಮಾಣವು 2016–17 ರಲ್ಲಿ 5.2%ಗೆ ಇಳಿದಿದೆ. ಹೊಸ ಹೂಡಿಕೆಗಳು ಬಹಳ ಕಡಿಮೆ ಇರುವುದರಿಂದಾಗಿ ಉದ್ಯೋಗ ಸೃಷ್ಟಿ ಆಗುತ್ತಿಲ್ಲ. ನಿರುದ್ಯೋಗ ಹೆಚ್ಚುತ್ತಿದೆ. ಐಟಿ ಮತ್ತು ಇತರ ಕೆಲವು ವಲಯಗಳಲ್ಲಿ ಉದ್ಯೋಗಗಳು ನಾಶವಾಗುತ್ತಿವೆ. ಒಟ್ಟಾರೆ ಬೇಡಿಕೆ ಕುಗ್ಗುತ್ತಿರುವುದರಿಂದ, ಇಡೀ ಅರ್ಥವ್ಯವಸ್ಥೆಯೇ ಮುಗ್ಗರಿಸುತ್ತಿದೆ. ಹಾಗಾಗಿ, ಈ ಎಲ್ಲಾ ಹೂಡಿಕೆ ಮೇಳಗಳಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ.



ಘೋಷಿತ ಹೂಡಿಕೆಗಳೂ –ಸೃಷ್ಟಿಯಾಗಬೇಕಿದ್ದ ಉದ್ಯೋಗಗಳೂ

ಹೂಡಿಕೆ ಮೇಳ	ನಡೆದ ದಿನಾಂಕ	ಘೋಷಿತ ಹೂಡಿಕೆ ಮೊತ್ತ	ಉದ್ಯೋಗ ಸೃಷ್ಟಿ
ಮ್ಯಾಗ್ನೆಟಿಕ್ ಮಹಾರಾಷ್ಟ್ರ	19–20 ಫೆ, 2018	16 ಲಕ್ಷ ಕೋಟಿ ರೂ	36.77ಲಕ್ಷ
ಉತ್ತರ ಪ್ರದೇಶ	21–22 ಫೆ,2018	4.28ಲಕ್ಷ ಕೊ?ಟಿ ರೂ	40 ಲಕ್ಷ
ಬಂಗಾಳ–ಜಾ.ಹೂಡಿಕೆ ಮೇಳ	16–17 ಜ, 2018	22 ಲಕ್ಷ ಕೋಟಿ ರೂ	20ಲಕ್ಷ
ಆಂಧ್ರ – ಹೂಡಿಕೆ ಮೇಳ	24–26 ಫೆ, 2018	2.56 ಲಕ್ಷ ಕೋಟಿ ರೂ	–
ಚೈತನ್ಯಶಾಲಿ ರಾಜಾಸ್ತಾನ	19–20 ನ, 2015	3.30 ಲಕ್ಷ ಕೋಟಿ ರೂ	2.5 ಲಕ್ಷ
ಸಂಭವಾಮಿ ಹರ್ಯಾಣ	7–8 ಮಾ, 2016	6.41 ಲಕ್ಷ ಕೋಟಿ ರೂ	–
ರಭಸದ ಝಾರ್ಖಂಡ್	17–18 ಫೆ, 2017	3 ಲಕ್ಷ ಕೋಟಿ ರೂ	5.0 ಲಕ್ಷ



"ಆತ್ಮಹತ್ಯೆ ಬೇಡ, ಸಂಘರ್ಷ ನಡೆಸುತ್ತೇವೆ:ಲಕ್ನೌನಲ್ಲಿ 'ಕಿಸಾನ್ ಪ್ರತಿರೋಧ ರ‍್ಯಾಲಿ'







ಮಹಾರಾಷ್ಟ್ರದ ರೈತರ ಯಶಸ್ವಿ ಲಾಂಗ್ ಮಾರ್ಚ್ ಬೆನ್ನಲ್ಲೇ ಬಿಜೆಪಿ ಸರಕಾರದ ಸಾಲಮನ್ನಾದ ಶೋಚನೀಯ ನಾಟಕದಿಂದ ಆಕ್ರೋಶಗೊಂಡಿರುವ ಉತ್ತರಪ್ರದೇಶದ ಮೂಲೆ–ಮೂಲೆಗಳಿಂದ ಸಾವಿರಾರು ರೈತರು ರಾಜಧಾನಿ ಲಕ್ನೌಗೆ ಬಂದು ಪ್ರತಿಭಟನಾ ರ‍್ಯಾಲಿ ನಡೆಸಿದ್ದಾರೆ. "ಆತ್ಮಹತ್ಯೆಯಲ್ಲ, ಸಂಘರ್ಷ ಮಾಡುತ್ತೇವೆ" ಎಂಬುದು ಈ 'ಕಿಸಾನ್ ಪ್ರತಿರೋಧ್ ರ‍್ಯಾಲಿ'ಯ ಘೋಷವಾಕ್ಯವಾಗಿತ್ತು.

ಮಹಾರಾಷ್ಟ್ರದ ಯಶಸ್ವಿ ಆಂದೋಲನದ ಒಬ್ಬ ರೂವಾರಿ ಹಾಗೂ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಅಧ್ಯಕ್ಷರೂ ಆಗಿರುವ ಡಾ.ಅಶೋಕ ಧವಳೆ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಈಗ ಆಳುವ ಪಕ್ಷಗಳ ಅಜೆಂಡಾದಲ್ಲಿ ರೈತ ಇಲ್ಲವೇ ಇಲ್ಲ, ಇರುವುದು ನೀರವ್ ಮೋದಿ ,ವಿಜಯಮಲ್ಯನಂತವರೇ. ಇದರ ವಿರುದ್ಧ ದೇಶಾದ್ಯಂತ ರೈತರ ಆಕ್ರೋಶ ಹೆಚ್ಚುತ್ತಿದೆ. ಹಿಂದಿನ ದಿನವಷ್ಟೇ ಬಂದಿದ್ದ ಉತ್ತರಪ್ರದೇಶ ಲೋಕಸಭಾ ಉಪಚುನಾವಣೆಗಳ ಫಲಿತಾಂಶ ಇದರ ಸಂಕೇತ. ಈ ರ‍್ಯಾಲಿ ಅದೇ ಆಕ್ರೋಶದ ಅಭಿವ್ಯಕ್ತಿಯ ಸರಣಿಯ ಇನ್ನೊಂದು ಕೊಂಡಿ ಎಂದರು.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಉಪಾಧ್ಯಕ್ಷರೂ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ ಆಗಿರುವ ಸುಭಾಷಿಣಿ ಅಲಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮತ್ತು ರಾಜ್ಯ ಕಿಸಾನ್ ಸಭಾದ ಉಪಾಧ್ಯಕ್ಷರಾಗಿರುವ ಹೀರಾಲಾಲ್ ಯಾದವ್ ಮತ್ತು ಉತ್ತರಪ್ರದೇಶ ಕಿಸಾನ್ ಸಭಾದ ಕಾರ್ಯದರ್ಶಿ ಮುಕುಟ್ ಸಿಂಗ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತಾಡಿದರು. ಸಾಲ ಮನ್ನಾ, ವಿದ್ಯುತ್ ಮತ್ತು ರಸಗೊಬ್ಬರ ದರಗಳನ್ನು ಇಳಿಸುವುದು, ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ, ಜಾನುವಾರುಗಳ ಖರೀದಿ–ಮಾರಾಟದ ಮೇಲಿನ ನಿರ್ಬಂಧಗಳನ್ನು ತೆಗೆಯಬೇಕು ಎಂಬುದು ರೈತರ ಬೇಡಿಕೆಗಳು.

ಹಳ್ಳಿಗಳ ಮಟ್ಟದಲ್ಲಿ, ತಹಸೀಲ್‌ಗಳ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟಗಳಲ್ಲಿ ರ‍್ಯಾಲಿಗಳ ನಂತರ ವಿಧಾನಸಭಾ ಚಲೋ ವಗೆಗೆ ಹಂತಹಂತವಾಗಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಲಾಯಿತು.

ಸಿಪಿಐ(ಎಂ)ನ 25ನೇ ಪಶ್ಚಿಮ ಬಂಗಾಳ ರಾಜ್ಯಸಮ್ಮೇಳನ

ಮಾರ್ಚ್ 5ರಿಂದ 8ರ ವರೆಗೆ ಕೊಲ್ಕತಾದಲ್ಲಿ ನಡೆದ ಸಿಪಿಐ(ಎಂ)ನ 25ನೇ ಪಶ್ಚಿಮ ಬಂಗಾಳ ರಾಜ್ಯಸಮ್ಮೇಳನ ಜನತೆಯೊಡನೆ ಸಂಪರ್ಕಗಳನ್ನು ಬಲಪಡಿಸಬೇಕು, ಜನಗಳ ಪ್ರಶ್ನೆಗಳ ಮೇಲೆ ಚಳುವಳಿಗಳನ್ನು ಕಟ್ಟಬೇಕು ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದೆ. ಟಿಎಂಸಿ ಸರಕಾರದ ವಿರುದ್ಧ ಜನಗಳಲ್ಲಿ ಅಸಂತೃಪ್ತಿ ಹೆಚ್ಚುತ್ತಿದೆ, ಇದು ಪ್ರತಿರೋಧದದ ಹೊಸ ಸಾಧ್ಯತೆಗಳನ್ನು ತೆರೆಯುತ್ತಿದೆ. ಪಕ್ಷ ಇದನ್ನು ಬಳಸಿಕೊಂಡು ಕೈಗೂಡಬಹುದಾದ ಬೇಡಿಕೆಗಳ ಮೇಲೆ ಹೋರಾಟಗಳನ್ನು ಬೆಳೆಸಬೇಕು ಎಂದು ಹೇಳಿದೆ.

ಟಿಎಂಸಿ ಮತ್ತು ಬಿಜೆಪಿ ಋ ರಾಜ್ಯದಲ್ಲಿ ಅವಳಿ ಅಪಾಯಗಳು. ಅವು ಕೋಮು ಧ್ರುವೀಕರಣದಲ್ಲಿ ಮತ್ತು ಕೋಮುವಾದದಲ್ಲಿ ಹಾಗೂ ಐಡೆಂಟಿಟಿ ರಾಜಕೀಯದಲ್ಲೂ ಸ್ಪರ್ಧೆಗಿಳಿದಿವೆ ಎಂಬ ತೀರ್ಮಾನಕ್ಕೆ ಬಂದ ರಾಜ್ಯಸಮ್ಮೇಳನ ಹಲವು ಕ್ಷೇತ್ರಗಳಲ್ಲಿ ಪ್ರತಿಭಟನೆಗಳು ಭುಗಿಲೇಳುತ್ತಿವೆ ಎಂದು ಗಮನಿಸಿತು. ಇವನ್ನು ದೊಡ್ಡ ಜನಾಂದೋಲನಗಳಾಗಿ ಪರಿವರ್ತಿಸುವುದು ಪಕ್ಷದ ಸಾಮರ್ಥ್ಯದ ಮೇಲೆ ನಿಂತಿದೆ. ಎಂದು ಅದು ಹೇಳಿದೆ.

ಪಶ್ಚಿಮ ಬಂಗಾಲದಲ್ಲಿನ ರಾಜಕೀಯ ಸಮತೋಲನವನ್ನು ಬದಲಿಸದೆ ದೇಶದ ರಾಜಕೀಯ ಸಮತೋಲನವನ್ನು ಬದಲಿಸಲು ಸಾಧ್ಯವಾಗದು ಎಂದು ಸಮ್ಮೇಳನ ಅಭಿಪ್ರಾಯ ಪಟ್ಟಿತು.

80 ಸದಸ್ಯರಿರುವ ಹೊಸ ರಾಜ್ಯಸಮಿತಿಯನ್ನು ಆರಿಸಲಾಯಿತು. ಅದರಲ್ಲಿ ಒಂದು ಸ್ಥಾನವನ್ನು ಮಹಿಳೆಯರಿಗಾಗಿ ಖಾಲಿ ಇಡಲಾಗಿದೆ. ಈಗ ಆರಿಸಿದ ರಾಜ್ಯಸಮಿತಿಯಲ್ಲಿ 11 ಮಹಿಳೆಯರಿದ್ದಾರೆ. ಹಿಂದಿನ ರಾಜ್ಯಸಮಿತಿಯ 20 ಸದಸ್ಯರು ನಿವೃತ್ತಿಯನ್ನು ಆಯ್ಕೆ ಮಾಡಿಕೊಂಡರು. 17 ಹೊಸ ಸದಸ್ಯರನ್ನು ರಾಜ್ಯಸಮಿತಿಗೆ ಆರಿಸಲಾಗಿದೆ. ಸೂರ್ಯಕಾಂತ್ ಮಿಶ್ರ ರಾಜ್ಯ ಕಾರ್ಯದರ್ಶಿಗಳಾಗಿ ಮನರಾಯ್ಕೆಗೊಂಡಿದ್ದಾರೆ. ಹಿರಿಯ ಮುಖಂಡರುಗಳಾದ ಮಾಜಿ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯ, ಮದನ್ ಘೋಷ್, ಶ್ಯಾಮಲ್ ಚಕ್ರಬರ್ತಿ, ದೀಪಕ್ ಸರ್ಕಾರ್, ಅಶೀಂ ದಾಸ್‌ಗುಪ್ತ, ಬಾಸುದೇವ ಆಚಾರ್ಯ, ಕಾಂತಿ ಗಂಗೂಲಿ ಮತ್ತು ನಿರುಪಮ್ ಸೇನ್ ಅವರನ್ನು ವಿಶೇಷ ಆಹ್ವಾನಿತರಾಗಿ ಆರಿಸಲಾಯಿತು. ಪಕ್ಷದ ಮಹಾಧಿವೇಶನಕ್ಕೆ ರಾಜ್ಯದಿಂದ 175 ಪ್ರತಿನಿಧಿಗಳನ್ನು ಆರಿಸಲಾಯಿತು.



ಆಂಧ್ರಪ್ರದೇಶ: ಆಶ್ವಾಸನೆ ಈಡೇರಿಸದ ಮೋದಿ ಸರಕಾರದ ವಿರುದ್ಧ ಆಕ್ರೋಶ

ಅವಿಭಜಿತ ಆಂಧ್ರಪ್ರದೇಶವನ್ನು ಎರಡು ರಾಜ್ಯಗಳಾಗಿ ವಿಭಜಿಸುವಾಗ ಅದನ್ನು ಬಿಜೆಪಿ ಬಲವಾಗಿ ಬೆಂಬಲಿಸಿತ್ತು. ಮೋದಿ ಸರಕಾರ ವಿಭಜನೆಯ ನಂತರದ ಆಂಧ್ರಪ್ರದೇಶಕ್ಕೆ ವಿಭಜನೆಯಿಂದಾಗಿ ಅದು ಕಳೆದುಕೊಳ್ಳುವ ಸಂಪನ್ಮೂಲವನ್ನು ತುಂಬಿಕೊಳ್ಳಲು ಅನುಕೂಲವಾಗುವಂತೆ ವಿಶೇಷ ಸ್ಥಾನಮಾನದ ಭರವಸೆಯನ್ನೂ ಪ್ರಧಾನ ಂತ್ರಿಗಳು ಕೊಟ್ಟಿದ್ದರು. ಆದರೆ ಇದುವರೆಗೂ ಅದನ್ನು ಈಡೇರಿಸಿಲ್ಲ, ಮಾತ್ರವಲ್ಲ, ಅಬಗ್ಗೆ ಆಸಕ್ತಿಯನ್ನೂ ತೋರದಿರುವುದು ಈ ರಾಜ್ಯದ ಜನಗಳಲ್ಲಿ ತೀವ್ರ ಆಕ್ರೋಶವನ್ನು ಉಂಟು ಮಾಡಿದೆ.

ಸಿಪಿಐ(ಎಂ) ಈ ವಾರ ಅನಂತಪುರ, ಕಡಪ ಮತ್ತಿತರ ಕಡೆಗಳಲ್ಲಿ ಈ ವಿಶ್ವಾಸದ್ರೋಹದ ವಿರುದ್ಧ ಪ್ರತಿಭಟನೆಗಳನ್ನು ನಡೆಸಿದೆ.



ಅನಂತಪುರದಲ್ಲಿ ರಾಜ್ಯ ಕಾರ್ಯದರ್ಶಿ ಪಿ.ಮಧು ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ರಾಯಲಸೀಮಾಕ್ಕೆ ವಿಶೇಷ ನೆರವನ್ನು ಕೊಡಬೇಕು ಎಂದು ಆಗ್ರಹಿಸಲಾಯಿತು. ನಂತರ ಪ್ರತಿಭಟನಾಕಾರರು ಬಂಧನಕ್ಕೊಳಗಾದರು.



ಈ ನಡುವೆ ಎನ್‌ಡಿಎ ಭಾಗವಗಿದ್ದು ಕೇಂದ್ರ ಸರಕಾರದಲ್ಲಿ ಇಬ್ಬರು ಮಂತ್ರಿಗಳನ್ನು ಹೊಂದಿದ್ದ ತೆಲುಗು ದೇಶಂ ಪಕ್ಷ ಬಿಜೆಪಿಯ ನಿಲುವಿನಿಂದ ಮುಜುಗರಕ್ಕೊಳಗಾಗಿದೆ. ಪ್ರತಿಭಟನೆಯಾಗಿ ಈ ಮಂತ್ರಿಗಳು ಮೋದಿ ಸಂಪುಟಕ್ಕೆ ರಾಜೀನಾಮೆ ಕೊಟ್ಟರೂ ಉಪಯೋಗಬಾದಂತಿಲ್ಲ. ಇದರರಿಂದಾಗಿ ಎನ್‌ಡಿಎಯಿಂದಲೇ ಅದು ಹೊರ ಬಂದಿರುವುದಾಗಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಸುದ್ದಿ ಬಂದಿದೆ.

'ಉತ್ತಮ ಆಳ್ವಿಕೆ'ಯ, 'ಯುವಜನರಿಗೆ ಉದ್ಯೋಗ'ದ ಇನ್ನೊಂದು ಮಾದರಿ–

ಮಾತುಕತೆ ಹೆಸರಲ್ಲಿ ಕೋಣೆಯೊಳಗೆ ಬಂಧಿಗಳಾದ ಉತ್ತರಪ್ರದೇಶ ಸಿಎಂ ಹೆಲ್ಪ್ ಲೈನ್ ಸಿಬ್ಬಂದಿ

1076–ಮುಖ್ಯಮಂತ್ರಿಗಳ ಸಹಾಯವಾಣಿ, ಸಿಎಂ ಹೆಲ್ಪ್‌ಲೈನ್–ಉತ್ತರಪ್ರದೇಶದ ಮುಖ್ಯಮಂತ್ರಿಗಳ ಪ್ರಿಯ ಪ್ರಾಜೆಕ್ಟ್. ಜನಗಳ ಪ್ರತಿಯೊಂದೂ ಕುಂದು ಕೊರತೆಗಳನ್ನು ಆಲಿಸುತ್ತಿದ್ದೇನೆ ಎಂದು ಪ್ರಚಾರ ಪಡೆಯುವ ಒಂದು ಪ್ರಯತ್ನ. ಆದರೆ ಆ ಸಹಾಯವಾಣಿಯ ಸಿಬ್ಬಂದಿಯ ಕೊರತೆಗಳನ್ನು ಆಲಿಸುವ ಬದಲು ಅವರೊಡನೆ ಮಾತುಕತೆಯ ಹೆಸರಲ್ಲಿ ಒಂದು ಕೋಣೆಗೆ ಕಳಿಸಿ ಹೊರಗಿನಿಂದ ಬೀಗ ಜಡಿವ ಮೋದಿಯವರ 'ಉತ್ತಮ ಆಳ್ವಿಕೆ'ಗೆ ಹೊಸದೊಂದು ಮಾದರಿಯನ್ನು ಕಲ್ಪಿಸಿಕೊಡಲಾಗಿದೆ.

ಡಿಸೆಂಬರ್ 2017ರಲ್ಲಿ ಇದು ಪ್ರಾರಂಭವಾಯಿತು. ಒಂದು ಎನ್‌ಜಿಒ ಮೂಲಕ ಸುಮಾರು 500 ಯುವಜನರನ್ನು ಆರಿಸಿ ಅವರಿಗೆ ಒಂದು ತಿಂಗಳ ತರಬೇತಿ ನೀಡಿ ಕೆಲಸ ಆರಂಭಿಸಲಾಯಿತು. ನೇಮಕಾತಿ ಪತ್ರ ಕೇಳಿದಾಗ ನಂತರ ಕೊಡಲಾಗುವುದು ಎನ್ನಲಾಯಿತು. ಈ ನಡುವೆ ಇನ್ನೂ 700 ಯುವಜನರನ್ನು ನೇಮಿಸಿಕೊಳ್ಳಾಯಿತು. ಆದರೆ ಯಾರಿಗೂ ನೇಮಕಾತಿ ಪತ್ರ ಇನ್ನೂ ಕೊಟ್ಟಿಲ್ಲ. ಅಲ್ಲದೆ ನಾಲ್ಕು ತಿಂಗಳಿಂದ ಸಂಬಳವೂ ಇಲ್ಲ.

ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ದೂರು ಕೊಟ್ಟಾಗ ಇವರನ್ನು ಮಾತುಕತೆಗೆ ಕರೆಯಲಾಯಿತು. ಇದಕ್ಕಾಗಿ ಒಂದು ಕೋಣೆಯ ಒಳಕ್ಕೆ ಹೋಗಲು ಅವರಿಗೆ ಹೇಳಲಾಯಿತು. ಅವರು ಕೋಣೆಯೊಳಗೆ ಹೋಗುತ್ತಿದ್ದಂತೆ ಹೊರಗಿನಿಂದ ಆ ಕೋಣೆಗೆ ಬೀಗ ಹಾಕಲಾಯಿತು. ನಂತರ ಅವರನ್ನು ಗೇಲಿ ಮಾಡುತ್ತ ಖಾಲಿ ಹಾಳೆಗೆ ಸಹಿ ಹಾಕುವಂತೆ ಹೇಳಲಾಯಿತು ಎನ್ನಲಾಗಿದೆ. ಹತಾಶರಾದ ೫10 ಮಂದಿ ವಿಷ ಸೇವಿಸಿ ಅವರನ್ನು ಆಸ್ಪತ್ರೆಗೆ ಸೇರಿಸಬೇಕಾದ ಪರಿಸ್ಥಿತಿ ಉಂಟಾಯಿತು 'ಅಚ್ಛೇದಿನ"ಗಳ ಈ ಹೊಸ ಮಾದರಿ ರಾಜ್ಯದಲ್ಲಿ!

ಇಟಲಿ : ವಲಸೆಗಾರರ ಮತ್ತು ಯುರೋಕೂಟಗಳ ವಿರೋಧಿಗಳ ಪ್ರಾಬಲ್ಯ



ನಾಗರಾಜ ನಂಜುಂಡಯ್ಯ

ಇಟಲಿಯ ಚುನಾವಣೆಯಲ್ಲಿ ವಲಸೆಗಾರರ ವಿರೋಧಿ ಅಲೆಗಳು ಮರುಕಳಿಸಿ, ಉಗ್ರ–ಬಲ ಪಂಥೀಯರ ಪ್ರಾಬಲ್ಯ ಮೆರೆದಿದೆ. ಇದು ಫ್ಯಾಸಿಸಂ ನ ಪುನರುಜೀವನಕ್ಕೆ ನಾಂದಿಯಾಗದಿರಲಿ ಎಂದು ಆಶಿಸಬೇಕಷ್ಟೇ.

ಇಟಲಿಯ ಚುನಾವಣೆಗಳಲ್ಲಿ ವಲಸೆಗಾರರ ವಿರೋಧಿ ಅಲೆ ಮರುಹುಟ್ಟು ಪಡೆದಿವೆ. ಮ್ಯಾಟ್ಟೀಯೋ ರೆಂಜೀ ನೇತೃತ್ವದ ಆಡಳಿತರೂಡ ಡೆಮಾಕ್ರಾಟಿಕ್ ಪಕ್ಷವು ಅಂದರೆ ನಡು–ಎಡಪಂಥೀಯ ಮೈತ್ರಿಕೂಟವು ಭಾರೀ ಕುಸಿತ ಕಂಡಿದೆ. ಯಾವ ಪಕ್ಷ ಅಥವಾ ಮೈತ್ರಿಕೂಟಕ್ಕೂ ಸ್ಪಷ್ಟ ಬಹುಮತ ಬರದೆ ಅತಂತ್ರ ಪಾರ್ಲಿಮೆಂಟ್ ಹೊಮ್ಮಿದೆ. ಇತ್ತೀಚೆಗೆ ಪಾರ್ಲಿಮೆಂಟಿಗೆ ನಡೆದ ಚುನಾವಣೆಯಲ್ಲಿ ಉಗ್ರ–ಬಲಪಂಥೀಯ ವಲಸೆಗಾರರ ವಿರೋಧಿ ಪಕ್ಷವಾದ ನಾರ್ಥನ್ ಲೀಗ್ (ಲೆಗಾ ನಾರ್ಡ್) ನಾಯಕತ್ವದ ಉಗ್ರ ಬಲಪಂಥೀಯ ಮೈತ್ರಿಕೂಟ, ಯುರೋ ಕೂಟ–ವಿರೋಧಿ ಹೊಸ ಪಕ್ಷ ಫೈವ್‌ಸ್ಟಾರ್ ಮೂವ್‌ಮೆಂಟ್ (ಎಂ.ಎಸ್.5) ಮತ್ತು ಡೆಮೊಕ್ರಾಟಿಕ್ ಪಕ್ಷದ ನೇತೃತ್ವದ ನಡು–ಎಡಪಂಥೀಯ ಮೈತ್ರಿಕೂಟವು ಪ್ರಮುಖ ಸ್ಪರ್ಧಿಗಳಾಗಿದ್ದವು. ಮೊದಲ ಎರಡು ಹೆಚ್ಚಿನ ಮತಗಳಿಸಿ ಆಳುತ್ತಿದ್ದ ಮೈತ್ರಿಕೂಟವನ್ನು ಮೂರನೇ ಸ್ಥಾನಕ್ಕೆ ತಳ್ಳಿವೆ.

630 ಸೀಟುಗಳಿರುವ ಪಾರ್ಲಿಮೆಂಟಿನಲ್ಲಿ ತೀವ್ರ ವಲಸೆ ವಿರೋಧಿ ನೀತಿ ಹೊಂದಿರುವ ನಾರ್ಥನ್ ಲೀಗ್(ಲೆಗಾನಾರ್ಡ್) ನಾಯಕತ್ವದ ಉಗ್ರ ಬಲಪಂಥೀಯ ಮೈತ್ರಿಕೂಟ ಅತಿ ಹೆಚ್ಚು (ಶೇ.37 ರಷ್ಟು) ಮತಗಳಿಸಿ, 265 ಸೀಟುಗಳನ್ನು ಗಳಿಸಿದೆ. ಫೈವ್‌ಸ್ಟಾರ್ ಮೂವ್‌ಮೆಂಟ್(ಎಂಎಸ್5) ಎರಡನೆಯ ಅತಿದೊಡ್ಡ ಗುಂಪಾಗಿ ಶೇ. 32.6 ರಷ್ಟು ಮತಗಳನ್ನು ಗಳಿಸಿ, 227 ಸೀಟು ಗಳಿಸಿದೆ. ಆಡಳಿತರೂಢ ಡೆಮಾಕ್ರೆಟಿಕ್ ಪಕ್ಷದ ನಾಯಕತ್ವದ ನಡು–ಎಡ ಪಂಥೀಯ ಕೂಟ ಶೇ. 22.7 ರಷ್ಟು ಮತಗಳಿಸಿ, ಕೇವಲ 122 ಸೀಟು ಗಳಿಸಿ ಭಾರೀ ಹಿನ್ನಡೆ ಹೊಂದಿದೆ. ಇದರಿಂದಾಗಿ ಅತಂತ್ರ ಪಾರ್ಲಿಮೆಂಟ್ ಸೃಷ್ಟಿಯಾಗಿ, ಪರಿಸ್ಥಿತಿ ಗೊಂದಲಮಯಗೊಂಡಿದೆ. ಆದಾಗ್ಯೂ, ಯಾರು–ಯಾರೊಂದಿಗೆ ಮೈತ್ರಿ ಏರ್ಪಡಿಸಿಕೊಂಡು ಸರಕಾರ ರಚಿಸುತ್ತಾರೋ ಕಾಯ್ದು ನೋಡಬೇಕಾಗಿದೆ.



ಸರ್ಕಾರ ರಚನೆ :

ಮೂರು ಗುಂಪುಗಳಲ್ಲಿ – ಯಾವ ಎರಡು ಮೈತ್ರಿಕೂಟಗಳು ಸೇರಿಕೊಂಡು ಬಹುಮತ ಸಾಬೀತು ಪಡಿಸಿ ಸರ್ಕಾರ ರಚಿಸಲು ಸಜ್ಜುಗೊಳ್ಳುತ್ತಾರೆ ಎಂಬುದು ಅಧ್ಯಕ್ಷ ಪೆರ್ಗಿಯೋ ಮ್ಯಾಟ್ಟೆರೆಲ್ಲೊರ ನಿರ್ಧಾರದ ಮೇಲೆ ನಿಂತಿದೆ ಎಂದು ರಾಜಕೀಯ ವಿಶ್ಲೇಷಕರ ಅಭಿಪ್ರಾಯವಾಗಿದೆ.

ಒಂದು ಮೈತ್ರಿಕೂಟವು ಮತ್ತೊಂದರ ಮೇಲೆ ಸವಾರಿ ಮಾಡುವ ತಯಾರಿಯಲ್ಲಿ ನಿರತರಾಗಿವೆ. ಸರ್ಕಾರ ರಚನೆಗೆ ಸಂಬಂಧಿಸಿದಂತೆ ಅಸ್ಪಷ್ಟತೆ ಮುಂದುವರಿದಿದೆ. ಆದಾಗ್ಯೂ ಉಗ್ರ ಬಲಪಂಥೀಯ ಒಕ್ಕೂಟವು ಹೆಚ್ಚು ಶೇಕಡವಾರು ಮತಗಳಿಸಿರುವುದರಿಂದ ಸಮ್ಮಿಶ್ರ ಸರಕಾರವನ್ನು ರಚಿಸಲು ನಾವೇ ಸೂಕ್ತವೆಂದು ನಾರ್ಥನ್ ಲೀಗ್ ಪಕ್ಷದ ನೇತೃತ್ವ ವಹಿಸಿರುವ ಮ್ಯಾಟೋ ಸಲ್ವಿನಿ ಯವರು ಮಿಲನ್ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಅದೇ ರೀತಿಯಾಗಿ ಎಂ.ಎಸ್5 ನ ಮುಖ್ಯಸ್ಥರಾದ ಲುಯಿಗಿ ಡಿ. ಮೇಯೋ ರವರು ಕೂಡ, ಸಮ್ಮಿಶ್ರ ಸರ್ಕಾರ ರಚಿಸಲು ನಾವು ಸಿದ್ಧರಿದ್ದೇವೆ ಎಂಬ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

ಈ ಮಧ್ಯೆ ಇಟಲಿಯಲ್ಲಿನ ಈ ಅತಂತ್ರ ಸ್ಥಿತಿ ಯುರೋಪಿಯನ್ ಒಕ್ಕೂಟ(ಇ.ಯು) ಮತ್ತು ಇದರ ಇನ್ನಿತರ ಸಂಸ್ಥೆಗಳಲ್ಲಿ ಉದ್ವಿಗ್ನತೆಯ ವಾತಾವರಣವನ್ನು ಸೃಷ್ಠಿಮಾಡಿದೆ. ಏಕೆಂದರೆ ಅತಿ ಹೆಚ್ಚು ಮತ ಪಡೆದ ಎರಡು ಕೂಟಗಳು ಯುರೋ ಕೂಟಕ್ಕೆ ವಿರೋಧವಾಗಿರುವಂಥವು. ಜರ್ಮನಿಯಲ್ಲಿಯೂ ಕೂಡ ಇದೇ ರೀತಿ ರಾಜಕೀಯ ಅಂತತಂತ್ರ ಸ್ಥಿತಿ ಕಳೆದ ಒಂದು ತಿಂಗಳಿಂದ ಉಂಟಾಗಿತ್ತು. ಇದೀಗ ಒಂದು ಮಹಾ ಮೈತ್ರಿಕೂಟದೊಂದಿಗೆ ಅಲ್ಲಿ ಪರಿಹಾರ ಕಂಡುಕೊಂಡಂತ್ತಾಗಿದೆ.

ಇಟಲಿಯ ಹಿಂದಿನ ಆಡಳಿತರೂಡ ಡೆಮಾಕ್ರೆಟಿಕ್ ಪಕ್ಷದ ಮ್ಯಾಟ್ಟಿಯೋ ರೇಂಜೀ ನೇತೃತ್ವದಲ್ಲಿ ಯಾವುದೇ ಉಗ್ರಗಾಮಿ ಪಕ್ಷಗಳೊಂದಿಗೆ ಯಾವುದೇ ಮೈತ್ರಿಯನ್ನು ಖಂಡಿತವಾಗಿ ನಿರಾಕರಿಸುತ್ತಾರೆ. ಹಾಗಾಗಿ ವಿರೋಧ ಪಕ್ಷವಾಗಿ ಸಂಸತ್ತಿನಲ್ಲಿ ಕೆಲಸ ಮಾಡುವುದಾಗಿ ಹೇಳಿದೆ. ಆದರೆ, ರಾಜಕೀಯ ವಿಶ್ಲೇಷಕರ ಪ್ರಕಾರ, ಉಗ್ರ ಬಲಪಂಥೀಯ ಪಕ್ಷಗಳನ್ನು ಅಧಿಕಾರದಿಂದ ಹೊರಗಿಡಲು ಎಂ.ಎಸ್5 ಮತ್ತು ರೇಂಜೀಯವರ ಡೆಮಾಕ್ರಾಟಿಕ್ ಪಕ್ಷಗಳ ಕೂಟ ಆಗಬೇಕು ಆಶಾಭಾವನೆ ವ್ಯಕ್ತಪಡಿಸುತ್ತಿದ್ದಾರೆ. ಆದರೆ, ಇಂತಹ ಮೈತ್ರಿಯ ಕ್ರಮವನ್ನು ರೇಂಜೀ ಯವರು ಒಪ್ಪಲಾರರು ಎಂಬ ಅಭಿಪ್ರಾಯವು ಕೂಡ ಬಲವಾಗಿದೆ, ಕಾದು ನೋಡಬೇಕಾಗಿದೆ.

'ಫ್ಯಾಸಿಸಂ' ನ ಅಪಾಯ – ಮರುಕಳಿಸುವ ಸಂಭವ

ಇದೇ ಪೆಬ್ರವರಿ ತಿಂಗಳಲ್ಲಿ ಪ್ಯಾಸಿಸಂನ ಸಂಸ್ಥಾಪಕ 'ಮುಸೊಲಿನಿ'ಯ ಆಧುನಿಕ ಇಟಲಿಯ ಪುನರುಜ್ಜೀವನವನ್ನು ಚಿತ್ರಿಸಿರುವ 'ಐ ಆಮ್ ಬ್ಯಾಕ್' (ನಾನು ಮತ್ತೆ ವಾಪಾಸ್ಸು) ಎಂಬ ಹೊಸ ವಿಡಂಬನಾತ್ಮಕ ಚಿತ್ರ ಬಿಡುಗಡೆ ಆಗಿರುವುದು – ಫ್ಯಾಸಿಸಂ ನ ಮರುಕಳಿಸುವ ಸಂಭವನೀಯತೆಯನ್ನು ಪ್ರತಿಪಾದಿಸುತ್ತದೆ. ಇದನ್ನು ಪುಷ್ಠಿಕರಿಸುವ ಸಾಕ್ಷಿಯಾಗಿ ಕಳೆದ ತಿಂಗಳು ನಾರ್ಥನ್ ಲೀಗ್ ಪಕ್ಷದ 28 ವರ್ಷದ ಸ್ಥಳೀಯ ಅಭ್ಯರ್ಥಿಯಾದ ಲೂಕ ಟ್ರನಿಯವರು, ಮ್ಯಾಕೆರಾಟಾ ನಗರದ ಸುತ್ತಲೂ ತನ್ನ ಕಾರು ಓಡಿಸುತ್ತಾ, ಆಫ್ರಿಕನ್ ಮೂಲದ ಜನರ ಮೇಲೆ ಗುಂಡು ಹಾರಿಸಿದ ಕಾರಣ ಆರು ಜನರು ಗಾಯಗೊಂಡರು. ಇದು ಇಟಲಿ ದೇಶದಲ್ಲಿ ಫ್ಯಾಸಿಸಂ ನ ಪುನರುಜ್ಜೀವನದ ಅಪಾಯವನ್ನು ಎತ್ತಿ ತೋರಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

'ರೋಮ್‌ನಲ್ಲಿ–ಫ್ಯಾಸಿಸಂ ವಿರೋಧಿ ರ್‍ಯಾಲಿ'

ಇಟಲಿಯ ಚುನಾವಣೆಗೆ ಮುನ್ನಾ ದಿನವಾದ ಮಾರ್ಚ್ 4 ರಂದು ದೇಶದಲ್ಲಿ ತೀವ್ರ ಬಲ–ಚಳುವಳಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ 'ರೋಮ್' ನಗರದಲ್ಲಿ ಫ್ಯಾಸಿಸಂ ವಿರೋಧಿಯಾದ ಭಾರೀ ರ್‍ಯಾಲಿಯನ್ನು ಆಯೋಜಿಸಲಾಗಿತ್ತು. ಇಟಾಲಿಯನ್ ವಿಭಜನೆಯ ರಾಷ್ಟ್ರೀಯ ಸಂಘದ ಅಧ್ಯಕ್ಷರಾದ ಕಾರ್ಲಾ ನೆಸ್ಪೋಲೊ ರವರು ಈ ರ್‍ಯಾಲಿಯ ನೇತೃತ್ವ ವಹಿಸಿದ್ದರು. ಇವರ ಪ್ರಕಾರ, "ನಾವು ಫ್ಯಾಸಿಸ್ಟ್ ಗತವೈಭವದ ಹುಸಿಭಾವನೆಯಿಂದ ಬಳಲುತ್ತಿದ್ದೇವೆ. ರಾಷ್ಟ್ರೀಯತೆಯ ಸೋಗಿನಲ್ಲಿ ಪರಕೀಯರ ಬಗ್ಗೆ ದ್ವೇಷ ಭಾವನೆ ಹೊಂದಿದ್ದೇವೆ. ಈ ಭಾವನೆಗಳಿಂದ ಫ್ಯಾಸಿಸಂ ಮರು ಹುಟ್ಟು ಪಡೆಯಬಹುದು. ಇದು ಕೇವಲ ಇಟಾಲಿಯನ್ ರ ಸಮಸ್ಯೆಯಾಗಿರದೆ, ಇಡೀ ಯುರೋಪಿನಲ್ಲಿ ಇತಿಹಾಸದ ಈ ಮರೆವು ಕಾಣಬರುತ್ತಿದೆ. ನವೆಂಬರ್ 11 ರಲ್ಲಿನ ರ್‍ಯಾಲಿಯಲ್ಲಿ, ವಾರ್ಸಾ ಬೀದಿಗಳಲ್ಲಿ ಸುಮಾರು 60,000 ಫ್ಯಾಸಿಸ್ಟರು ಕಾಣಿಸಿಕೊಂಡಿದ್ದಾರೆ. ಫ್ಯಾಸಿಸಂ ಪುನಃ ಹಿಂತಿರುಗುವ ಅಪಾಯದ ಬಗ್ಗೆ ಎಲ್ಲರಲ್ಲಿ ಅರಿವು ಮೂಡಿಸಬೇಕಾಗಿದೆ."

ಇಟಲಿಗೆ ಸೇರ್ಪಡೆಗೊಳ್ಳಲು ಹಂಬಲಿಸಿರುವ ನಿರಾಶ್ರಿತರ ಬಿಕ್ಕಟ್ಟನ್ನು ಈ ಬಲಪಂಥೀಯ ಪಕ್ಷಗಳು ತಮ್ಮ ರಾಷ್ಟ್ರೀಯತವಾದಿ ವಾಕ್ಚಾತುರ್ಯದಿಂದ ಬಳಸಿಕೊಳ್ಳುತ್ತಿದ್ದಾರೆ ಎಂದು ರಾಜಕೀಯ ವಿಶ್ಲೇಷಕರು ವಿಶ್ಲೇಷಿಸುತ್ತಾರೆ. ಇದರ ಕುರಿತಂತೆ ಜನ ಸಾಮಾನ್ಯರು ಎಚ್ಚರಿಕೆಯಿಂದ ಇರಬೇಕೆಂದು ಕಾರ್ಲಾ ನೆಸ್ಪೋಲೊ ರವರು ಕಾಳಜಿ ವ್ಯಕ್ತಪಡಿಸಿದ್ದಾರೆ.

ಏತನ್ಮಧ್ಯೆ, ಎಂ.ಎಸ್ 5 ಪಕ್ಷವು ಕಾರ್ಮಿಕ ಹಕ್ಕುಗಳ ರಕ್ಷಣೆಗೆ ಕೆಲಸ ಮಾಡುವುದಾಗಿ ಚುನಾವಣಾ ಪೂರ್ವ ಭರವಸೆ ನೀಡಿದ ಪರಿಣಾಮವಾಗಿ, ಅಲ್ಲಿನ ಎಡಪಕ್ಷಗಳ ಹೆಚ್ಚಿನ ಮತವನ್ನು ಎಂ.ಎಸ್ 5 ನ ಮೇಯೋ ರವರು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಆದ ಕಾರಣ, ಆಡಳಿತ ರೂಡ ಡೆಮಾಕ್ರಾಟಿಕ್ ಪಾರ್ಟಿಯ ಪತನಕ್ಕೆ ಈ ಅಂಶವು ಪ್ರಮುಖ ಪಾತ್ರ ವಹಿಸಿತ್ತು ಎಂಬುದನ್ನು ಮರೆಯಬಾರದು.

ಒಟ್ಟಾರೆಯಾಗಿ ಇಟಲಿಯ ಚುನಾವಣೆಯಲ್ಲಿ ವಲಸೆಗಾರರ ವಿರೋಧಿ ಅಲೆಗಳು ಮರುಕಳಿಸಿ, ಉಗ್ರ–ಬಲ ಪಂಥೀಯರ ಪ್ರಾಬಲ್ಯ ಮೆರೆದಿದೆ. ಇದು ಫ್ಯಾಸಿಸಂ ನ ಪುನರುಜೀವನಕ್ಕೆ ನಾಂದಿಯಾಗದಿರಲಿ ಎಂದು ಆಶಿಸಬೇಕಷ್ಟೇ.

●

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	G.V.Sriramareddy
	(Whether Citizen of India? If Foreigner, State the Country of Origin)	:	Indian
4.	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
5.	Editor`s Name	:	G.V.Sriramareddy
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I G.V. Srirama reddy, here by declare that the particulars given above are true to the best of my knowledge and belief.

Date : March 25, 2018
Bangalore

Sd/-
G.V. Sriramareddy
Publisher

JANASHAKTHI KANNADA VARA PATRIKE MARCH 19-25, 2018 Price : Rs. 10/- Date of Publication : 16 MARCH 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಆಝಾದ್ ಮೈದಾನದಲ್ಲಿ 'ಲೂಟ್ ವಾಪಸಿ'ಯ ವಿಜಯೋತ್ಸಾಹ

ಕೇಸರಿ ಸರಕಾರವನ್ನು ಮಣಿಸಿದ ಕೆಂಬಾವುಟದ ರೈತರು



ಪುಟ 9 ರಿಂದ

ರೈತರ ದೃಡ ನಿರ್ಧಾರದ ಲಾಂಗ್ ಮಾರ್ಚ್‌ನಿಂದ, ಅದಕ್ಕೆ ದೊರೆತ ವ್ಯಾಪಕ ಜನಬೆಂಬಲದಿಂದ ಮತ್ತು ಶಿವಸೇನೆಯೂ ಸೇರಿದಂತೆ ಎಲ್ಲ ಬಿಜೆಪಿಯೇತರ ಪಕ್ಷಗಳಿಂದಲೂ ದೊರೆತ ವ್ಯಾಪಕ ಬೆಂಬಲ ಮಹಾರಾಷ್ಟ್ರದ ಬಿಜೆಪಿ ಸರಕಾರದ ಮೇಲೆ ವಿಪರೀತ ಒತ್ತಡ ತಂದಿತು. ಮುಖ್ಯಮಂತ್ರಿಗಳೂ ಸೇರಿದಂತೆ ಆರು ಮಂತ್ರಿಗಳು ಜತೆಗೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾದ 12 ಮುಖಂಡರೊಂದಿಗೆ ಮಾತುಕತೆ ಆರಂಭಿಸಿದರು. ಕಾಂಗ್ರೆಸ್, ಎನ್‌ಸಿಪಿ, ಜನತಾದಳ(ಶರದ್ ಯಾದವ್ ಗುಂಪು), ಪಿಡಬ್ಲ್ಯುಪಿ ಮುಖಂಣಡರೂ ಮಾತುಕತೆಗಳಲ್ಲಿ ಹಾಜರಿದ್ದರು.

ಕಿಸಾನ್ ಸಭಾ ನಿಯೋಗದಲ್ಲಿ ಇದ್ದ ಡಾ.ಅಶೋಕ ಧವಳೆ, ಸಿಪಿಐ(ಎಂ) ಶಾಸಕ ಜೆಪಿ ಗವಿತ್, ಮಾಜಿ ಸಿಪಿಐ(ಎಂ) ಶಾಸಕ ನರಸಯ್ಯ ಅದಮ್, ಡಾ.ಅಜಿತ್ ನವಳೆ, ಕಿಸನ್ ಗುಜರ್ ಸೇರಿದಂತೆ 12 ಮಂದಿಯೂ ಈ ಲಾಂಗ್ ಮಾರ್ಚ್‌ನಲ್ಲಿ ನಡೆದು ಬಂದವರು. ಮೇಲೆ ಹೇಳಿದಂತೆ ಹಿಂದಿನ ಕಹಿ ಅನುಭವಗಳ ಹಿನ್ನೆಲೆಯಲ್ಲಿ ಆರಂಭದಲ್ಲೇ ಲಿಖಿತ ಆಶ್ವಾಸನೆಗಳಿಲ್ಲದೆ ವಿಧಾನ ಸಭೆ ಮುತ್ತಿಗೆಯ ಹೋರಾಟವನ್ನು ಹಿಂತೆಗೆದುಕೊಳ್ಳುವದಿಲ್ಲ ಎಂದು ಇವರು ಸ್ಪಷ್ಟಪಡಿಸಿದರು. ಸುಮಾರು ಮೂರು ಗಂಟೆಗಳ ಮಾತುಕತೆಗಳ ನಂತರ ಸರಕಾರ ಸುಮಾರಾಗಿ ಎಲ್ಲ ಬೇಡಿಕೆಗಳನ್ನು ಒಪ್ಪಿಕೊಂಡಿತು. ನಂತರ ಒಂದು ಗಂಟೆಯೊಳಗೆ ಸರಕಾರದ ಮುಖ್ಯ ಕಾರ್ಯದರ್ಶಿಯ ಸಹಿಯಿದ್ದ ಪತ್ರವನ್ನು ಕಿಸಾನ್ ಸಭಾ ಮುಖಂಡರಿಗೆ ಕೊಡಲಾಯಿತು.

ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿ, ನಾಶಿಕ್, ಪಾಲ್ಘರ್ ಮತ್ತು ಥಾಣೆ ಜಿಲ್ಲೆಯ ಆದಿವಾಸಿ ರೈತರ ಹಿತಗಳಿಗೆ ಪ್ರತಿಕೂಲಕರವಾದ ನದಿ ಜೋಡಣೆಯ ಪ್ರಸ್ತಾವದ ಮರುಪರಿಶೀಲನೆ, ಸಾಲ ಮನ್ನಾ, ರೈತರ ಬೆಳೆಗಳಿಗೆ ಫಲದಾಯಕ ಬೆಲೆಗಳು, ದೇವಸ್ಥಾನಗಳ ಜಮೀನು, ಹುಲ್ಲುಗಾವಲುಗಳು, ಪೆನ್ಶನ್, ಪಡಿತರ ವ್ಯವಸ್ಥೆ , ವಿದರ್ಭ ಮತ್ತು ಮರಾಠವಾಡ ಪ್ರದೇಶಗಳಲ್ಲಿ ಹುಳು ಬಾಧೆಯಿಂದ ಮತ್ತಿತರ ಕಾರಣಗಳಿಂದ ರೈತರಿಗಾಗಿರುವ ಹಾನಿಗಳಿಗೆ ಪರಿಹಾರ ಮುಂತಾದ ವಿಷಯಗಳ ಮೇಲೆ ಸರಕಾರ ನಿರ್ದಿಷ್ಟ ಆಶ್ವಾಸನೆಗಳನ್ನು ನೀಡಿತು.

ನಂತರ ಆಝಾದ್ ಮೈದಾನದ ವೇದಿಕೆಗೆ ಬಂದ ಮುಖಂಡರುಗಳು ಸರಕಾರದ ಆಶ್ವಾಸನೆಗಳ ಬಗ್ಗೆ ರೈತರಿಗೆ ತಿಳಿಸಿದರು. ಏಳುದಿನಗಳ ದೀರ್ಘ ಪಯಣದ ನಂತರ ದಣಿವಾರಿಸಿಕೊಳ್ಳುತ್ತ ಮುಂದಿನ ಹೋರಾಟಕ್ಕೆ ಸಿದ್ಧರಾಗಿ ಕುಳಿತಿದ್ದ 50,000 ರೈತರ ಹರ್ಷೋದ್ಗಾರ ಇಡೀ ಮೈದಾನದಲ್ಲಿ ಮಾರ್ದನಿಗೊಂಡಿತು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಎಐಕೆಎಸ್‌ನ ಹಿಂದಿನ ಅಧ್ಯಕ್ಷ ಹಾಗೂ ರಾಜಸ್ತಾನದ ಪ್ರಸಿದ್ಧ ರೈತ ಮುಖಂಡ ಆಮ್ರ ರಾಮ್, ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ, ಸಿಐಟಿಯು ರಾಜ್ಯ ಅಧ್ಯಕ್ಷ ಡಿ.ಎಲ್. ಕರಾಡೆ ಮತ್ತಿತರ ಸಾಮೂಹಿಕ ಸಂಘಟನೆಗಳ ಮುಖಂಡರು ಮಹಾರಾಷ್ಟ್ರದ ರೈತರನ್ನು ಈ ಐತಿಹಾಸಿಕ ವಿಜಯಕ್ಕೆ ಅಭಿನಂದಿಸಿದರು.

"ನಾನು 4 ಎಕರೆ ಜಮೀನಲ್ಲಿ ಬೇಸಾಯ ಮಾಡುತ್ತಿದ್ದೇನೆ. ಆದರೆ ಅದು ನನ್ನ ಹೆಸರಲ್ಲಿಲ್ಲ. ಈಗೊಂದು ಒಳ್ಳೆಯ ನಿರ್ಧಾರ ಬಂದಿದೆ. ಅದು ಲಿಖಿತವಾಗಿ ಬಂದಿದೆ ಎಂಬುದು ಬಹಳ ಮಹತ್ವದ್ದು" ಎಂದರು 57 ವರ್ಷದ ಬುಡಕಟ್ಟು ರೈತ ಮಾಲೇಕರ್. "ನಾನು ಹಲವು ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದೇನೆ. ಆದರೆ ಮೊದಲ ಬಾರಿಗೆ ಕಾಗದದ ಮೇಲೆ ನಮಗೆ ಆಶ್ವಾಸನೆ ಸಿಕ್ಕಿದೆ" ಎಂದ 40 ವರ್ಷದ ನಾಶಿಕ್‌ನ ರೈತ ರಾಮು ಭೋಯೆ ಮುಖದಲ್ಲೂ ವಿಜಯದ ನಗು ಇತ್ತು.



"ಸರಕಾರ ನಮ್ಮ ಹಿಂದಿನ ತಲೆಮಾರುಗಳನ್ನು ಶೋಷಿಸಿತ್ತು, ಲೂಟಿ ಮಾಡಿತ್ತು. ಈ ಸಾಲಮನ್ನಾ ವಾಸ್ತವವಾಗಿ ಒಂದು ಲೂಟ್-ವಾಪಸಿ. ಅದರ ಮೊದಲ ಕಂತು ನಮಗೆ ಸಿಗುತ್ತಿದೆ" ಎಂದರು ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಮತ್ತು ಈ ಹೋರಾಟದ ಒಬ್ಬ ಪ್ರಮುಖ ರೂವಾರಿ ಡಾ. ಅಜಿತ್ ನವಳೆ.




"ಒಂದು ಕದನ ಗೆದ್ದಿದ್ದೇವೆ, ಆದರೆ ಯುದ್ಧ ಇನ್ನೂ ಮುಗಿದಿಲ್ಲ. ಈ ಕದನದಲ್ಲಿ ವಿಜಯದ ನಂತರ ಈ ಯುದ್ಧದಲ್ಲಿ ಇನ್ನಷ್ಟು ದೃಢವಿಶ್ವಾಸದೊಂದಿಗೆ ದೇಶಾದ್ಯಂತ ಹೋರಾಡುತ್ತೇವೆ" ಎಂದಿದ್ದಾರೆ ಮತ್ತೊಬ್ಬ ರೂವಾರಿ ಡಾ. ಅಶೋಕ ಧವಳೆ.

ಈ ಮೊದಲು ಕಿಸಾನ್ ಸಭಾ ನಿಯೋಗ ಸರಕಾರದೊಡನೆ ಮಾತುಕತೆ ನಡೆಯುತ್ತಿದ್ದಾಗ ಏಳುದಿನಗಳ ಕಾಲ ಸುಮಾರು 200 ಕಿ.ಮಿ. ನಡೆದು ಬಂದ ಮುಂದಿನ ಕಾರ್ಯಾಚರಣೆಗೆ ಸಜ್ಜಾಗಿ ಕೂತಿದ್ದ ಸಾವಿರಾರು ರೈತರನ್ನು ಕಾಣಲಿಕ್ಕೆಂದೇ ದಿಲ್ಲಿಯಿಂದ ಧಾವಿಸಿ ಬಂದಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೆಲವೇ ಕಾರ್ಪೊರೇಟ್ ಕುಳಗಳಿಗೆ ಸುಮಾರು ಎರಡೂವರೆ ಲಕ್ಷ ಕೋಟಿ ರೂ.ಗಳ ಸಾಲಮನ್ನಾ ಸದ್ದಿಲ್ಲದೆ ಮಾಡಿದ್ದರೂ, ಕೋಟ್ಯಂತರ ಬಡ ರೈತರ ಸಾಲಮನ್ನಾ ಮಾಡಲು ದುಡ್ಡಿಲ್ಲ ಎನ್ನುವ ಮೋದಿ ಸರಕಾರದ ಧೋರಣೆಗಳ ರೈತ-ವಿರೋಧಿ ಸ್ವರೂಪವನ್ನು ಬಯಲಿಗೆಳೆದಿದ್ದರು. ರೈತರ ಆತ್ಮಹತ್ಯೆಗಳನ್ನು ನಿಲ್ಲಿಸುವ ವರೆಗೂ ಹೋರಾಟ ಮುಂದುವರೆಯುತ್ತದೆ. ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳದಿದ್ದರೆ, ಅವರು ರಾಜ್ಯ ಮತ್ತು ಕೇಂದ್ರ ಸರಕಾರಗಳನ್ನು ನಡುಗಿಸಿ ಬಿಡುತ್ತಾರೆ, ಈ ಸರಕಾರಗಳನ್ನು ಕಿತ್ತು ತಮಗಾಗಿ ಕೆಲಸ ಮಾಡುವ ಸರಕಾರಗಳನ್ನು ಸ್ಥಾಪಿಸುತ್ತಾರೆ ಎಂದರು ಯೆಚುರಿ.



ಕಿಸಾನ್ ಲಾಂಗ್ ಮಾರ್ಚ್-ಕಲಾವಿದರು ಕಂಡಂತೆ








ರೈತರು ಮುಂದೆ ಸಾಗುತ್ತಿರುವಾಗ.... ನಾವು ಆ ಸಂಖ್ಯೆಯಲ್ಲಿ ಇರಬುಸುತ್ತೇವೆ



ರೈತರು ಸಾಗಿದ್ದಾರೆ







ನೀನು ಹೂವನ್ನು ಕೀಳಬಹುದು, ಆದರೆ ವಸಂತದ ಆಗಮನವನ್ನು ತಡೆಯಲಾರೆ
–ಪಾಬ್ಲೊ ನೆರುದ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**